ಮಹಾಲಿಂಗ ಮಂಗಿಯವರ ಕಾವ್ಯದ ಅಧ್ಯಯನ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

-: ಸಂಶೋಧಕರು :-

ಕು.ದೀಪಾ ಸುಭಾಸ ಗುರವ

ಸರಕಾರಿ ಪ್ರಥಮ ದರ್ಜೆ ಕಾಲೇಜು, ತೇರದಾಳ.

ತಾ||ಜಮಖಂಡಿ ಜಿ||ಬಾಗಲಕೋಟೆ

ಮಾರ್ಗದರ್ಶಕರು

ಡಾ. ಅಶೋಕ. ಎಮ್. ನರೋಡೆ

ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,

ಮಹಾಲಿಂಗಪೂರ, ಜಿ. ಬಾಗಲಕೋಟೆ

942

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ

೨೦೧೨

942

AKSHARA GRANTHALAYA

ACC.NO.048751

942

ಮಹಾಲಿಂಗ ಮಂಗಿಯವರ ಕಾವ್ಯದ ಅಧ್ಯಯನ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

–: ಸಂಶೋಧಕರು :–

ಕು.ದೀಪಾ ಸುಭಾಸ ಗುರವ

ಸರಕಾರಿ ಪ್ರಥಮ ದರ್ಜೆ ಕಾಲೇಜು, ತೇರದಾಳ.

ತಾ॥ಜಮಖಂಡಿ ಜಿ॥ಬಾಗಲಕೋಟ

ಮಾರ್ಗದರ್ಶಕರು

ಡಾ. ಅಶೋಕ. ಎಮ್. ನರೋಡೆ

ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,

ಮಹಾಲಿಂಗಪೂರ. ಜಿ. ಬಾಗಲಕೋಟ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ, ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೨

840.9
DEE ಶ್ರೀ

48751

ಗ್ರಂಥಭಂಡಾರ ಅಗದ.

ಪ್ರಮಾಣ ಪತ್ರ

'ಮಹಾಲಿಂಗ ಮಂಗಿಯವರ ಕಾವ್ಯದ ಅಧ್ಯಯನ' ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. ಅಶೋಕ ಎಮ್. ನರೋಡೆ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಕನ್ನಡ** ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇದನ್ನು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :

ಕು. ದೀಪಾ ಸುಭಾಸ ಗುರವ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಕು. ದೀಪಾ ಸುಭಾಸ ಗುರವ ಇವರು 'ಮಹಾಲಿಂಗ ಮಂಗಿಯವರ ಕಾವ್ಯದ ಅಧ್ಯಯನ' ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಕನ್ನಡ** ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :

ಡಾ. ಅಶೋಕ ಎಮ್. ನರೋಡೆ
ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ
ಪದವಿ ಮಹಾವಿದ್ಯಾಲಯ,
ಮಹಾಲಿಂಗಪೂರ. ಜಿ. ಬಾಗಲಕೋಟ

ಅರಿಕೆ

ನಾನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೇರದಾಳದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿದ್ದು, ಎಂ.ಫಿಲ್. ಪದವಿ ಪಡೆಯಲು ಪ್ರೇರಣಾ ಶಕ್ತಿಯಾಗಿ ಮಾರ್ಗದರ್ಶನ ನೀಡಿ ನಿಬಂಧ ರೂಪಿಸಲು ಸಹಕರಿಸಿದ ಡಾ॥ ಅಶೋಕ ಎಮ್. ನರೋಡೆಯವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಉನ್ನತ ವ್ಯಾಸಂಗಕ್ಕೆ ಪ್ರೇರಣೆಯನ್ನು ನೀಡಿ ಏನೇ ಸಮಸ್ಯೆಗಳು ಬಂದರೂ ಎದೆಗುಂದದೆ ಅವುಗಳನ್ನು ಎದುರಿಸಿ ಮುನ್ನಡೆಯಲು ಆತ್ಮಸ್ಥೈರ್ಯವನ್ನು ತುಂಬಿದ ಸಂಶೋಧನಾ ಕೇಂದ್ರದ ಸಂಯೋಜಕರಾದ ಡಾ॥ ವ್ಹಿ. ಎಸ್. ಮಾಳಿ ಗುರುಗಳಿಗೆ ನಾನು ಚಿರಋಣಿಯಾಗಿದ್ದೇನೆ. ಹಾಗೂ ನನ್ನ ಈ ನಿಬಂಧದ ಕಾರ್ಯದಲ್ಲಿ ಸಹಾಯ ಸಹಕಾರ ನೀಡಿದ ಶ್ರೀ ಶಂಕರ ಟಿ. ಗಟ್ಟನಟ್ಟಿ ಗುರುಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಸದಾ ನನ್ನ ಶ್ರೇಯೋಭಿವೃದ್ಧಿಯನ್ನು ಬಯಸಿ ನನ್ನನ್ನು ಇಲ್ಲಿಯವರೆಗೆ ಕಷ್ಟದಲ್ಲಿ ಇಷ್ಟಪಟ್ಟು ಓದಿಸಿದ ನನ್ನ ತಂದೆ ಸುಭಾಷ ಮತ್ತು ತಾಯಿ ಸೇವಂತಿ ಮತ್ತು ನನ್ನ ಸೋದರ ಮಾವನವರಾದ ರಾಮು, ಶಂಕರ, ಗಜಾನನ ಮತ್ತು ನನ್ನ ಸಹೋದರರಾದ ಕಲ್ಮೇಶ, ವಿಶ್ವನಾಥ ಇವರೆಲ್ಲರಿಗೂ ನನ್ನ ತುಂಬು ಹೃದಯದಿಂದ ಸ್ಮರಿಸುತ್ತೇನೆ.

ನನ್ನ ನಿಬಂಧದ ಕಾರ್ಯದಲ್ಲಿ ಸಹಾಯ - ಸಹಕಾರ ನೀಡಿದ ನನ್ನ ಮಾವನ ಮಕ್ಕಳಾದ ಸುಮನ, ವಿಶಾಲ, ವಿನಯ ಹಾಗೂ ನನ್ನ ಸ್ನೇಹಿತೆಯರಾದ ಸ್ವಪ್ನಾ ಬಣಜವಾಡ ಇವರಿಗೂ ನನ್ನ ಕೃತಜ್ಞತೆಗಳು.

ವೃಷಭೇಂದ್ರ ಕಾಲೇಜಿನ ಸಿಬ್ಬಂದಿ ವರ್ಗದವರಿಗೆ ವಂದನೆಗಳು. ಸಂಶೋಧನಾ ಕೇಂದ್ರದ ರೂವಾರಿಯಾದ ಶ್ರೀ ಬಿ. ಆರ್. ದರೂರ ಅವರನ್ನು ಸದಾಕಾಲವು ಸ್ಮರಿಸುವೆನು. ಅದರಂತೆ ಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ನಮ್ಮ ಕಾಲೇಜಿನ ಹಳೆ ವಿದ್ಯಾರ್ಥಿಯಾದ ಮುರಗೇಶ ಕೌಲಾಪುರ ಅವರಿಗೆ ವಂದನೆಗಳು.

ದಿ :

ಕು. ದೀಪಾ ಸುಭಾಸ ಗುರವ
ಸರಕಾರಿ ಪ್ರಥಮ ದರ್ಜೆ ಕಾಲೇಜು,
ತೇರದಾಳ.
ತಾ॥ ಜಮಖಂಡಿ ಜಿ॥ ಬಾಗಲಕೋಟ

ಪರಿವಿಡಿ

[illegible]

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧.೧ ಅಧ್ಯಯನದ ಉದ್ದೇಶ :

"ಚೆಂದುಳ್ಳ ಅರಭಾಂವಿ ಶಿಂಧಿಯ ಕುರುಬೇಟ
ಹೊಂದಿತ್ತೈತೆವ್ವ ತಡಸಲ । ಮಹಾಲಿಂಗಪ್ಪಗ
ಹೊಂದಿಸಿ ಕೈಯ ಮುಗಿದೇನ"[೧]

"ನಾಡ ಒಳ್ಳೇದ ನನ್ನ ಚೆಂದುಳ್ಳ ಗೋಕಾವಿ"[೨]

ಗೋಕಾವಿ, ಗೋಕಾಕ ನಾಡಿನ ನೆಲ ಜಲ ತುಂಬ ಸತ್ವಪೂರ್ಣವೆಂಬ ಪ್ರತೀತಿ! ಪ್ರವಾಸಿತಾಣ ನಿಸರ್ಗ ಸೌಂದರ್ಯದ ರುದ್ರರಮಣೀಯ ಘಟಪ್ರಭಾ ಮತ್ತು ಮಾರ್ಕಂಡೆಯ ಜಲಪಾತಗಳು ಪುರಾತನ ಶಿಲ್ಪಕಲಾ ದೇಗುಲಗಳು, ಪಂಚಪೀಠಗಳು, ನದಿ ಸಂಗಮಗಳು, ಸಾಹಿತ್ಯ, ಜಾನಪದ ರಂಗಕಲೆ, ಸಂಸ್ಕೃತಿ ಜಿನಗಾರಿಕೆ ಶತಮಾನ ಕಂಡ ಹತ್ತಿ ನೂಲಿನ ಗಿರಣಿ, ಸಿಹಿ ಖಾದ್ಯ ಕರದಂಟು, ಲಡಕಿ ಉಂಡಿಗಳು ಮುಂತಾದವುಗಳಿಗೆ ಇದು ಪ್ರಸಿದ್ಧವಾಗಿದೆ.

ಪಾರಿಜಾತ ಖ್ಯಾತಿಯ ಕುಲಗೋಡ ತಮ್ಮಣ್ಣ, ಜಾನಪದ ರಂಗನಾಯಕಿ ಕೌಜಲಗಿ ನಿಂಗಮ್ಮ, ಲಾವಣಿಕಾರ ಸಾತೋಕ್ಯಾಮಣ್ಣ ನೂರಾರು ಸಾವಿರಾರು ಜನಪದ ಕವಿಗಳು, ಲಾವಣಿಕಾರರು, ನಾಟಕಕಾರರು, ಡೊಳ್ಳಿನ ಪದಕಾರರು, ಕರ್ಬಲ ದಟ್ಟಿ, ವೀರಗಾಸೆ ಕುಣಿತದವರು, ಪದಕಟ್ಟಿ ಹಾಡಿದ ಗರತಿಯರು, ದಾರ್ಶನಿಕರು, ಯೋಗಿಗಳು ಮುಂತಾದವರು ಈ ನೆಲದಲ್ಲಿ ಉದಯಿಸಿ ಸಂಸ್ಕೃತಿಯ ಬೆಳಕನ್ನು ಇಲ್ಲಿ ಬೆಳಗಿಸಿದ್ದಾರೆ[೩].

ಕರ್ನಾಟಕ ವಿ.ವಿ. ಶಿಲ್ಪಿ ರ್‍ಯಾಂಗ್ಲರ ಡಾ. ಡಿ. ಸಿ. ಪಾವಟೆ, ಶ್ರೀ ಸಿ. ಚ. ನಂದಿಮಠ, ಕವಿ ನಾಟಕಕಾರ ಕುಲಪತಿಯಾದ ಡಾ. ಚಂದ್ರಶೇಖರ ಕಂಬಾರ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ರೂವಾರಿಯಾದ ಡಾ. ಎಸ್. ಬಿ. ದಂಡಿನ, ಅಂತರರಾಷ್ಟ್ರೀಯ ಖ್ಯಾತಿಯ ಚಿತ್ರಗಾರರಾದ ಶ್ರೀ ಭೀಮರಾವ ಮುರಗೋಡ ಮುಂತಾದವರು ಇದೇ ಮಣ್ಣಿನಲ್ಲಿ ಆಡಿ–ಹಾಡಿ ನುಡಿಗಲಿತು ಬೆಳೆದವರು. ಸಾಹಿತ್ಯ

ದಿಗ್ಗಜರಾದ ಕವಿಭೂಷಣ ಬೆಟಗೇರಿ ಕೃಷ್ಣಶರ್ಮ, ಕಾದಂಬರಿ ಶ್ರೀ ಕೃಷ್ಣ ಮೂರ್ತಿ ಪುರಾಣಿಕ, ಪ್ರಗತಿಶೀಲ ಸಾಹಿತ್ಯದ ಹರಿಕಾರರಾದ ಶ್ರೀ ಬಸವರಾಜ ಕಟ್ಟಿಮನಿ, ಘನವಿದ್ವಾಂಸರಾದ ಪ್ರೊ. ಕೆ. ಜಿ. ಕುಂದಣಗಾರ, ಕಲಾಶ್ರೀ ನಿಂಗಯ್ಯಸ್ವಾಮಿ ಪೂಜಾರ, ಸಂಗೀತ ಶ್ರೀ ಈಶ್ವರಪ್ಪ ಜಿ. ಮಿಣಚಿ, ದಿಟ್ಟ ಪತ್ರಕರ್ತರಾದ ಶ್ರೀ ಕಾ. ಬಿ. ಎನ್. ಧಾರವಾಡಕರ, ವೃತ್ತಿ ರಂಗಭೂಮಿಯಲ್ಲಿ ಪಿತಾಮಹರಾದ ಶಿವಮೂರ್ತಿಸ್ವಾಮಿ ಕಣಬರಗಿಮಠ, ರಂಗದಿಗ್ಗಜ ಹೊಸಮನಿ ಬಂಧುಗಳು ಪ್ರಾತಃ ಸ್ಮರಣೀಯರೂ ಕೂಡಾ ಇದೇ ಮಣ್ಣಿನಲ್ಲಿ ಮೂಡಿ ಬಂದು ನೆಲದ ನಕ್ಷತ್ರಗಳಾಗಿದ್ದಾರೆ.

೧.೨ ಅಧ್ಯಯನದ ಸ್ವರೂಪ :

ಅದೇ ಸಾಹಿತ್ಯ ಸಂಸ್ಕೃತಿಯ ದಿವ್ಯ ಪರಂಪರೆಯಲ್ಲಿ ಹೊಸ ತಲೆಮಾರಿನ ಡಾ. ಶ್ರೀರಾಮ ಇಟ್ಟಣ್ಣನವರ, ಡಾ. ನಿಂಗಣ್ಣ ಸಣ್ಣಕ್ಕಿ, ಡಾ. ಎಸ್. ಬಿ. ತೋಟದ, ಶ್ರೀ ಬಾಳೇಶ ಲಕ್ಷೆಟ್ಟಿ, ಪ್ರೊ. ಚಂದ್ರಶೇಖರ ಅಕ್ಕಿ, ಶ್ರೀ ಮಹಾಲಿಂಗ ಮಂಗಿ ಮುಂತಾದವರು ನಾಡಿನ ಹಿರಿಮೆ ಗರಿಮೆ ಮುಂದುವರೆಸಿಕೊಂಡು ಬಂದಿದ್ದಾರೆ.

ಗೋಕಾಕ ಪರಿಸರದಲ್ಲಿ ಹಲವಾರು ವ್ಯಕ್ತಿಗಳು ವಿಷಯಗಳಿದ್ದರೂ ಪ್ರಗತಿಶೀಲ ಸಾಹಿತಿ, ಕಾರ್ಮಿಕ ಕವಿ 'ಮಹಾಲಿಂಗಮಂಗಿ' ಅವರ ಕಾವ್ಯವನ್ನೇ ನನ್ನ ಅಧ್ಯಯನದ ವಿಷಯವಾಗಿ ಆರಿಸಿಕೊಳ್ಳಲು ಕಾರಣವಾಯಿತು. ಇವರು ಯಾವ ಶಾಲೆ, ಕಾಲೇಜು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಅಲ್ಲ. ಇವರು ಹಿಂದುಳಿದ ವರ್ಗದ ಸಾಮಾನ್ಯ ಕೂಲಿ ಕಾರ್ಮಿಕರಾಗಿ ಅವರ ಸಾಹಿತ್ಯ ಸಾಧನೆಗಳು, ನನ್ನ ಗಮನ ಸೆಳೆದವು.

ನಾನು ಎಂ.ಫಿಲ್ ಮಾಡುವ ಉದ್ದೇಶದಿಂದ ಒಂದು ಸೂಕ್ತ ವ್ಯಕ್ತಿ ವಿಷಯದ ಅಧ್ಯಯನಕ್ಕಾಗಿ ಹುಡುಕಾಡುವಾಗ, ಹಾರೂಗೇರಿಯ ನಾಡಿನ ಖ್ಯಾತ ವಿದ್ವಾಂಸ ವಿಮರ್ಶಕರು ಆದ ಡಾ. ವ್ಹಿ. ಎಸ್. ಮಾಳಿಯವರನ್ನು ಸಹಜವಾಗಿ ಕಂಡು ಸಾಧ್ಯವಾದ ಸಲಹೆ ಸಮಾಲೋಚನೆ ಪಡೆಯಲು ಹೋಗಿದ್ದೆ. ಅವರ ಟೇಬಲ್ ಮೇಲೆ ಇದ್ದ ನಾಲ್ಕೈದು ಪುಸ್ತಕಗಳು ನನ್ನ ಗಮನ ಸೆಳೆದವು. ಅವು ಮಹಾಲಿಂಗಮಂಗಿಯವರ ಸಮಗ್ರ ಕಥಾ ಸಂಕಲನ. "ಮುತ್ತಿನ ತೋರಣ", "ಸಮಸ್ಯೆಯ ಸುಳಿಯಲ್ಲಿ ಭಾರತೀಯ ಜವಳಿ" ಮುಂತಾದವುಗಳು ವಿಶೇಷ ಗಮನ ಸೆಳೆದವು. ನಾನು ಎಂ.ಫಿಲ್‌ಗಾಗಿ ಅರಸುವ ಬಳ್ಳಿ ಕಾಲ್ತೊಡಕಿದಂತಾಯಿತು ಎಂಬಂತೆ ಡಾ. ಮಾಳಿಯವರು ಗ್ರಂಥಕರ್ತರ ಕುರಿತು ಕಿರು ಪರಿಚಯವನ್ನು ನೀಡಿದರು[೪].

"ಮಹಾಲಿಂಗ ಮಂಗಿ ನಮ್ಮವರು, ಬೆಳಗಾವಿ ಜಿಲ್ಲೆಯವರು ಕವಿ ಸಾಹಿತಿಯಾಗಿ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ೬೦ ಕ್ಕೂ ಅಧಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೭ ಕವನ ಸಂಕಲನ, ೮ ಕಥಾ

[illegible]

ಸಂಕಲನ, ೮ ನಾಟಕ, ೫ ಕಾದಂಬರಿ, ೧೦ ಜೀವನ ಚರಿತ್ರೆ ಹೀಗೆ ಇತ್ತೀಚೆಗಷ್ಟೇ ಒಂದೇ ಸಲ ಅವರ ೧೬ ಸಾಹಿತ್ಯ ಕೃತಿಗಳು ಬಿಡುಗಡೆಯಾಗಿದ್ದು ಒಂದು ದಾಖಲೆಯೇ ಸರಿ. ಅವರು ನಾಡಿನ ಪ್ರಗತಿಶೀಲ ಕವಿ ಕತೆಗಾರ ಚಿಂತಕ ಮಾತ್ರವಲ್ಲ ಅವರು ಒಳ್ಳೆಯ ರಂಗ ಕಲಾವಿದ, ನಾಟಕಕಾರ, ಪತ್ರಕರ್ತ, ಸಾಮಾಜಿಕ ಕಾರ್ಯಕತ್ರ, ಹೋರಾಟಗಾರ, ಸಂಘಟಕರೂ ಕೂಡಾ ಆಗಿದ್ದರು. ನಾಲ್ಕು ದಶಕಗಳಿಂದ ಪತ್ರಿಕೆಗಳಿಗೆ ಬರೆಯುತ್ತಿದ್ದಾರೆ. ಹೊಸ ತಲೆಮಾರಿನ ಬರಹಗಾರರಲ್ಲಿ ಮಂಗಿಯವರದ್ದು ಗಮನಾರ್ಹ ಸಾಧನೆ.

ಮಹಾಲಿಂಗಮಂಗಿಯವರ ಸಾಹಿತ್ಯ ಸಾಧನೆ :

೧)	ಹಕ್ಕಿಗಳೇಕೆ ಸಾಯುತ್ತಿವೆ?	೨)	ನನ್ನ ನೆಲದ ಭ್ರೂಣಗಳು
೩)	ಕರ್ಮವೀರರ ಹಾಡು	೪)	ಅನುರಾಗ
೫)	ಮೇರಾ ಭಾರತ ಮಹಾನ್	೬)	ದಿಲ್ಲಿ ದೂರವಿಲ್ಲ
೭)	ತಡಸಲ ಮಹಾಲಿಂಗನ ವಚನಗಳು	೮)	ಮುತ್ತಿನ ತೋರಣ (ಸಮಗ್ರ ಕಾವ್ಯ)

ಕವನ ಸಂಕಲನಗಳು.

"ಹಕ್ಕಿಗಳೇಕೆ ಸಾಯುತ್ತಿವೆ, ನನ್ನ ನೆಲದ ಭ್ರೂಣಗಳು, ಕರ್ಮವೀರರ ಹಾಡು ಮತ್ತು ಮೇರಾ ಭಾರತ ಮಹಾನ್" ಇವೆಲ್ಲವುಗಳು ಪ್ರಗತಿಶೀಲ ಬಂಡಾಯ ಮನೋಧರ್ಮದ ಕವನಗಳು, ಸಾಮಾಜಿಕ, ನ್ಯಾಯ, ಜನಪರ ಕಾಳಜಿಯಿಂದ ರಚಿತವಾದ ರೈತ ಕಾರ್ಮಿಕರ ಧ್ವನಿಗೆ ಧ್ವನಿಗೂಡಿಸುವ ಕವನಗಳು.

'ಅನುರಾಗ, ಪ್ರೀತಿ, ಪ್ರೇಮ, ಪ್ರಣಯ, ಸಂವೇದನೆಗೆ, ಮೀಸಲಾದ ಪ್ರೇಮ ಕಾವ್ಯ'. 'ದಿಲ್ಲಿ ದೂರವಿಲ್ಲ' ರಾಜಧಾನಿ ದಿಲ್ಲಿ ಕಂಡ ಕವಿ ಹೃದಯ ಸ್ಪಂದಿಸುವಾಗ ಮೂಡಿದ ಸಂವೇದನೆಗಳು ಅವಸರದಲ್ಲಿ ತಕ್ಷಣ ಹುಟ್ಟಿದ ಅಮೂರ್ತ ಆಶು ಕವಿತೆಗಳು.

'ಅನುರಾಗ ಮತ್ತು ದಿಲ್ಲಿ ದೂರವಿಲ್ಲ' ಬಹುತೇಕ ಹನಿಗವನಗಳು. ಒಂದು ರೀತಿ ವಿನೂತನ ಪ್ರಯೋಗ ಕೂಡ ಎಲ್ಲ ರೀತಿಯ ಕವಿತೆ ಬರೆದು ಕವಿ ವಚನ ಪ್ರಕಾರ ಏಕೆ ಕೈಬಿಡಬೇಕೆಂದು 'ತಡಸಲ ಮಹಾಲಿಂಗನ ವಚನಗಳು' ಎಂಬ ವಚನ ಕಾವ್ಯ ಕೂಡಾ ನೀಡಿದ್ದಾರೆ.

ಕಥಾ ಸಾಹಿತ್ಯ :

ಮಹಾಲಿಂಗ ಮಂಗಿಯವರು ಒಳ್ಳೆಯ ಕಥೆಗಾರರು. ಕಥಾ ರಚನೆಯಲ್ಲಿ ವಿಶೇಷ ಆಸಕ್ತಿ. ಸುಮಾರು ನೂರು ಕಥೆಗಳನ್ನು ಬರೆದಿದ್ದಾರೆ. ರಾಜ್ಯ ಕಥಾ ಸ್ಪರ್ಧೆಯಲ್ಲಿ ಅನೇಕ ಸಲ ಪ್ರಥಮ ಹಾಗೂ

[illegible]

ದ್ವಿತೀಯ ಬಹುಮಾನಗಳನ್ನು ಪಡೆದಿದ್ದಾರೆ. ಅವರ ಸಮಗ್ರ ಕಥಾ ಸಂಕಲನ ಒಳಗೊಂಡಂತೆ ೯ ಸಂಕಲನ ಬಂದಿವೆ. ಹೊಸದಾಗಿ ಮತ್ತೊಂದು ಕಥಾ ಸಂಕಲನ ನೀಡುವ ತಯಾರಿಯಲ್ಲಿ ಇದ್ದಾರೆ. ಬೃಹತ ಗಾತ್ರದ ಪಾತ್ರದಲ್ಲಿ ಮಂಗಿಯವರು ಜೀವನಾನ್ವೇಷಣೆಯ ಕಥಾ ಸಾಹಿತ್ಯ ಕೂಡಾ ಅಮೂಲಾಗ್ರ ಅಧ್ಯಯನಕ್ಕೆ ಒಳಪಡಬೇಕಾಗಿದೆ.

ಕಾದಂಬರಿ :

ಕಾದಂಬರಿ ರಚನೆಯೇ ಬಹುತೇಕ ಸ್ಥಗಿತಗೊಂಡಿರುವ ಸಂದರ್ಭದಲ್ಲಿ ಮಹಾಲಿಂಗಮಂಗಿಯವರು 'ಕುಡಿ ನೆನಪೆಲ್ಲಾ ಕಲ್ಲು ಸಕ್ಕರೆ, ಅನುಗ್ರಹ, ಪ್ರಸ್ಥ, ಮ್ಯಾಚ್ ಫಿಕ್ಸಿಂಗ್'. ೫ ಕಾದಂಬರಿ ನೀಡುವ ಮೂಲಕ ಜಿಲ್ಲೆಯಲ್ಲಿನ ಕಾದಂಬರಿಕಾರರು ಇದ್ದಾರೆ ಎನ್ನುವುದಕ್ಕೆ ನಿದರ್ಶನರಾಗಿದ್ದಾರೆ.

ನಾಟಕ :

ಸುಮಾರು ೮ ನಾಟಕಗಳನ್ನು ರಂಗ ಸಾಹಿತ್ಯಕ್ಕೆ ಕಾಣಿಕೆ ಇಟ್ಟಿದ್ದಾರೆ.

ಜೀವನ ಚರಿತ್ರೆ :

ನೂರಾರು ಸಂದರ್ಶನ ವ್ಯಕ್ತಿ ಚಿತ್ರಣ ಬರೆದು ೩ ಸಂಕಲನ ಪ್ರಕಟಿಸಿದ ಮಹಾಲಿಂಗ ಮಂಗಿಯವರು ೧೦ ಜೀವನ ಚರಿತ್ರೆ ಸಮರ್ಪಿಸಿದ್ದಾರೆ. ವಿಭೂತಿ ಪುರುಷರು, ಸಾಧಕರು, ಸಾಹಿತಿ ಕಲಾವಿದರು, ವಿಜ್ಞಾನಿಗಳು ಹೀಗೆ ಅನೇಕ ದಿಗ್ಗಜರ ಜೀವನ ಚರಿತ್ರೆಯನ್ನು ಮುಂದಿನ ಪೀಳಿಗೆಗೆ ಸ್ಫೂರ್ತಿ ಮಾರ್ಗದರ್ಶಕವಾಗಲಿ ಎಂದು ನೀಡಿದ್ದು ದಾಖಲೆಗಳ ಒಂದು ಮಹಾತ್ಕಾರ್ಯವೇ ಆಗಿದೆ. ನಾನಾ ಕ್ಷೇತ್ರದ ನೂರಾರು ಸಮಕಾಲಿನ ನೆಲದ ನಕ್ಷತ್ರಗಳ ಸಂದರ್ಶನಗಳ ಲೇಖನ ಬರೆದು ಪ್ರಕಟಿಸಿದ್ದು, ಮಂಗಿಯವರು ಸಹೃದಯತೆಗೆ ವಿಶಾಲ ದೃಷ್ಟಿಗೆ ಸಾಕ್ಷಿ. ಸದ್ಗುರು ಮಾಧವಾನಂದರ ಕುರಿತು ೨ ಗ್ರಂಥ ಕೃತಿ ಸಂಪಾದಿಸಿ ಕೊಟ್ಟಿದ್ದಾರೆ.

"ಹೊಂದಿಸಿ ಕೈಯ ಮುಗಿದೇನ" ಮತ್ತು "ಅವಲೋಕನ", ವಿಮರ್ಶಾ ಕೃತಿಗಳು ವೈಚಾರಿಕ ಸಂಶೋಧನಾತ್ಮಕ ಲೇಖನ ಸಂಗ್ರಹಗಳು ಹಲವಾರು. ಅವುಗಳ ಪೈಕಿ ಮುಖ್ಯವಾಗಿ –

೧) **ಕಾರ್ಮಿಕರ ಪುರೋಭಿವೃದ್ಧಿ**

೨) **ಜಾನಪದ ಜೀವನ ಸಂವಾದ**

೩) **ಕರ್ನಾಟಕ ಏಕೀಕರಣದ ಕರ್ಮ ಕಥೆ**

೪) **ನಮ್ಮ ಗೋಕಾವಿ**

[illegible]

೫) ಸಮಸ್ಯೆಯ ಸುಳಿಯಲ್ಲಿ ಭಾರತೀಯರ ಜವಳಿ

೬) ಕರ್ಬಲ ದಟ್ಟೆ ಗೀತೆಗಳು

೭) ಕನಸೆಂಬ ಭ್ರಮೆಯ ಬೆನ್ನೇರಿ

೮) ನಮ್ಮೊಳಗಿನ ನಾನು

೯) ಗೋಕಾಕ ಫಾಲ್ಸ್ ಸಾಂಸ್ಕೃತಿಕ ಅಧ್ಯಯನ

೧೦) ಇಂಚಗೇರಿ ಸದ್ಗುರು ಸಂಪ್ರದಾಯ

೧೧) ಚಾರಿತ್ರಿಕ ವ್ಯಕ್ತಿಯಾಗಿ ಸಂಗೋಳ್ಳಿ ರಾಯಣ್ಣ ಇವೇ ಮೊದಲಾದ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳು ಇವಾಗಿವೆ.

೧.೩ ಅಧ್ಯಯನದ ವ್ಯಾಪ್ತಿ :

ಇಂಚಗೇರಿ ಆಧ್ಯಾತ್ಮ ಸಂಪ್ರದಾಯ ಕುರಿತು ಹತ್ತಾರು ಆಧ್ಯಾತ್ಮಿಕ ಪುಸ್ತಕ ತಂದಿದ್ದಾರೆ. "ಯೋಗಿಕೊಳ್ಳದ ಮಲ್ಲಿಕಾರ್ಜುನ ಮಹಾತ್ಮೆ", ಕ್ಷೇತ್ರ ದರ್ಶನ ತಾವು ಜೀವನಮಾನದಲ್ಲಿ ಕೈಗೊಂಡ ಸಂಘಟಿಸಿದ ರಾಜ್ಯ, ರಾಷ್ಟ್ರ ವ್ಯಾಪ್ತಿ ಪ್ರವಾಸ ಕುರಿತು 'ಪಯಣ' ಪ್ರವಾಸ ಸಾಹಿತ್ಯ 'ಅಭಿವ್ಯಕ್ತಿ' ಮಹಾಲಿಂಗ ಮಂಗಿಯವರ ಆತ್ಮಕಥೆ, ಕನ್ನಡ ಆತ್ಮಕಥಾ ಸಾಹಿತ್ಯಕ್ಕೊಂದು ಅಪರೂಪದ ಸೇರ್ಪಡೆಯಾಗಿದೆ. ಹೀಗೆ ಸುಮಾರು ೬೦ ಗ್ರಂಥ ಕೃತಿಗಳೊಂದಿಗೆ ಇತರರೊಂದಿಗೆ ಪರಿಸರ (ಕಥೆಗಳು), ನಮ್ಮ ನಿಮ್ಮ ಕಥೆಗಳು, ಸ್ಮೃತಿ, ಸಮುದಾಯ (ಕವನಗಳು), ಸಹೃದಯಿ (ಅಭಿನಂದನ), ಗಡಿನಾಡ ಬೆಡಗು, ಗೋಕಾವಿ ಸಿರಿಸಂಪದ (ಬರಹಗಳು) ಸಂಪಾದಿಸಿದ್ದು ಉಲ್ಲೇಖನಾರ್ಹ.

ತಂದೆಯ ಮರಣಾನಂತರ ೧೬ ನೇ ವಯಸ್ಸಿಗೆ ಕೂಲಿ ಕಾರ್ಮಿಕನಾಗಿ ಬೆನ್ನಿಗೆ ಬಿದ್ದ ತಂಗಿಯರಿಗೆ ಬದುಕು ನೀಡಿ ತಾನು ಬದುಕು ಕಟ್ಟಿಕೊಂಡು ಹಲವು ಹತ್ತು ಹವ್ಯಾಸ ವೃತ್ತಿ–ಪ್ರವೃತ್ತಿ, ಹೋರಾಟಗಳ ಮಧ್ಯದಲ್ಲೂ ಅವರು ಓದುವ ತೀವ್ರ ಹಸಿವಿನಿಂದ ಮೈಸೂರು ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಒಂದು ವರ್ಷದ ಕೋರ್ಸು ಮುಗಿಸುತ್ತಾರೆ. ಮುಂದೆ ಕನ್ನಡ ಎಂ.ಎ. ಕೂಡಾ ಅಂಚೆ ತೆರಪಿನ ಶಿಕ್ಷಣದಲ್ಲಿ ಬರೆದು ಪಾಸಾಗುತ್ತಾರೆ. ಸುತ್ತಮುತ್ತಲಿನ ಪತ್ರಿಕೆಗಳಿಗೆ ಬರೆಯುವುದರ ಜೊತೆಗೆ ಅನೇಕ ಹೊಸ ಪತ್ರಿಕೆಗಳಿಗೆ ಲೇಖನ ಸಂಪಾದಕೀಯ ಸುದ್ದಿ ಬರೆದು ಕೊಟ್ಟು ಚಾಲನೆ ನೀಡುತ್ತಾರೆ. ವಿಶೇಷ ಸಂಚಿಕೆ ಸಂಪಾದಿಸಿ ಕೊಡುತ್ತಾರೆ.

'ಯೋಗೇಶ' ಎಂಬ ವಾರ ಪತ್ರಿಕೆ ಸಹಸಂಪಾದಕರಾಗಿ, 'ಸಂಕ್ರಮಣ' ವಾರಪತ್ರಿಕೆಯ ಸ್ಥಳೀಯ ಪ್ರತಿನಿಧಿಯಾಗಿಯೂ ಕೆಲಸ ಮಾಡುತ್ತಾರೆ. ಗೋಕಾಕ ಮಿಲ್ಲಿನ 'ನಮ್ಮ ಗ್ರಾಹಕ' ಮಾಸಿಕದ ಸಂಪಾದಕ ಹಾಗೂ ಲೇಖಕರಾಗಿ ೧೨ ವರ್ಷಗಳ ಕಾಲ ನಡೆಸಿಕೊಂಡು ಬಂದಿದ್ದಾರೆ. ಆಗ ಬರೆದ ಅಗ್ರಲೇಖನಗಳೇ 'ಸಮಸ್ಯೆಯ ಸುಳಿಯಲ್ಲಿ ಭಾರತೀಯ ಜವಳಿ', ಉದ್ದಿಮೆ ಔದ್ಯೋಗಿಕ ಕ್ಷೇತ್ರಕ್ಕೆ ಸಂಬಂಧಪಟ್ಟ ಅರ್ಥಪೂರ್ಣ

ಉಪಯುಕ್ತ ಕೈಪಿಡಿ ಇದಾಗಿದೆ. 'ಪರಿಸರ ಕುರಿತು ಐ.ಎಸ್.ಒ. ೧೪೦೦೧ ಗುಣಮಟ್ಟ ನಿರ್ವಹಣೆ ಕುರಿತು ಐ.ಎಸ್. ೪-೯೦೦೦ ಸುರಕ್ಷತೆ ಮೊದಲಾದ ಸಂಗತಿಗೆ ಸಂಬಂಧಿಸಿದಂತೆ ೫-೬ ಅಮೂಲ್ಯ ತರಬೇತಿ ಮಾಹಿತಿ ಕೈಪಿಡಿಗಳನ್ನು ತಮ್ಮ ಹಿರಿಯ ಅಧಿಕಾರಗಳೊಂದಿಗೆ ಸಿದ್ಧಪಡಿಸಿದ್ದಾರೆ. ಆದರೆ ಅವೆಲ್ಲವುಗಳ ಮಂಗಿಯವರ ಪ್ರಕಟಿತ ಪುಸ್ತಕ ಯಾದಿಯಲ್ಲಿ ಸೇರಲಿಲ್ಲ.

ಮಹಾಲಿಂಗ ಮಂಗಿಯವರು ತಾವು ಸ್ವಂತಕ್ಕೆ ೬೦-೬೬ ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಅದಕ್ಕಿಂತ ತಮ್ಮೊಂದಿಗೆ ಉದಯೋನ್ಮುಖ ಸಾಹಿತಿ ಕಲಾವಿದರನ್ನು ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ೧೯೮೦-೨೦೦೦ ದಶಕಗಳಲ್ಲಿ ಪ್ರಗತಿಶೀಲ ಲೇಖಕರ ಸಂಘ ಕ್ರಿಯಾಶೀಲ ಮಂಗಿಯವರು ಅಧ್ಯಕ್ಷರಾಗಿದ್ದಾಗ ಹಲವು ಲೇಖಕರು ಪ್ರೇರಣೆಯಿಂದ ಸಾಲು ಸಾಲಾಗಿ ಪುಸ್ತಕಗಳನ್ನು ತಂದರು. ಅನೇಕ ಯುವಕರ ಕೃತಿಗಳಿಗೆ ಮುನ್ನುಡಿ, ಬೆನ್ನುಡಿ ಬರೆದು ಉತ್ತೇಜಿಸಿದ್ದಾರೆ. ಬರವಣಿಗೆಗಿಂತ ಪ್ರಕಾಶನವೇ ಸಮಸ್ಯೆಯಾಗಿರುವಾಗ ತಮ್ಮ ಭಾಗದ ಹಿರಿ-ಕಿರಿಯ ಸಾಹಿತ್ಯ ಸಂಗಾತಿಗಳ ಸಹಾಯದಿಂದ ಪುಸ್ತಕಗಳ ಪ್ರಕಾಶನಗೊಳ್ಳಲು ಹಾಗೂ ಪ್ರಕಟಣೆಗೊಳ್ಳಲು ನೇರವಾಗಿದ್ದಾರೆ.

ಪ್ರಗತಿಶೀಲ ಲೇಖಕರ ಸಂಘ, ಸಾಹಿತ್ಯ ಸಂಸ್ಕೃತಿ ಸಂಘ, ಡಾ. ರಾಜಕುಮಾರ ಅಭಿಮಾನಿಗಳ ಸಂಘ, ಯುವಕ ಮಂಡಳದ ಅಧ್ಯಕ್ಷರಾಗಿ, ತಡಸಲ ಶ್ರೀ ಮಹಾಲಿಂಗೇಶ್ವರ ಸೇವಾ ಸಮಿತಿ ಕಾರ್ಯಾಧ್ಯಕ್ಷರಾಗಿ, ನಿರಂತರವಾಗಿ ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದ್ದಾರೆ. ಈಗಲೂ ಗೋಕಾಕದ 'ಸತೀಶ ಸಾಹಿತ್ಯ ಸೌರಭದ' ಕಾರ್ಯದರ್ಶಿಯಾಗಿ ಗೋಕಾವಿ ನಾಡಿನ ಎರಡು ಬೃಹತ್ ಸಾಹಿತ್ಯ ಸಮಾವೇಶ ಆಯೋಜಿಸುವಲ್ಲಿ ಮಹತ್ವದ ಸಹಯೋಗ ನೀಡಿದ್ದಾರೆ.

೧೯೬೬ ರಿಂದ ೧೯೯೬ ರವರೆಗೆ ಮಹಾಲಿಂಗ ಮಂಗಿಯವರು ಗೋಕಾಕ ಗಿರಣಿಯಲ್ಲಿ ತುಂಬಾ ಮಾನಸಿಕ - ದೈಹಿಕ ಹಿಂಸೆ-ಅನ್ಯಾಯ, ಅವಮಾನಗಳನ್ನು ಎದುರಿಸಿದರು. ೧೯೯೬ ರ ನಂತರ ಸ್ಥಳಿಯ ಟ್ರೇಡ ಯೂನಿಯನ್ ಚಳುವಳಿಯಲ್ಲಿ ಹೊಸ ಗಾಳಿ ಬೀಸಿ ಚಳುವಳಿ ಕ್ರಾಂತಿಯಾಗಿ ಪರಿವರ್ತನೆಗಳು ನಡೆದವು. ಹೊಸ ಪಕ್ಷ ಅಧಿಕಾರ ಚುಕ್ಕಾಣಿ ಹಿಡಿದಾಗ ಮಂಗಿಯವರಿಗೂ ಸುಕಾಲ ಬಂತು. ಅವರ ಪ್ರತಿಭೆಗೆ, ಹೋರಾಟಕ್ಕೆ ಬೆಲೆ ಬಂತು. ನಿವೃತ್ತಿವರೆಗೂ (೦೪-೧೦-೨೦೧೦) ಗೋಕಾಕ ಗಿರಣಿ ಕಾರ್ಮಿಕ ಪ್ರತಿನಿಧಿಯಾಗಿ ಸೇವೆ ಸಂಘಟನೆಯಲ್ಲಿ ಮುಖ್ಯ ವಕ್ತಾರನಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಆ ಸೇವೆ ಈಗಲೂ ಮುಂದುವರೆಸಿದ್ದಾರೆ. ಹಿಂದೊಮ್ಮೆ ಗೋಕಾಕ ಗಿರಣಿ ಹುದ್ದೆಯಲ್ಲಿ ಮಂಗಿಯವರು ಭಾಷಣ ಮಾಡದಂತೆ ನಿರ್ಬಂಧಿಸಿ ಆಡಳಿತ ಮಂಡಳಿಯವರು ಕೋರ್ಟಿನಿಂದ ಇಂಜೆಕ್ಷನ್ ಮನಾಯಿ ಆರ್ಡರ್ ಕೂಡ ತಂದಿದ್ದು ಮಾತ್ರವಲ್ಲದೇ, ದೈಹಿಕ ಹಲ್ಲೆ ಹಿಂಸೆಗೆ ಮುಂದಾದಾಗ ತಾಲೂಕಾ ದಂಡಾಧಿಕಾರಿಗಳಿಂದ ಪೋಲೀಸ್ ಸಂರಕ್ಷಣೆ ಪಡೆದಿದ್ದರು.

[illegible]

[illegible]

[illegible]

[illegible]

ವರ್ಷಗಟ್ಟಲೇ ಪೋಲೀಸರು ಸುರಕ್ಷತೆ ಕೂಡಾ ಒದಗಿಸಿದ್ದರು. ೧೯೮೫–೮೮ ರ ಕಾಲದಲ್ಲಿ ಜೀವಾಪಾಯದ ಮಧ್ಯದಲ್ಲೂ ಉಳಿದು ಬೆಳೆದು ಬಂದಿದ್ದಾರೆ. ಇಂತಹ ಸಂದರ್ಭ ಬಂದಾಗ ಕೋರ್ಟಿಗೂ ಹೋಗಿ ನ್ಯಾಯ ಪಡೆದಿದ್ದಾರೆ.

ಮಹಾಲಿಂಗ ಮಂಗಿಯವರ ಜೀವನವೇ ಒಂದು ಆದರ್ಶ, ಸಂಘರ್ಷ ರೋಮಾಂಚನಕಾರಿಯಾಗಿತ್ತು. ತಮ್ಮ ಕಾರ್ಮಿಕರ ಹಕ್ಕು ನ್ಯಾಯಕ್ಕಾಗಿ ಹೋರಾಟ ಸಾಲದೇ, ಸರ್ಕಾರಿ ದಿನಗೂಲಿ ನೌಕರರ ಹೋರಾಟದಲ್ಲೂ ಪಾಲ್ಗೋಳ್ಳುತ್ತಾರೆ. ತಮ್ಮ ಹೋರಾಟ ಭಾಷಣಗಳಿಗಾಗಿ ವಿಜಾಪುರ, ಬೆಳಗಾವಿ ಮುಂತಾದ ಕಡೆ ಕಾರ್ಮಿಕ ದಿನಾಚರಣೆಗಳಲ್ಲಿ ಪಾಲ್ಗೊಂಡಿದ್ದಾರೆ.

ಮಹಾಜನ ವರದಿ ಜಾರಿಗಾಗಿ, ಗೋಕಾಕ ವರದಿ ಜಾರಿಗಾಗಿ, ಗೋಕಾಕ ಜಿಲ್ಲೆಗೆ ಅಗ್ರಹಿಸಿ, ಬೆಳಗಾವಿ ಕನ್ನಡಿಗರ ಮೇಲಿನ ದೌರ್ಜನ್ಯ ಅನ್ಯಾಯಗಳನ್ನು ಪ್ರತಿಭಟಿಸುತ್ತಾ ತಮ್ಮ ಕಾಲದ ತಮ್ಮ ನೆಲದ ಎಲ್ಲ ಹೋರಾಟ ಚಳುವಳಿಗಳಲ್ಲಿ ಉಪವಾಸ, ಧರಣಿ, ನಿರಶನ ಸತ್ಯಾಗ್ರಹ, ಹರತಾಳ, ರೈಲು ರೋಖೋ ಮುಂತಾದ ಎಲ್ಲದರಲ್ಲೂ ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದಾರೆ. ಈ ಸಂಘಟನೆ, ಹೋರಾಟ, ಸಮಾಜ ಸೇವೆ ತಂದೆಯಿಂದ ಬಂದ ಬಳುವಳಿಯಾಗಿದೆ.

ಮಹಾಲಿಂಗ ಮಂಗಿಯವರಿಗೆ ಡ್ರಾಯಿಂಗ್ ಚಿತ್ರಕಲೆಯಲ್ಲಿ ಬಾಲ್ಯದಿಂದಲೂ ಆಸಕ್ತಿ. ಚಿತ್ರಕಲೆ, ರೇಖಾಚಿತ್ರ, ಜಲವರ್ಣ ಕಲೆಯಲ್ಲಿ ನೂರಾರು ಕಲಾಕೃತಿ ಚಿತ್ರ ರಚಿಸಿದ್ದಾರೆ. ೨೦೦೦ ರಲ್ಲಿ ಗೋಕಾಕದಲ್ಲಿ ಲಾಯನ್ಸ ಆಶ್ರಯದಲ್ಲಿ ನ್ಯೂ ಇಂಗ್ಲೀಷ ಸ್ಕೂಲ್ ಡ್ರಾಯಿಂಗ್ ಹಾಲದಲ್ಲಿ 'ಮಹಾಲಿಂಗಮಂಗಿ' ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ನೀಡಿದ ಹೆಗ್ಗಳಿಕೆ ಅವರದು.

ಮಹಾಲಿಂಗಮಂಗಿ ರಂಗ ಕಲಾವಿದನಾಗಿ ಹಾಗೂ ನಾಟಕಕಾರ, ನಟ, ನಿರ್ದೇಶಕನಾಗಿ ರಂಗ ಸಜ್ಜಿಕೆಯಲ್ಲಿ ಎಲ್ಲ ಆಯಾಮಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಾಲ್ಯದಿಂದಲೂ ಅವರಿಗೆ ಬಣ್ಣದ ಗೀಳು ರಂಗಭೂಮಿಯ ನಂಟು ಇದೆ.

"ಆತ್ಮ ಯಾವ ಕುಲ, ಜೀವ ಯಾವ ಕುಲ, ಘೋಷಣೆ, ಒಂದು ಭಾವ ಒಂದು ಜೀವ" ಮಂಗಿಯವರ ನಾಟಕ ಸಂಕಲನಗಳು.

ಜಾನಪದ ರಂಗಭೂಮಿಯ ನೆರಳಲ್ಲಿ ಅರಳಿದವರು. ಬೆಳೆಯುತ್ತ ವೃತ್ತಿ ನಾಟಕಗಳನ್ನು ಹವ್ಯಾಸಿಯಾಗಿ ಆಡುತ್ತಾ ಬಂದವರು. ಅನೇಕ ವೃತ್ತಿ ನಾಟಕದಲ್ಲಿ ಬಾಲನಟನಾಗಿ, ನಾಯಕಿಯಾಗಿ, ಖಳನಾಯಕಿನಾಗಿ, ನಾಯಕನಾಗಿ, ಖಳನಾಯಕನಾಗಿ, ಹಾಸ್ಯನಟನಾಗಿ, ಹಿರಿಯ ಪೋಷಕನಟನಾಗಿ ಎಲ್ಲ ಪಾತ್ರಗಳಲ್ಲೂ ಅವರದ್ದು ಪ್ರಬುದ್ಧ ಅಭಿನಯ. ನಾಟಕಕ್ಕೆ ಹೇಳಿ ಮಾಡಿಸಿದ ಎತ್ತರದ ಶರೀರ.

[illegible]

[illegible]

[illegible]

[illegible]

[illegible]

[illegible]

ಮಹಾಲಿಂಗಮಂಗಿಯವರು ಸ್ವತಃ 'ಜ್ಯೋತಿ ಕಲಾವಿದರು ಹವ್ಯಾಸಿ ಕಲಾ ಸಂಸ್ಥೆ'ಯನ್ನು ೧೯೭೬ ರಲ್ಲಿ ಕಟ್ಟಿಕೊಂಡರು. ಕಲಾತ್ಮಕ ನಾಟಕ ಪ್ರಯೋಗಕ್ಕೆ ಮುಂದಾಗಿ ಥೇಟರ್‌ಗಳಲ್ಲಿ ಆಡುತ್ತಾರೆ. ಅವರು ನಿರ್ದೇಶಿಸಿ – ಅಭಿನಯಿಸಿದ ಡಾ. ಕಂಬಾರರ 'ಜೋಕುಮಾರ ಸ್ವಾಮಿ', ಗಿರೀಶ ಕಾರ್ನಾಡರ 'ಹಯವದನ', ಜಿ. ವ್ಹಿ. ಶಿವಾನಂದರ 'ಸರ್ವೇ ಜನಾ ಸುಖಿನೋ ಭವಂತು' ಮತ್ತು ಪ್ರೊ. ಬಿ. ಆರ್. ಪೋಲಿಸ ಪಾಟೀಲರ 'ಕೊನೆ ನಮಸ್ಕಾರ' ನಾಟಕಗಳು ಒಳ್ಳೆಯ ಹೆಸರು ತಂದವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಅಖಿಲ ಭಾರತ ಆಕಾಶವಾಣಿ, ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತು. ಹೀಗೆ ಅನೇಕ ಕಡೆ ಅಸಂಖ್ಯ ನಾಟಕ ಪ್ರದರ್ಶನ ನಡೆಸಿಕೊಟ್ಟಿದ್ದಾರೆ. ೮ ನಾಟಕ ರಚಿಸಿದ ಅವರು ೧೦ ನಾಟಕಗಳನ್ನು ನಿರ್ದೇಶಿಸಿದ್ದಾರೆ. ನೂರಾರು ರಂಗ ಪ್ರದರ್ಶನಗಳನ್ನು ನೀಡಿದ್ದಾರೆ. ಈ ವಯಸ್ಸಿನಲ್ಲೂ ಇತ್ತೀಚೆಗೆ ಮಾರ್ಚ ೨೦೧೨ರಲ್ಲಿ ತಾವು ನಿರ್ದೇಶಿಸಿ 'ಗೌಡನ' ಮುಖ್ಯ ಭೂಮಿಕೆಯಲ್ಲಿ ನಟಿಸಿದ 'ಜೋಕುಮಾರ ಸ್ವಾಮಿ' ತಂಡದೊಂದಿಗೆ ಬೀದರ, ಹುಮ್ನಾಬಾದ, ಬಾಲ್ಕಿ ಕಡೆ ರಂಗ ಕೈಗೊಂಡಿದ್ದು, ಮಂಗಿಯವರ ಕಲಾಸಕ್ತಿ ಹುಮ್ಮಸ್ಸಿಗೆ ಪ್ರತ್ಯಕ್ಷ ಪುರಾವೆ ಇದೆ. ಹೀಗೆ ರಂಗ ಕಲಾವಿದನಾಗಿ ಜಾನಪದ ರಂಗಭೂಮಿ ವೃತ್ತಿ ರಂಗಭೂಮಿ, ಹವ್ಯಾಸಿ ಕಲಾತ್ಮಕ ರಂಗಭೂಮಿಗಳಲ್ಲಿ ವೈವಿಧ್ಯಮಯ ಪಾತ್ರ ಮಾಡುತ್ತಾ ನಾಟಕಕಾರ ನಿರ್ದೇಶಕನಾಗಿ ರಂಗ ಸಜ್ಜಿಕೆಯಲ್ಲಿ ತೊಡಗಿಸಿಕೊಂಡು ರಂಗಗೀತೆ ಹಾಡುತ್ತಾ, ರಂಗ ಸಂವಾದಗಳಲ್ಲಿ ಉಪನ್ಯಾಸ ನೀಡುತ್ತಾ ಬಂದವರು ತೀರ ವಿರಳ ಎಂದು ಹೇಳಬಹುದು.

ಮಹಾಲಿಂಗ ಮಂಗಿಯವರ ನಾಟಕಗಳು, ನಿರ್ದೇಶಿತ ನಾಟಕಗಳು, ಗೋಕಾಕ ಗಿರಣಿ ಕಾರ್ಮಿಕ ಕಲಾವಿದರ ಸಮ್ಮಿಶ್ರ ಕಾರ್ಯಕ್ರಮಗಳು, ಗೋಕಾಕ ಜಲಪಾತ ಶಬ್ದ ಚಿತ್ರಗಳು ಬಾನುಲಿಯಲ್ಲಿ ಬಿತ್ತರಗೊಂಡಿವೆ. ಚಂದನವಾಹಿನಿ ದೂರದರ್ಶನದಲ್ಲಿ ಬೆಳಗಿನ 'ಬೆಳಗು' ಕಾರ್ಯಕ್ರಮದಲ್ಲಿ ಮಂಗಿಯವರ ಸಂದರ್ಶನದ ನೇರ ಪ್ರಸಾರ ಕಾರ್ಯಕ್ರಮ ಮೂಡಿ ಬಂದಿದೆ. ಗೋಕಾಕ ಗಿರಣಿಯ ಸಾಕ್ಷ್ಯ ಚಿತ್ರಗಳಿಗೆ (ಡಾಕ್ಯುಮೆಂಟರಿ) ಹಿನ್ನಲೆ ಧ್ವನಿ ಸಾಹಿತ್ಯ ಕೂಡಾ ನೀಡಿದ್ದಾರೆ. ಒಂದೆರಡು ಚಲನಚಿತ್ರಗಳಲ್ಲೂ ಕಾಣಿಸಿಕೊಂಡಿದ್ದಾರೆ.

ಸಮಾಜ ಸೇವೆಯಲ್ಲಿ ತೊಡಗಿ ಅನೇಕ ಸಲ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದಾರೆ. ನೂರಾರು ಐತಿಹಾಸಿಕ ಸಾಂಸ್ಕೃತಿಕ ಪ್ರವಾಸ ಸಂಘಟಿಸಿದ್ದಾರೆ. ಯೋಗ ಶಿಬಿರ, ಧ್ಯಾನ, ಪ್ರಾಣಾಯಾಮ ಶಿಬಿರ ಏರ್ಪಡಿಸಿದ್ದಾರೆ. ಲೆಕ್ಕವಿಲ್ಲದಷ್ಟು ರಾಜ್ಯೋತ್ಸವ, ಗಾಂಧಿ ಜಯಂತಿ, ಮಕ್ಕಳ ದಿನಾಚರಣೆ, ಸಾಹಿತ್ಯ ಸಮಾವೇಶ, ಪುರಾಣಿಕ – ಕಟ್ಟಿಮನಿ ಸ್ಮರಣೋತ್ಸವ, ಕವಿಗೋಷ್ಠಿ, ಬೀದಿ ಕಾವ್ಯ, ವಿಚಾರ ಸಂಕೀರಣ ಆಚರಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ. ಪಲ್ಸ್ ಪೋಲಿಯೋ, ಕುಟುಂಬ ಯೋಜನೆ, ಏಡ್ಸ್ ಜನಜಾಗೃತಿ, ಪ್ರಜನನ ಆರೋಗ್ಯ, ವಯಸ್ಕರ ಶಿಕ್ಷಣ, ಮನೆ ಪಾಟಗಳಲ್ಲಿ ನಿತ್ಯ ನಿರಂತರ ಸಹಯೋಗ ನೀಡಿದ್ದಾರೆ. ನೂರಾರು ಸಂದರ್ಶನ ಚರಿತ್ರೆ ಬರೆದುದ್ದಲ್ಲದೇ ತನ್ನ ನಾಡಿನ ವಿವಿಧ ಕ್ಷೇತ್ರಗಳ ಸಾಧಕರನ್ನು ಕರೆಸಿ ಗೌರವ ಸನ್ಮಾನ ನೀಡಿದ್ದಾರೆ. ಸಂಗೀತ – ನಾಟಕ ಪ್ರದರ್ಶನಗಳಿಗೆ ವೇದಿಕೆ ಒದಗಿಸಿಕೊಟ್ಟು ಪ್ರೋತ್ಸಾಹಿಸಿದ್ದಾರೆ.

ಅಖಿಲ ಭಾರತ ೫೨ನೇಯ, ೫೭ನೇಯ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ನಾಟಕ – ಕಾವ್ಯವಾಚನದಲ್ಲಿ ಪ್ರಾತಿನಿಧ್ಯ, ಬಂಡಾಯ ರಾಜ್ಯಮಟ್ಟದ ರಾಣಿಬೆನ್ನೂರು, ಬಾಗಲಕೋಟೆ, ಚಳ್ಳಕೇರೆ ಕವಿಗೋಷ್ಠಿಗಳಲ್ಲಿ ಪ್ರಾತಿನಿಧ್ಯ. ಹಂಪಿ ಕನ್ನಡ ವಿಶ್ವವಿದ್ಯಾಲಯ ಹಾಲುಮತ ಅಧ್ಯಯನ ಪೀಠದ ಆಶ್ರಯದಲ್ಲಿ ೨ ಸಲ ವಿಶೇಷ ಉಪನ್ಯಾಸ ನೀಡಿದ್ದಾರೆ. ೨೦೦೫ ರ ಶರಣ ಸಾಹಿತ್ಯ ಸಮ್ಮೇಳನದಲ್ಲಿ ಕಿತ್ತೂರು ಉತ್ಸವ ೨೦೧೦ ರಲ್ಲಿ ವಚನ, ಕಾವ್ಯವಾಚನ, ಇಂಚಗೇರಿಯಲ್ಲಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಥಮ ಕೀರ್ತನ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಿದ್ದಾರೆ. ಸಂಸ್ಕೃತಿ ಇಲಾಖೆ, ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ವಿಶೇಷ ಉಪನ್ಯಾಸಗಳು ಹಾಗೂ ಕವಿಗೋಷ್ಠಿ, ವಿಚಾರ ಸಂಕೀರಣಗಳಿಗಾಗಿ, ಜಲಪಾತ ವನಿತೆಯರ ಬಳಗ, ಜ್ಯೋತಿ ಕಲಾವಿದರು, ಕರ್ಬಲದಟ್ಟಿ, ವೀರಗಾಸೆ ಮೇಳದೊಂದಿಗೆ ನಾಡಿನುದ್ದಕ್ಕೂ ತಿರುಗಾಟಗಳು ಯಾರು ಮಾಡಲಾಗದಷ್ಟು ಅಸೂಹೆ ಪಡುವಷ್ಟು ಸೇವೆ ಸಾಧನೆ ಮಾಡಿದ್ದಾರೆ. ೨೦೧೦ ರ ಕ.ಸಾ.ಪ. ೭ನೇಯ ಜಿಲ್ಲಾ ಸಮ್ಮೇಳನ ಬೆಳಗಾವಿಯಲ್ಲಿ ಸನ್ಮಾನ, ೨೦೧೧ ರ ೭೭ನೇ ಕ.ಸಾ.ಪ ರಾಜ್ಯ ಸಮ್ಮೇಳನ ಬೆಂಗಳೂರಿನಲ್ಲಿ ಸಾಧನೆಗೆ ಪುರಸ್ಕಾರ. ೨೦೧೦ ರಲ್ಲಿ ಕನ್ನಡ ಜ್ಯೋತಿ ರಾಜ್ಯಮಟ್ಟದ ಪ್ರಶಸ್ತಿ, ಹುಕ್ಕೇರಿಯಲ್ಲಿ ಶ್ರೀ ಮಠದಿಂದ 'ಕವಿರತ್ನ' ಕಡಕೋಳ ಚಂದರಗಿ ಶ್ರೀ ಮಠದಿಂದ 'ಸಾಹಿತ್ಯ ಸೌರಭ'ದಂತ ಬಿರುದುಗಳು, ಸುತ್ತಲಿನ ನೂರಾರು ಸಂಘ ಸಂಸ್ಥೆ, ಮಠ ಮಾನ್ಯರಿಂದ ಗೌರವ ಸನ್ಮಾನ ಬಂದಿವೆ. ಆದ್ಯಾಗೂ ಅವರ ಬಹುಮುಖ ಪ್ರತಿಭೆ ಬಹುಮೂಲ್ಯ ಸೇವೆ ಸಾಧನೆಗೆ ಸಿಗಬೇಕಾದ ಗೌರವ ಮನ್ನಣೆಗಳು ದೊರಕಿಲ್ಲವೆಂದೇ ಹೇಳಬಹುದು.

ಕೇವಲ ಹತ್ತನೇಯ ತರಗತಿಯನ್ನು ಓದಿ ೧೭ನೇ ವಯಸ್ಸಿಗೆ ಕೂಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿಕೊಂಡು ಏಕಲವ್ಯನಂತೆ ತನಗೆ ತಾನೇ ಗುರುವಾಗಿ ಹತ್ತು ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದು ಸಣ್ಣ ಸಂಗತಿಯೇನು ಅಲ್ಲ. ಪಿತ್ರಾರ್ಜಿತವಾಗಿ ಬಂದಿದ್ದು ಕೇವಲ ಸಾಲಗಳು. ೧೯೭೭ರಲ್ಲಿ ಸಂಬಳ ಕೇವಲ ೯೦ ರೂಪಾಯಿ ಮಾತ್ರ. ೪೪ ವರ್ಷದ ಸೇನಾ ನಿವೃತ್ತಿ ಕೊನೆಯಲ್ಲಿ ಪಡೆಯುತ್ತಿದ್ದುದ್ದು ಕೇವಲ ೭೦೦೦ ರೂಪಾಯಿ ಸಂಬಳ ಮಾತ್ರ. ಆರ್ಥಿಕ ಮುಗ್ಗಟ್ಟು, ಅನಾನುಕೂಲ ಅರ್ಥವಾದಿತು. ಒಂದೆರಡು ಘಂಟೆ ಪಾಠ ಹೇಳಿ ಲಕ್ಷಗಟ್ಟಲೇ ಸಂಬಳ ಪಡೆದು ನೆಮ್ಮದಿ ಬದುಕಿನೊಂದಿಗೆ ಹಣ ಸಮಯದ ಕೊರತೆಯಲ್ಲಿ ಪರಿತಪಿಸುವುದರೊಂದಿಗೆ ಮಂಗಿಯವರ ಸೇವೆ ಸಾಧನೆ ವಿದ್ವತ್ತು ಪಾಂಡಿತ್ಯ ಅಳೆದು ನೋಡಲಾಗದು.

ತಮ್ಮ ಅಲ್ಪ ಸೇವೆಯ ಕುರಿತು ಮಹಾಲಿಂಗಮಂಗಿಯವರೇ ಒಂದೆಡೆ ಹೇಳಿಕೊಂಡಂತೆ "ಯಾವುದೊಂದು ಸಾಹಿತ್ಯ, ಕೃತಿ, ರಂಗ ಪ್ರಯೋಗ, ಚಿತ್ರಕಲೆ, ಶಿಬಿರ ಸಮ್ಮೇಳನ ಯಾವುದೂ ದಿಢೀರ ಪವಾಡ ಮಾಡಲಾಗದು". ಪ್ರತಿ ಕೃತಿ ಕಾರ್ಯದ ಹಿಂದೆ ವಾರಗಟ್ಟಲೇ, ತಿಂಗಳುಗಟ್ಟಲೇ ಸುದೀರ್ಘ ತಾಲೀಮು ತಯಾರಿ ತಪಸ್ಸು ಮಾಡುವುದು ಅವಶ್ಯಕ.

"ಒಬ್ಬ ಮನುಷ್ಯ ಸಾಮಾನ್ಯವಾಗಿ ಬಡ ಕೂಲಿ ಕಾರ್ಮಿಕ. ಹಿಂದುಳಿದ ಅಸಹಾಯಕ ಪ್ರತಿಕೂಲ ಪರಿಸ್ಥಿತಿ ವಾತಾವರಣದಲ್ಲಿ, ವಿರೋಧ – ಪ್ರತಿರೋಧಗಳ ನಡುವೆ ೮–೧೦ ತಾಸು ಉದ್ಯೋಗವೃತ್ತಿ ಬಿಡದೆ ಇದೆಲ್ಲಾ ಇಷ್ಟೆಲ್ಲಾ ಸೇವೆ ಸಾಧನೆ ಹೇಗೆ ಸಾಧ್ಯವಾಯಿತು? ಇದಕ್ಕೆಲ್ಲಾ ಸಮಯ ಹೇಗೆ ತಂದಿರಿ"[೨] ಎಂದು ಅಪರಿಚಿತರು ಬಹಳ ಸಲ ಅವರನ್ನು ಕೇಳಿದ್ದಾರೆ.

ಹೌದು ಮಂಗಿಯವರ ಸಾಹಿತ್ಯದ ಕುರಿತು ಹಿರಿಯ ಲೇಖಕ ಮಿತ್ರ ನಮಗೂ ಕೂಡಾ ನಿಮ್ಮ ಪುಸ್ತಕ ಎತ್ತುವುದು ಕಷ್ಟ. ಓದುವುದಿರಲಿ ಅಷ್ಟು ಪುಟ ಬಿಡಿಬಿಡಿಯಾಗಿ ಬಿಡಿಸಿ ತಿರುವಿ ಹಾಕುವುದು ಕಷ್ಟವಾಗಿದೆ. ಈ ಮನುಷ್ಯ ಇಷ್ಟೊಂದು ಹೇಗೆ ಬರೆದ ಎಂದು ಉದ್ಗಾರ ತೆಗೆದಿದ್ದಾರೆ. ಅವರ ಮನೆಯಲ್ಲಿ ಅವರ ಗ್ರಂಥರಾಶಿ, ಭಾಗವಹಿಸಿದ ಸೇವಾ ಸಮಾರಂಭದ ಫೋಟೋ ಪಾಲ್ಗೊಂಡ ಕಾರ್ಯಕ್ರಮಗಳಲ್ಲಿ ಪಡೆದ ಸ್ಮರಣಿಕ ಎಲ್ಲವನ್ನು ಕಂಡಾಗ ನನಗೂ ಕೂಡಾ ವಿಸ್ಮಯವಾಗಿದೆ.

ಆ ಮಾತಿಗೆ ಮಹಾಲಿಂಗ ಮಂಗಿಯವರು ಪ್ರತಿಕ್ರಿಯೆ 'ನನಗೂ ಒಮ್ಮೆ ಹಿಂದುರಿಗೆ ನೋಡಿದಾಗ ಸೋಜಿಗವೆನಿಸುವುದಿದೆ. ಎಂತೆಂಥ ಅಗ್ನಿ ದಿವ್ಯಗಳನ್ನೆಲ್ಲಾ ದಾಟಿ ಪಾರಾಗಿ ಬದುಕಿ ಬಂದೆನೆಲ್ಲಾ ಎಂದು ಅನಿಸುತ್ತದೆ. ಇಷ್ಟೊಂದು ಕೆಲಸ ಕಾರ್ಯ ನನ್ನಿಂದ ಸಾಧ್ಯವಾಯಿತೇ? ಅಂತಾ ಅನಿಸುತ್ತದೆ. ಆದರೆ ನಿರಂತರ ಶ್ರದ್ಧೆಯ ಪರಿಶ್ರಮ, ಪ್ರಯತ್ನದಿಂದ, ಸಂಕಲ್ಪದಿಂದ ಯಾವುದೂ ಅಸಾಧ್ಯವಿಲ್ಲ. ಸಾಧ್ಯವಿಲ್ಲ ಅಂದುಕೊಂಡರೆ, ಹೆದರಿದರೆ ಏನು ಮಾಡಲಾಗದು. 'ಉತ್ತರ ಭಾರತದಲ್ಲಿ ಒಬ್ಬ ಮನುಷ್ಯ ಏಕಾಂಗಿಯಾಗಿ ಒಂದು ದೊಡ್ಡ ಗುಡ್ಡವನ್ನೇ ಕಡಿದು ಸಾಗಿಸಿದ್ದಾನೆ'. ಸುಮ್ಮನೇ ಗುರಿಯೆಡೆಗೆ ಸಾಗುವುದು, ಸೇವಾ ನಿತರನಾಗುವುದು ಎಂತಹ ಉದಾತ್ತ ವಿಚಾರ. ಗುಡ್ಡದಷ್ಟು ಸಾಹಿತ್ಯ ಸೃಜಿಸಿ ಗುಡ್ಡೇ ಹಾಕಿದರೂ ಆ ಕುರಿತು ಸಾಕಷ್ಟು ಚರ್ಚೆ ವಿಮರ್ಶೆಗಳು ಆಗಲಿಲ್ಲ. ಹಲವು ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಸಾಹಿತ್ಯದೆಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದ್ದಾರೆ. ಕಾವ್ಯ ಒಂದನ್ನೇ ನಾವು ಪರಿಗಣನೆಗೆ ತೆಗೆದುಕೊಂಡರು ಅಲ್ಲ ಹಲವು ಪ್ರಯೋಗಗಳಿಗೆ ಕೈ ಹಾಕಿದ್ದಾರೆ. ವಸ್ತು ಅಭಿವ್ಯಕ್ತಿ ದೃಷ್ಟಿಯಿಂದಲೂ, ವಿಚಾರ ದೃಷ್ಟಿಯಿಂದಲೂ ಪ್ರಗತಿಶೀಲ, ಬಂಡಾಯ ಮನೋಧರ್ಮದ ಕವಿಯಾಗಿಯೂ ನವೋದಯ, ಪ್ರಗತಿಶೀಲ, ನವ್ಯ ಬಂಡಾಯ ಪ್ರಕಾರದಲ್ಲೂ ಪ್ರಯೋಗ ಮಾಡಿದ್ದಾರೆ. ಪ್ರಗತಿಶೀಲ ಸಾಮಾಜಿಕ ನ್ಯಾಯ, ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು. ಸಮಾಜವಾದ ಅವರ ಸಾಹಿತ್ಯದ ವಸ್ತು ಜೀವ ದ್ರವ್ಯವಾದರೂ, ಅನುರಾಗದ ಕವಿಯಾಗಿ ಪ್ರೇಮ ಕಾವ್ಯ ಬರೆದಂತೆ ಅನುಭಾವಿ ಕವಿಯಾಗಿ ತತ್ವ ಪದಗಳನ್ನು ಬರೆದಿದ್ದಾರೆ. 'ದಿಲ್ಲಿ' ಒಂದೇ ವಿಷಯವಿಟ್ಟುಕೊಂಡು ಹಲವು ನಿಟ್ಟಿನಲ್ಲಿ ಚಿತ್ರಿಸಿದ್ದು ವೈಶಿಷ್ಟ್ಯತೆಯೇ ಆಗಿದೆ.

೧೯೩೬ ರಿಂದ ೧೯೫೦ ರವರೆಗೂ ಪ್ರಗತಿಶೀಲ ಸಾಹಿತ್ಯ ಕಾಲ ಘಟ್ಟ ನಿರ್ಧರಿಸುವ ಚರಿತ್ರೆಕಾರರು. ೧೯೫೦ ರ ಕೊನೆಯಲ್ಲಿ ಹುಟ್ಟಿದ ಮಹಾಲಿಂಗ ಮಂಗಿಯವರು ಪ್ರಗತಿಶೀಲ ಸಾಹಿತ್ಯದ ಮುಂದಿನ ತಲೆಮಾರಿನ ಉತ್ತರಾಧಿಕಾರಿಯಾಗಿ ಬದ್ಧರಾಗಿ ಬರವಣಿಗೆ

ಹೋರಾಟ ಮುಂದುವರೆಸಿಕೊಂಡು ಹೋಗಿದ್ದು ಚಾರಿತ್ರಿಕವಾಗಿ ದಾಖಲೇ ಆಗಬೇಕಾದ ಸಂಗತಿ. ಈ ಉದ್ದೇಶ ದೃಷ್ಟಿಯಿಂದಲಾದರೂ ಮಹಾಲಿಂಗ ಮಂಗಿಯವರ ಕಾವ್ಯವನ್ನು ಅಧ್ಯಯನ ಮಾಡುವುದು ಅವಶ್ಯಕತೆಯಿದೆ.

ಶ್ರೀ ಬಸವರಾಜ ಕಟ್ಟಿಮನಿ ನಿಕಟ ಸಂಪರ್ಕ ಒಡನಾಟದಲ್ಲಿ ಅವರ ಅನುಯಾಯಿಗಳಾಗಿ ಪರಮ ಶಿಷ್ಯರೆನಿಸಿ, ಗೋಕಾಕದಲ್ಲಿ ಪ್ರಗತಿ ಪಂಥ ಚಳುವಳಿಯಲ್ಲಿ ಸಂಘಟನೆ ಹುಟ್ಟು ಹಾಕಿ ಬರಹಗಾರರ ದಿಕ್ಕು ದೆಸೆಯನ್ನೇ ಬದಲಿಸಿದ್ದು ಮಹಾಲಿಂಗ ಮಂಗಿಯವರು ೩ ದಶಕಗಳ ಕಾಲ ಆ ಸಂಘಟನೆಯ ಅಧ್ಯಕ್ಷರಾಗಿ ನೇತೃತ್ವ ವಹಿಸಿದ್ದು ಚಾರಿತ್ರಿಕ ಸತ್ಯ. ಈ ಎಲ್ಲ ಹಿನ್ನಲೆಯಲ್ಲಿ ಮಹಾಲಿಂಗಮಂಗಿಯವರ ಕಾವ್ಯದ ಮೂಲಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಉದ್ದೇಶ ನನ್ನದು.

ಈ ದೃಷ್ಟಿಯಿಂದ ಪ್ರಗತಿಶೀಲ ಚಳುವಳಿಯ ಪ್ರಾತಿನಿಧಿಕ ಕವಿಯಾದ ಮಹಾಲಿಂಗ ಮಂಗಿಯವರ ಸಮಗ್ರ ಸಾಹಿತ್ಯವೇ ಸಂಪೂರ್ಣ ಅಧ್ಯಯನಕ್ಕೊಳಪಡಬೇಕಾದ ಅಗತ್ಯವಿದೆ ಅನ್ನಿಸುತ್ತದೆ. ಆದರೆ ನನ್ನ ಎಂ.ಫಿಲ್ ಅಧ್ಯಯನ ಸಂದರ್ಭದಲ್ಲಿ ಯಾವುದಾದರೊಮದು ನಿರ್ಧಿಷ್ಟ ವಿಭಾಗ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ನನ್ನ ಅಧ್ಯಯನ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಳ್ಳಬೇಕಾಗಿದೆ. ಆದ್ದರಿಂದ ಪ್ರಸ್ತುತ ನಾನು 'ಮಹಾಲಿಂಗ ಮಂಗಿಯವರ ಕಾವ್ಯ ಅಧ್ಯಯನ' ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಬಂಧವನ್ನು ಸಿದ್ದಪಡಿಸಲು ನನ್ನ ಮಾರ್ಗದರ್ಶಕರು ಡಾ. ಅಶೋಕ ನರೋಡೆ ಅವರೊಂದಿಗೆ ಸಮಾಲೋಚಿಸಿ ನಿರ್ಧಾರಕ್ಕೆ ಬಂದಿದ್ದೇನೆ.

ಕಾರ್ಮಿಕ ಲೇಖಕನಾಗಿ, ಕ್ರಾಂತಿಕಾರಿ ಪ್ರಗತಿಶೀಲ ಕವಿಯಾಗಿ ಅವರ ಕಾವ್ಯ ಸಾಧನೆಗಳಿಗೆ ವಿಶೇಷ ಅರ್ಥವಿದೆ ಎಂದು ನನ್ನ ನಂಬಿಕೆ. ವಿದ್ವಾಂಸರಿಂದ ಅಲಕ್ಷಕ್ಕೊಳಗಾದ ದುಡಿಮೆಗಾರನ ಶ್ರಮಶಕ್ತಿಯ ಕಾವ್ಯಕ್ಕೆ ನ್ಯಾಯೋಜಿತ ಗೌರವ ಸಿಗುವಂತಾಗಬೇಕೆಂಬುದೇ ನನ್ನ ಆಶಯ. ಮಂಗಿಯವರ ಕಾವ್ಯ ಸಾಧನೆ ಕಾವ್ಯದ ಅಂತಃ ಸತ್ವ, ವಿಶೇಷತೆ ಗುರುತಿಸುವ ಗೌರವಿಸುವ ಸದುದ್ದೇಶದಿಂದ ಈ ಅಧ್ಯಯನಕ್ಕೆ ತೊಡಗಿಸಿಕೊಂಡಿರುವೆ.

ಮಹಾಲಿಂಗ ಮಂಗಿಯವರ ವಿವಿಧ ಪ್ರಕಾರಗಳಲ್ಲಿ ೬೦ ಕ್ಕೂ ಅಧಿಕ ಸಾಹಿತ್ಯ ಕೃತಿಗಳನ್ನು ಸಾಂಸ್ಕೃತಿಕ ಲೋಕಕ್ಕೆ ಸಮರ್ಪಿಸಿದ್ದರೂ, ನಾನು ಅವರ 'ಕಾವ್ಯದ ಅಧ್ಯಯನಕ್ಕೆ' ನನ್ನ ಅಧ್ಯಯನ ವ್ಯಾಪ್ತಿಯನ್ನು ಮಿತಿಗೊಳಿಸಿದ್ದೇನೆ.

ಮಹಾಲಿಂಗಮಂಗಿಯವರ ಕಾವ್ಯ ಸಂಕಲನಗಳು :

ಅ.ನಂ	ಹೆಸರು	ಪ್ರಕಾಶಕರು	ಪ್ರ.ವರ್ಷ.
೧)	ಹಕ್ಕಿಗಳೇಕೆ ಸಾಯುತ್ತಿವೆ?	ಯುವ ಪ್ರಜ್ಞ ಪಬ್ಲಕೇಷನ್ಸ, ಹುಬ್ಬಳ್ಳಿ.	೧೯೭೯
೨)	ನನ್ನ ನೆಲದ ಭ್ರೂಣಗಳು	ಭುವನೇಶ್ವರಿ ಪ್ರಕಾಶನ, ಘಟಪ್ರಭಾ.	೧೯೮೩
೩)	ಕರ್ಮವೀರರ ಹಾಡು	ಮೈತ್ರಿ ಪ್ರಕಾಶನ, ಗೋಕಾಕ	೧೯೮೩
೪)	ಅನುರಾಗ	ಸಂಘರ್ಷ ಸಾಹಿತ್ಯಕೂಟ, ರಾಯಬಾಗ.	೧೯೮೬
೫)	ನನ್ನ ಭಾರತ ಮಹಾನ್	ಭುವನೇಶ್ವರಿ ಪ್ರಕಾಶನ, ಗೋಕಾಕ	೨೦೦೦
೬)	ದಿಲ್ಲಿ ದೂರವಿಲ್ಲ	ಕಿಕ್ಕೇರಿ ಪಬ್ಲಿಕೇಷನ್ಸ, ಬೆಂಗಳೂರು	೨೦೦೮
೭)	ತಡಸಲ ಮಹಾಲಿಂಗನ ವಚನಗಳು	ಕಿಕ್ಕೇರಿ ಪಬ್ಲಿಕೇಷನ್ಸ, ಬೆಂಗಳೂರು	೨೦೦೮
೮)	ಮುತ್ತಿನ ತೋರಣ (ಸಮಗ್ರ ಕಾವ್ಯ ಇತರರೊಂದಿಗೆ ಸಂಪಾದಿತ ಕಾವ್ಯ)	ಕಿಕ್ಕೇರಿ ಪಬ್ಲಿಕೇಷನ್ಸ, ಬೆಂಗಳೂರು	೨೦೧೦
೯)	ಗೋಕಾವಿ ನಾಡಿನ ಪ್ರಾತಿನಿಧಿಕ ಕವನ ಸಂಕಲನ 'ಸಮುದಾಯ'	ಪ್ರಗತಿಶೀಲ ಬರಹಗಾರರ ಬಳಗ	೧೯೭೯
೧೦)	ದಿ. ಕೃಷ್ಣಮೂರ್ತಿ ಪುರಾಣಿಕ ಗೌರವಾರ್ಥ 'ಸ್ಮೃತಿ'	ಗಂಗಾತರಂಗ ಪ್ರಕಾಶನ, ಗೋಕಾಕ	೧೯೮೬

ಹೀಗೆ ೧೦ ಪುಸ್ತಕಗಳನ್ನು ಅವಗಾಹಣೆ ಮಾಡಲಾಗಿದೆ. ಮಹಾಲಿಂಗ ಮಂಗಿಯವರು ಅನ್ಯ ಸಂಪಾದಕರ ಕೃತಿಗಳಲ್ಲೂ ತಮ್ಮ ಕಾವ್ಯಗಳನ್ನು ಪ್ರಕಟಣೆಗೆ ನಿಡಿದ್ದಾರೆ. ಪರಿಸರ ಕಥಾ ಸಂಕಲನದಲ್ಲಿ ಮಹಾಲಿಂಗ ಮಂಗಿಯವರ 'ಹಾಲಿ ಜನಪದ ಕಥೆ' ಒಂದು ಸುದೀರ್ಘವಾದ ಕಾವ್ಯ ಶೈಲಿಯಲ್ಲಿ ಬರೆಯಲಾದ ಕಾವ್ಯ ಕಥನ ಪ್ರಗತಿಶೀಲ ಕಥೆಯೂ ಚೆನ್ನಾಗಿ ಬಂದಿದೆ.

'ಇಲ್ಲಿ ತಡಸಲ ಮಹಾಲಿಂಗನ ವಚನಗಳು' ವಚನ ಕಾವ್ಯ ಆಧುನಿಕ ವಚನ ಪ್ರಕಾರವಾಗಿ ತುಂಬ ವಿಶೇಷವಾಗಿ ರೂಪುಗೊಂಡಿದೆ. ಮುತ್ತಿನ ತೋರಣ ಶ್ರೀಯುತ 'ಸಮಗ್ರ ಕಾವ್ಯ' ಸಂಕಲನವಾಗಿದೆ. ಮಂಗಿಯವರ ಕಾವ್ಯವನ್ನು ಅಧ್ಯಯನಿಸಲು ಒಂದೆಡೆಗೆ ಲಭಿಸುತ್ತದೆ. ಹೀಗಾಗಿ ಮಹಾಲಿಂಗಮಂಗಿಯವರ ಮೊದಲ ಆರು ಕವನ ಸಂಕಲನಗಳು ಸ್ವತಂತ್ರ ಪರಿಪೂರ್ಣ ಕಾವ್ಯವೆಂದು ಪರಿಗಣಿಸಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಕನ್ನಡ ಕಾವ್ಯದಲ್ಲಿ ಪ್ರಗತಿಶೀಲ ಕವಿ ಮಹಾಲಿಂಗಮಂಗಿಯವರ ಕಾವ್ಯಸಾಧನೆ ವಿಶೇಷತೆಯನ್ನು ಗುರುತಿಸುವುದೇ ಉದ್ದೇಶವಾಗಿದೆ. ಆರು ಅಧ್ಯಾಯಗಳಲ್ಲಿ ಅದನ್ನು ಪ್ರಸ್ತುತ ಪಡಿಸುತ್ತಿರುವೆ.

[illegible]

ಮೊದಲನೆ ಅಧ್ಯಾಯದಲ್ಲಿ ಕವಿ ಮಹಾಲಿಂಗಮಂಗಿಯವರ ಕಿರು ಪರಿಚಯದೊಂದಿಗೆ ಅವರ ಕಾರ್ಯಕ್ಷೇತ್ರ ಸೇವೆ, ಸಾಧನೆಗಳ ಸಿಂಹಾವಲೋಕನದೊಂದಿಗೆ ನನ್ನ ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿಯ ಮಿತಿಗಳನ್ನು ವಿವರಿಸುತ್ತೇನೆ.

ಎರಡನೆಯ ಅಧ್ಯಾಯದಲ್ಲಿ ಪ್ರಗತಿಶೀಲ ಕಾರ್ಮಿಕ ಕವಿ ಸಾಹಿತಿ ಬೆಳೆದು ಬಂದ ಪರಿಸರ, ವಾತಾವರಣ ಮತ್ತು ಅವರ ಸಾಹಿತ್ಯದ ಮೇಲಿನ ಪ್ರೇರಣೆ ಪ್ರಭಾವಗಳನ್ನು ಗುರುತಿಸುವ ಪ್ರಯತ್ನದೊಂದಿಗೆ, ಸಾಂದರ್ಭಿಕವಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಸಾಹಿತ್ಯ ಆ ಚಳುವಳಿಯ ಪರಿಣಾಮ ಫಲಿತಗಳ ಕುರಿತ ಪಕ್ಷಿನೋಟ ಒದಗಿಸುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮಹಾಲಿಂಗಮಂಗಿಯವರ ಆರು ಕವನ ಸಂಕಲನಗಳ ತಲಸ್ಪರ್ಶಿ ಅಧ್ಯಯನವಿದೆ. ಮಂಗಿಯವರ ಕಾವ್ಯದ ಪ್ರೇರಣೆ ಮತ್ತು ಧೋರಣೆಗಳನ್ನು ಕಟ್ಟಿಕೊಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮಹಾಲಿಂಗ ಮಂಗಿಯವರ ಕಾವ್ಯದ ಧ್ಯೇಯ ಧೋರಣೆ ಕುರಿತು ವಿವರಿಸಿ, ಅವರ ಕಾವ್ಯದ ವಿವಿಧ ಮಗ್ಗಲುಗಳನ್ನು ಅನಾವರಣಗೊಳಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಅವರ ಕಾವ್ಯದ ವೈಶಿಷ್ಟ್ಯತೆಯ ಕುರಿತು ವಿಮರ್ಶಾತ್ಮಕ ಪರಿವೀಕ್ಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದೆ. ಈ ಹಿನ್ನಲೆಯಲ್ಲಿ 'ಮಹಾಲಿಂಗ ಮಂಗಿಯವರ ಕಾವ್ಯದ ಅಧ್ಯಯನ' ವೆಂಬ ನಿಬಂಧವನ್ನು ಸಿದ್ಧಪಡಿಸಿರುವೆ.

* * *

: ಅಡಿಟಿಪ್ಪಣೆಗಳು :

ಪ್ರ. ಸಂ
೧.೩
೧:೪
೧.೩೮

೧) ನಮ್ಮ ಗೋಕಾವಿ : ಮಹಾಲಿಂಗ ಮಂಗಿಯವರ

೨) ಅದೇ

೩) ಅದೇ ೨.೩

೪) ಡಾ. ವ್ಹಿ. ಎಸ್. ಮಾಳಿಯವರ ಜೊತೆ ಸಂಭಾಷಣೆಯ ಸನ್ನಿವೇಶದಲ್ಲಿ ೩೮.೧೧

೫) ನಮ್ಮ ಗೋಕಾವಿ : ಮಹಾಲಿಂಗ ಮಂಗಿಯವರ

ಅಧ್ಯಾಯ - ೨

ಅ. ಪರಿಸರ ಮತ್ತು ಪ್ರೇರಣೆ

ಬ. ಪ್ರಗತಿಶೀಲ ಸಾಹಿತ್ಯದ ಪಕ್ಷಿನೋಟ

ಅಧ್ಯಾಯ – ೨
ಅ. ಪರಿಸರ ಮತ್ತು ಪ್ರೇರಣೆ

ಪ್ರವೇಶ :

ಗೋಕಾವಿ – ಗೋಕಾಕ ನೆಲದ ಗುಣವೋ ಜಲದ ಗುಣವೋ ಗೊತ್ತಿಲ್ಲ. ಇಲ್ಲಿಯಷ್ಟು ಸಾಹಿತ್ಯದ ಫಸಲು ಹುಲುಸಾಗಿ ಮತ್ತೇಲ್ಲೂ ಬೆಳೆದಿಲ್ಲ. ಪ್ರಾಕೃತಿಕ ಗೋಕಾಕ ಜಲಪಾತ ಪರಿಸರ, ಅಂಕಲಗಿ ಕುಂದರನಾಡು, ಖನಗಾವಿ ತೆಗ್ಗಿನ ಪ್ರದೇಶ, ಯಾದವಾಡ ಸುಣ್ಣದ ಗಣಿ ಸೀಮೆ ಒಳಗೊಂಡ ಸೊಬಗಿನ ನಾಡು ಇದಾಗಿದೆ. ಸಾಹಿತ್ಯ ಸಾಂಸ್ಕೃತಿಕವಾಗಿ ಸಂಪದ್ಭರಿತ ಸಹಸ್ರಾರು ಜನ ಹಿಂದಿನ ಇಂದಿನ ಕವಿ ಲೇಖಕರು ಸಾರಸತ್ವ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಸಾಹಿತ್ಯ ಸೃಷ್ಟಿ ಸಂಖ್ಯಾದೃಷ್ಟಿಯಿಂದ ಮಾತ್ರವಲ್ಲ ಸತ್ವದ ನಿಟ್ಟನಿಂದಲೂ ಆಗಾಧ ಕೊಡುಗೆಯನ್ನೇ ನೀಡಿದ್ದಾರೆ[1].

ಗೋಕಾಕ ಜಲಪಾತ ಘಟಪ್ರಭಾ ಮಾರ್ಕಂಡೇಯ ನದಿಸಂಗಮ. ಯೋಗಿಕೊಳ್ಳ ಭೈರಿ ಕೊಳ್ಳಗಳು, ಸಾವಳಗಿ, ಅರಭಾವಿ, ಅಂಕಲಗಿ, ಮರಡೀಮಠ, ತವಗ ಪಂಚಪೀಠಗಳು, ಗೋಕಾವಿ ಬಣ್ಣಗಾರಿಕೆ, ಯಾದವಾಡ ಸುಣ್ಣಗಾರಿಕೆ, ಕಸುರಿಕಲೆ, ಜಿನಗಾರಿಕೆ, ಸಿಹಿಖಾದ್ಯ ಕರದಂಟು, ಲಡಕಿ ಉಂಡಿಗಳಿಗೆ ಸುವಿಖ್ಯಾತ ದೇಶದ ಹಳೆಯ ಹಿರಿಯ ಹತ್ತಿನೂಲಿನ ಗಿರಣಿ, ಸಕ್ಕರೆ ಕಾರ್ಖಾನೆಗಳು, ಉದ್ಯಮ, ವ್ಯವಸಾಯ, ಕೃಷಿ, ವಾಣಿಜ್ಯ, ಶಿಕ್ಷಣ, ಆರೋಗ್ಯ ಸಂಸ್ಥೆಗಳು ಎಲ್ಲವೂ ಸಮೃದ್ಧವಾಗಿದೆ.

ಇಂತಹ ಸ್ಫೂರ್ತಿದಾಯಕ ಪರಿಸರ ಆರೋಗ್ಯದಾಯಕ ವಾತಾವರಣದಲ್ಲಿಯ ಸಾಧಕರು, ಸಿದ್ಧರು ರೂಪುಗೊಳ್ಳುವುದು ಸಹಜ ಸಾಮಾನ್ಯವನ್ನುವಂತಾಗಿದೆ. ಮನುಷ್ಯ ಪರಿಸರದ ಶಿಶು ಎನ್ನಲಾಗುವುದು. ಸ್ಥಳೀಯ ಪರಿಸರ, ಸಾಮಾಜಿಕ ವಾತಾವರಣ ಸಮಯ ಸಂದರ್ಭಗಳು, ಅವಕಾಶ ಪ್ರೋತ್ಸಾಹಗಳು, ಪರಿಸ್ಥಿತಿಗಳು ವ್ಯಕ್ತಿತ್ವಕ್ಕೆ ಜನ್ಮ ಕೊಡುತ್ತವೆ. ವ್ಯಕ್ತಿ ಹುಟ್ಟಿ ಬೆಳೆದು ಬಂದ ತನ್ನ ಸಮುದಾಯ ಪರಂಪರೆಯಿಂದ ಪ್ರಚೋದಿತನಾಗುವುದು ಸ್ವಾಭಾವಿಕ.

ಕವಿ, ಕಥೆಗಾರ, ಕಾದಂಬರಿಕಾರರು, ನಾಟಕಕಾರ, ನಟ, ನಿರ್ದೇಶಕ, ಚಿತ್ರಕಲಾವಿದ, ನಾಡುನುಡಿ ಹೋರಾಟಗಾರ, ಪತ್ರಕರ್ತ, ಸಾಮಾಜಿಕ ಕಾರ್ಯಕರ್ತ 'ಮಹಾಲಿಂಗಮಂಗಿ' ಅಪರೂಪದ ಅಪೂರ್ವ ವ್ಯಕ್ತಿತ್ವ ಪಡೆದದ್ದೂ ಕೂಡಾ ಸ್ವಾಭಾವಿಕವೇ ಎನ್ನಬೇಕು.

[illegible]

[illegible]

[illegible]

[illegible]

[illegible]

[illegible]

[illegible]

[illegible]

ಮಹಾಲಿಂಗ ಮಂಗಿಯವರು 'ನಾನೇಕೆ ಬರೆಯುತ್ತೇನೆ?' ಎಂಬ ಲೇಖನದಲ್ಲಿ ಈ ಪ್ರಶ್ನೆಯನ್ನು ತಮಗೆ ತಾವೇ ಹಾಕಿಕೊಂಡು ತುಂಬ ಸ್ವಾರಸ್ಯಕರವಾಗಿ ಚರ್ಚಿಸುತ್ತಾರೆ. ಸಾಂದರ್ಭಿಕವಾಗಿ ಅವಲೋಕಿಸಿದಾಗ – 'ನಾನೇಕೇ ಬರೆಯುತ್ತೇನೆ?' ಎಂಬ ಪ್ರಶ್ನೆ ಅನೇಕರು ನನ್ನನ್ನು ಕೇಳಿದ್ದಾರೆ. ಒಬ್ಬೊಬ್ಬರು ಒಂದೊಂದು ಅರ್ಥ ಉದ್ದೇಶವಿಟ್ಟುಕೊಂಡು ಈ ಪ್ರಶ್ನೆ ಕೇಳಿದ್ದಾರೆ. ನಮ್ಮ ತಾಯಿ ಕೇಳುತ್ತಾರೆ – 'ಆರಾಮ ಇರೋದು ಬಿಟ್ಟು ಈ ತ್ರಾಸು ಏಕೆ?' ಎನ್ನುವ ಅರ್ಥದಲ್ಲಿ, ಹಾಗೇ ನನ್ನ ಹೆಂಡತಿಯೂ ಕೂಡಾ ಹೀಗೆ ಕೇಳುತ್ತಾಳೆ – 'ಏನು ಲಾಭ ಇಲ್ಲ ಸುಮ್ಮನೆ ಶ್ರಮ ಯಾಕೆ?' ಎಂದು ಕೇಳುತ್ತಾಳೆ. ಮತ್ತು ನನ್ನ ಚಿಕ್ಕ ಮಗನೂ ಕೂಡಾ ಹೀಗೆ ಕೇಳುತ್ತಾನೆ – 'ಅಷ್ಟೇನು ಬರೆಯುತ್ತಿರಿ, ಈಗ ಪರೀಕ್ಷೆ ಇಲ್ಲ ಏನಿಲ್ಲ; ಅಂತಾದೇನು ಅಭ್ಯಾಸ ಅದೇನು ಮಾಡುತ್ತಿರೋ' ಅಂತಾ. ಹೀಗೆ ಮನೆಗೆ ಬಂದು ಹೋಗುವವರು ಕೂಡಾ ಬಂಧು ಮಿತ್ರರು ಬಂದಾಗಲೆಲ್ಲಾ ಬರಿತಾನೇ ಕೂಳಿತಿರೋದು ನೋಡಿ – 'ಅಂತಾದ್ದೇನು ಕಡಿದು ಕಟ್ಟೆ ಹಾಕ್ತಾ ಇದ್ದಾನೋ ಇಂವ' ಎಂಬ ಕೊಂಕಿನಲ್ಲಿ ನಾಜೂಕಾಗಿ ವಿಚಾರಿಸಿಕೊಳ್ಳುತ್ತಾರೆ.

'ಹೌದು ನಾನೇಕೆ ಬರೆಯುತ್ತೇನೆ? ಮತ್ತು ನಾನೇ ಏಕೆ ಬರೆಯುತ್ತೇನೆ?' ಈ ಪ್ರಶ್ನೆಗೆ ನನಗೆ ನಾನೇ ಬಹಳ ಸಲ ಹಾಕಿಕೊಂಡಿದ್ದೇನೆ. ಬಹುಶಃ ಬರಹಗಾರರೆಲ್ಲ ಅವರ ಅಂತರಂಗ ಕೇಳುವ ಸಹಜ ಪ್ರಶ್ನೆ ಇದಾಗಿರಬಹುದು[೨].

ಸಾಹಿತ್ಯಾಸಕ್ತಿ ಅಥವಾ ಸಾಹಿತ್ಯಾಭಿವ್ಯಕ್ತಿ ಬರವಣಿಗೆ ಈ ಪರಿಸರದ ಸಾಂಸರ್ಗಿಕ – ಸಾಂಕ್ರಾಮಿಕ ವ್ಯಾದಿ ತಲಾತಲಾಂತರಗಳಿಂದ ಸಾವಿರಾರೂ ಜನರಲ್ಲಿ ಈ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತ ಬಂದಿದ್ದು ನೋಡಬಹುದು. ಗೋಕಾವಿ ನೆಲದಲ್ಲಿ ಸಾಹಿತಿ, ಕಲಾವಿದರು, ಲಾವಣಿಕಾರರು, ನಾಟಕಕಾರರು, ಆಗಾಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತ ಬಂದಿದ್ದಾರೆ. ಅದು ಪರಿಸರದ ಪ್ರಭಾವವೇ ಇರಬಹುದು ಅಥವಾ ಇಲ್ಲಿ ಹುಟ್ಟಿದ ತಪ್ಪಿಗೆ ಸಾಹಿತ್ಯದ ಸೊಂಕು ತನಗೂ ತಗಲಿರಬಹುದು. ಒಂದೊಂದು ಕಡೆ ಒಂದೊಂದು ಬೆಳೆ – ಹಾಗಿಲ್ಲಿ ಸಾಹಿತ್ಯ ಕಲೆಯ ಕಳೆ[೩].

ಮಹಾಲಿಂಗಮಂಗಿಯವರು ಪಟ್ಟಪಾಡು ಅನುಭವಿಸಿದ ಕಷ್ಟ ಸಂಕಷ್ಟ, ಅನ್ಯಾಯ, ಶೋಷಣೆ, ನೋವು ಅವಮಾನಗಳು, ನಿರಂತರ ಅಧ್ಯಯನ, ತಿರುಗಾಟಗಳು, ಹೋರಾಟಗಳು ಈ ದಾರಿಗಳೆದ ಸಂಗಾತಿಗಳು ಈ ಎಲ್ಲವೂ ಈ ಪಾಟರೋಗ ಉಲ್ಬಣಗೊಳ್ಳಲು ಕಾರಣವಿದ್ದಿತ್ತೆಂದು ಕಾಣುತ್ತದೆ.

೨.೧ ಪರಿಸರ :

ಮಹಾಲಿಂಗ ಮಂಗಿಯವರ ಜನ್ಮಭೂಮಿ ಕರ್ಮಭೂಮಿ ಬೆಳಗಾವಿ ಜಿಲ್ಲೆಯ ಗೋಕಾವಿ ನಾಡು. ಗೋಕಾಕ ಫಾಲ್ಸ್ ನಿಮಿತ್ಯ ಮಾತ್ರವಾಗಿ ತಾಯಿಗೆ ಚೊಚ್ಚಲು ಮಗನಾಗಿ ಪಕ್ಕದ ಚಿಕ್ಕೋಡಿ

ತಾಲೂಕಿನ 'ಜಾನನೂರಿ'ನಲ್ಲಿ ಜನ್ಮಪಡೆದರು[೪]. ತಂದೆಯ ಊರು ವಾಸ್ತವ್ಯ ಜಲಪಾತ ಪರಿಸರದ ಗೋಕಾಕ ಮಿಲ್ಸ ಹತ್ತಿ ನೂಲಿನ ಗಿರಣಿ ಕೂಲಿ ಕಾರ್ಮಿಕ ಸಮುದಾಯದಲ್ಲಿ ಆಡಿ ಬೆಳೆದದ್ದು ಬಡಕಾರ್ಮಿಕ ಕುಟುಂಬದ ಕಂಪನಿ ಕಾಲನಿಮನೆಯಲ್ಲಿ ಶೋಷಿತ ಶ್ರಮಜೀವಿ ಸಮುದಾಯದಲ್ಲಿ ೩-೪ ತಲೆಮಾರಿನಿಂದ ಈ ಕುಟುಂಬ ಇಲ್ಲಿ ವಾಸಿವಿದೆ. ಅಜ್ಜ, ಅಜ್ಜಿ, ಅಪ್ಪ, ಚಿಕ್ಕಪ್ಪ, ಮಹಾಲಿಂಗ ಮಂಗಿಯವರ ಸೋದರ ಸಂಬಂಧಿಗಳು ಮತ್ತು ಅವರ ಮಕ್ಕಳು ನಾಲ್ಕು ತಲೆಮಾರಿನವರು. ಅವರು ಕಾರ್ಮಿಕರಾಗಿಯೇ ಉಪಜೀವನ ನಡೆಸುತ್ತ ಬಂದಿದ್ದಾರೆ.

ಮಹಾಲಿಂಗ ಮಂಗಿಯವರು ಹುಟ್ಟಿದ್ದು ಕಾರ್ಮಿಕರ ಕಾಲನಿ ಮನೆಯ ಕೂಡು ಕುಟುಂಬದಲ್ಲಿ ಅವರು ಹುಟ್ಟಿದ್ದು ೧೯೫೦ ರಲ್ಲಿ. ತಂದೆ ಶಂಕರೆಪ್ಪ, ತಾಯಿ ಕಲ್ಲವ್ವ. ಆ ಕಾಲನಿ ಮನೆ ೬ X ೬ X ೬ X ೯ ಉದ್ದಗಲದ ಎರಡು ಖೋಲಿಗಳು. ಓಣಿಯ ನಡುವಿನ ಮನೆ. ಮೂರು ಕಡೆ ಸಮಾಯಿಕ ಗೋಡೆಗಳು. ಕಿಟಕಿಗಳೇ ಇಲ್ಲ. ಅಡ್ಡಾದಿಡ್ಡಿ ಕಟೆದ ಕಲ್ಲುಗೋಡೆ ಮೇಲೆ ಕಿರು ಎತ್ತರದ ಕರಿಹಂಚಿನ ಛಾವಣಿ ಪುಟ್ಟ ಮನೆಯಲ್ಲಿ ಅಜ್ಜ, ಅಜ್ಜಿ, ತಾಯಿ, ತಂದೆ, ಚಿಕ್ಕಪ್ಪ, ಚಿಕ್ಕಮ್ಮ ಮತ್ತು ೧೦ ಮಕ್ಕಳ ೩ ತಲೆಮಾರಿನ ಸಂಸಾರ. ತಂದೆ ಶಂಕರೆಪ್ಪ ಅವರಿಗೆ ನಾಲ್ಕು ಮಕ್ಕಳು ಹಾಗೂ ರಾಮಚಂದ್ರ ಚಿಕ್ಕಪ್ಪನಿಗೆ ೬ ಜನ ಮಕ್ಕಳು. ಮಹಾಲಿಂಗರೇ ಕುಟುಂಬದ ಮೊದಲ ಚೊಚ್ಚಲು ಸಂತಾನ ಕ್ಷೇತ್ರಾಧಿಪತಿ ತಡಸಲ ಮಹಾಲಿಂಗೇಶ್ವರನ ಹೆಸರು, ಪರಿಸರದ ಎಲ್ಲ ಮಕ್ಕಳಿಗೂ ಬರುವಂತೆ ಇವರಿಗೂ ಪ್ರಾಪ್ತವಾಗಿದೆ. ನಾಲ್ಕು ಜನ ಅತ್ತೆಯರು ಮಕ್ಕಳೊಂದಿಗೆ ಬಂದರಂತೆ ಉಂಡುಮಲಗಲು ಅಂಗಳಕ್ಕೆ ಬರಬೇಕು. ಇಡಿಕಿರಿದ ಬಡ ಭಾರತದ ಶ್ರಮಿಕ ವರ್ಗದ ನಿತ್ಯ ಬದುಕಿನ ಬವಣೆಯ ವಾಸ್ತವ ಚಿತ್ರಣ[೫].

ಮೂಲಗ್ರಾಮ ಮೆಳವಂಕಿ ಬರಗಾಲ ಬಡತನ ಹೊಟ್ಟೆ ಹೊರೆಯಲು ಅಜ್ಜ, ಅಜ್ಜಿ, ಗೋಕಾಕ ಶಹರಕ್ಕೆ ವಲಸೆ ಬಂದು ೧೯೩೫ ರ ಸುಮಾರಿನಲ್ಲಿ ಗೋಕಾಕ ಗಿರಣಿಯಲ್ಲಿ ಕೆಲಸ ಮಾಡುತ್ತಾ ಇಲ್ಲಿ ಬಂದು ನೆಲೆಸುತ್ತಾರೆ. ಶಾಬಣ್ಣ ಅಜ್ಜ – ಕೃಷಿಕ ಅನುಭಾವಿಶರಣ ಜನಜಾನುವಾರಗಳಿಗೆ ಔಷಧಿ ತಿಕ್ಕುವುದು ಕಟ್ಟುವುದರೊಂದಿಗೆ ಪುರಾಣ ಪ್ರವಚನದಲ್ಲಿ ಆಸಕ್ತಿ. ಮಹಾಲಿಂಗರ ಬಾಲ್ಯ ಸಂಗಾತಿ ಬೆರಳು ಹಿಡಿದು ನಡೆಯಲು ಕಲಿಸಿದಾತ, ರಾಮಾಯಣ – ಮಹಾಭಾರತ ಕಥೆ ಹೇಳುತ್ತ, ಹೆಗಲ ಮೇಲೆ ಹೊತ್ತು ತಿರುಗಾಡಿ ಪ್ರಪಂಚ ತೋರಿಸಿದಾತ.

ಅವ್ವಕ್ಕ ಅಜ್ಜಿ : ಕಾರ್ಮಿಕ ವೃತ್ತಿ, ನಡೆದಾಡುವ ಗಾದೆಗಳ ಕೋಶ. ಜೋಗುಳ ಜಾನಪದಗಳ ಖಜಾನೆ ಅಕ್ಷರಸ್ಥೆಯಲ್ಲದಿದ್ದರೂ ಅನುಭವಸ್ಥೆ. ಊರ ಅಬಚಿ, ಬಸಿರು ಬಾಣಂತನ, ಮಕ್ಕಳ ಕಸಾರಿಕೆ, ಹಬ್ಬ ಹರಿದಿನ, ಬಷ್ಟಗಿ, ಕುಬುಸ ಸಂಪ್ರದಾಯಕ್ಕೆಲ್ಲರಿಗೂ ಸಿರಿಯಜ್ಜಿಬೇಕು. ತಂದೆ ತಾಯಿಗೆ ಬೇಗನೆ ಮಕ್ಕಳು ಹುಟ್ಟಿದ್ದರಿಂದ ಮಹಾಲಿಂಗರು ವರ್ಷದಲ್ಲೇ ಅಜ್ಜಿಯ ಮಡಿಲಿಗೆ ಬಂದುಬಿದ್ದರೂ. ಆಕೆಯ ಕೂಸಾಗಿಯೇ ಬೆಳೆದರು.

ಅಜ್ಜನ ಅನುಭಾವ, ಅಜ್ಜಿಯ ಜಾನಪದ ಪ್ರಭಾವ ಅನಾಯಾಸವಾಗಿ ಒದಗಿ ಬಂತು.

ತಾಯಿ – ಕಲ್ಲವ್ವ : ಅನಕ್ಷರಸ್ಥೆ ಅಮಾಯಕ ಮುಗ್ಧ ಹೆಣ್ಣುಮಗಳು.

ತಂದೆ – ಶಂಕರೆಪ್ಪ : ಕೂಲಿ ಕಾರ್ಮಿಕ, ಮುಲ್ಕಿ ಓದಿದಾತ, ವ್ಯವಹಾರಸ್ಥ, ಕಾರ್ಮಿಕ ಪ್ರತಿನಿಧಿ ಮುಂದಾಳು, ಹೋರಾಟಗಾರ, ರಂಗಕಲಾವಿದ, ಕೊಣ್ಣೂರು ಮುನಸಿಪಾಲಿಟಿಯಲ್ಲಿ ಸದಸ್ಯ, ಕಮ್ಯುನಿಷ್ಟ ಪಾರ್ಟಿ ಸದಸ್ಯ, ಸಾಮಾಜಿಕ ಕಾರ್ಯಕರ್ತ, ಸಾಹಿತ್ಯದ ಓದಿನ ರಂಗ ಅಭಿನಯದ ಗೀಳು ಜೊತೆಗೆ ಕೆಲ ದೌರ್ಬಲ್ಯಗಳು ನಿಷ್ಠುರ ನೇರ ನಡೆ ನುಡಿಯ ಮುಂಗೋಪಿ ಮಗನಿಗೆ ಮೂಲಾಕ್ಷರ ಕಲಿಸಿದ ಮೊದಲ ಗುರು ಆದರೂ ಅಪ್ಪ. ಮಗನ ನಡುವೆ ಸಲುಗೆ ಸಖ್ಯ ತೀರಾ ಅಪರೂಪ.

ಗೋಕಾಕ ಫಾಲ್ಸ್ ಅಧಿಸೂಚಿತ ಪ್ರದೇಶ :

ನೋಟಿಪಾಯ್ಡ ಏರಿಯಾ ಖಾಸಗಿ ಒಡೆತನ ಗಿರಣಿ ಮನೆ ಎಲ್ಲವೂ ಗಿರಣಿ ಕಾಯ್ದೆ. ಪಗಾರ ವಾಯ್ದೆ, ಬಾಡಿಗೆ ಬದುಕು ಕಂಪನಿ ಕಾನೂನು ಅಪ್ಪಣೆಯಿಲ್ಲದೇ ಹುಲ್ಲುಕಡ್ಡಿಯೂ ಅಲುಗಾಡದು. ಸ್ವತಂತ್ರ ಭಾರತದ ನಡುವೆ ಗೋಕಾಕ ಫಾಲ್ಸ್ ಪಾರತಂತ್ರದ ನಡುಗಡ್ಡೆ ವಸಾಹತುಶಾಹಿಗಳ ಗಿರಣಿ ೧೯೮೦ ರವರೆಗೂ ಬ್ರಿಟಿಷರಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದರೂ ದುಡಿಯುವ ವರ್ಗಕ್ಕೆ ಸ್ವಾತಂತ್ರ್ಯವೇ ಇಲ್ಲ. ಮಹಾಲಿಂಗ ಮಂಗಿಯವರ ಮಾತಿನಲ್ಲೇ ಹೇಳಬೇಕೆಂದರೆ ಒಂದು ನಮೂನೆ ಗುಲಾಮಗಿರಿ, ಪರಾವಲಂಬಿ, ಶೋಷಿತ ಬದುಕು. ಅರೆಹೊಟ್ಟೆಯ ಅರೆಸತ್ತ ಬದುಕು. ಇತ್ತ ಸಾಯಲೂ ಬಿಡದು, ಅತ್ತ ಬದುಕು ಬೆಳೆಯಲು ಕೊಡದು. ಏಕತಾನತೆಯ ಯಾಂತ್ರಿಕ ಬದುಕು. ಸ್ವಂತಿಕೆ ಸೃಜನಶೀಲತೆಗಳನ್ನೆಲ್ಲ ಮುಗುಚಿ ಹಾಕುವ ಅಪಾಯದ ಮಧ್ಯದಲ್ಲಿ ಸಾಂಸ್ಕೃತಿಕ ಬರಡು ನೆಲೆದಲ್ಲಿ ಅಡ್ಡಿ ಆತಂಕಗಳ ನಡುವೆ ಅಸಹಾಯಕರನಂತೆ ಮಹಾಲಿಂಗ ಮಂಗಿಯವರ ಕನಸುಗಳನ್ನು ಬಿತ್ತಲೆತ್ನಿಸುತ್ತಾರೆ ಹಾಗೂ ಆಸೆಯುಗಳಿಗೆ ಆಕಾರ ಕೊಡುತ್ತಾರೆ.

೧೯೬೪ ರಲ್ಲಿ ಅವಿಭಕ್ತ ಕುಟುಂಬ ಒಡೆದಿರುತ್ತದೆ. ತಂದೆಗೆ ಗಂಟರು ಕ್ಯಾನ್ಸರ ಹಿಡಿದಿರುತ್ತದೆ. ಉದ್ಯೋಗ ವ್ಯವಹಾರ ಆದಾಯ ಪೂರ್ಣನಿಂತು ಹಾಸಿಗೆ ಹಿಡಿದು ಆಸ್ಪತ್ರೆಗಳಿಗೆ ಅಲೆದಾಟ. ಗೋಕಾಕ, ಘಟಪ್ರಭಾ, ಬೆಳಗಾವಿ, ಹುಬ್ಬಳ್ಳಿ, ಮಿರಜ, ಬೆಂಗಳೂರು ಚಿಕಿತ್ಸೆಗಾಗಿ ಪರದಾಟ. ಮಿತಿಮಿರಿದ ಖರ್ಚುವೆಚ್ಚಗಳ ಜೊತೆಗೆ ಸಾಲಸೋಲಗಳು, ದುಷ್ಕಾಳ ಸ್ಥಿತಿ. ತಂದೆಯ ಅಕಾಲ ಮರಣ ೧೯೬೬ ರಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ ೧೯೬೬ ರಲ್ಲಿ ೧೬ ವರ್ಷ. ಗಿರಣಿ ಕೂಲಿ ಕೆಲಸಕ್ಕೆ ಭರ್ತಿಯಾಗುತ್ತಾರೆ. ಎಳೆಯ ಹೆಗಲ ಮೇಲೆ ಸಂಸಾರದ ಬಹುದೊಡ್ಡ ಹೊರೆ ಹಾಗೂ ಸಾಲದಭಾರ.

ಮುಂದಿನದನ್ನು ಅವರ ಮಾತುಗಳಲ್ಲೆ ಕೇಳಬೇಕು : ನಾನು ದಾಟಿ ಬಂದ ಅಗ್ನಿದಿವ್ಯಗಳೆಲ್ಲ ನನ್ನ ನೆನಪಿನಲ್ಲಿ ಇನ್ನು ಜಿವಂತ. ಹದಿನಾರನೇ ವಯಸ್ಸಿನಲ್ಲಿ ಇಡೀ ಕುಟುಂಬವನ್ನು ಅಕ್ಷರಶಃ ಬೀದಿ ಬಯಲಲ್ಲಿ ಬಿಟ್ಟು ಅಪ್ಪ ಕ್ಯಾನ್ಸರನಿಂದ ಕಣ್ಮರೆಯಾದಾಗ, ನನ್ನ ಬದುಕು ನಾನೇ ರೂಪಿಸಿಕೊಳ್ಳಬೇಕಾದ

ವಿಷಯ ಸನ್ನಿವೇಶ. ಓದಿಗೆ ನಮಸ್ಕಾರ ಹೇಳಿ ಸಾಲಸೋಲುಗಳಿಂದ ತತ್ತರಿಸುವ ಬಡಸಂಸಾರ ನೋಗಕ್ಕೆ ಹಿರೇಮಗನಾಗಿ ಹೆಗಲು ಕೊಟ್ಟಿದ್ದು ಕೂಲಿಕಾರ್ಮಿಕನಾಗಿ ಗಿರಣಿ ಸೇರಿ ಉಸಿರು ಉಳಿಸಿಕೊಂಡಿದ್ದು, ಬೆನ್ನಿಗೆ ಬಿದ್ದ ತಾಯಿ, ಮೂವರು ತಂಗಿಯರ ಗಂಜಿಗೊಂದುದಾರಿ ಮಾಡಿಕೊಂಡಿದ್ದು ಅನುಭವಿಸಿದ ದುಃಖ ನೋವು, ಉಪವಾಸ, ವನವಾಸ, ಹೌದು. ಹುಲ್ಲಿಗಾಗಿ ಕುಡುಗೋಲು ಗೋಣಿ ಚೀಲ ಹಿಡಿದು ದೂರದ ಗುಡ್ಡ ಕಾಡು ಅಲೆದು ಕಾಯ್ದು ಶೆಗಣಿ ಬಳಿದು, ಎಮ್ಮೆ ಮೈತೊಳೆದು, ಕಡೆಗೆ ಕರಿಚಹಾ ಕುಡಿದದ್ದು ಸಹ ಎಲ್ಲವೂ ಬಾಳಬುತ್ತಿಯಲ್ಲಿವೆ.

'ಹಿಂದೆ ಗುರುವಿಲ್ಲ ಮುಂದೆ ಗುರಿಯಿಲ್ಲ'. ಅನಾಥ ದಿಕ್ಕೆಟ್ಟ ದುರ್ದಿನಗಳಲ್ಲಿ ಪರಿತಪಿಸುತ್ತ ಸಾವು ಬದುಕಿನ ನಡುವೆ, ಸಾಮಾಜಿಕ ಅನ್ಯಾಯ ಅಸಮತೆಗಳ ನಡುವೆ, ಒಂಟಿಯಾಗಿ ದುಷ್ಟ ಹಿತಾಸಕ್ತಿಗಳ ವಿರುದ್ಧ ಹೋರಾಡುತ್ತ, ದಾರುಣ ದುಃಖ, ದೌರ್ಜನ್ಯ ದಬ್ಬಾಳಿಕೆಗೆ, ನಡುವೆ ಹಗಲು ರಾತ್ರಿ ಅನುಭವ ಅಭ್ಯಾಸಗಳ ತಪಸ್ಸಿನ ಅನ್ವೇಷಣೆಯಲ್ಲಿ ಅಸ್ತಿತ್ವದ ಹುಟುಕಾಟದಲ್ಲಿ ಅನಿಶ್ಚಿತ ಆತಂಕದಲ್ಲಿ ಕ್ಷಣಗಳಲ್ಲೇ ಬದುಕು ಹರಳು ಗಟ್ಟಿದ್ದು ಮರೆಯಲುಂಟೆ?.

ಸಾಗಿ ಬಂದ ದಾರಿ ಹೂವಿನ ಹಾಸಿಗ ಯಾಗಿರಲಿ, ಅಪ್ಪನ ರಾಜಕೀಯ ವಿರೋದಿಗಳ ಹಿಕಮತಿ, ಪ್ರತಿಕೂಲ ಪ್ರತಿರೋಧಗಳ ನಡುವೆ ಏಕಾಂಗಿ ಹೋರಾಟ, ಸುರ್ಯೋದಯದಿಂದ ಸುರ್ಯಾಸ್ತದವರೆಗಿನ ಹಗಲು ರಾತ್ರಿ ಪಾಳಿಗಳಲ್ಲಿ ಬಹುತೇಕ ಹೊತ್ತು ನನ್ನವರ ತುತ್ತಿನ ಚೀಲ ತುಂಬುವ ಕಾಯಕವೇ ನುಂಗಿ ನೀರು ಕುಡಿಯುವಾಗ, ಮಾನವೀಯ ಕುಡಿತ, ಸಾರ್ವಜನಿಕ ಸೇವೆ ಸಂಘಟನೆ, ಪ್ರಗತಿಶೀಲ ಚಳುವಳಿ ಹಾಗೂ ಸಾಮಾಜಿಕ ಹೋರಾಟಗಳು, ಜೀವಾಪಾಯಗಳ ಆತಂಕ ಅಸ್ಥಿರತೆಗಳ ನಡುವೆ ಸಾಗಬೇಕಾದ ಸಂದಿಗ್ದತೆ ಒಂದೆಡೆ, ಅನಾನುಕೂಲ ಅನಾರೋಗ್ಯದಲ್ಲಿ ಬಾಳಿನ ಪ್ರತಿ ಹೆಜ್ಜೆಯನ್ನು ಸಂಕಷ್ಟ ಮುಗ್ಗಟ್ಟಿನೊಂದಿಗೆ ಮುನ್ನೆಡೆಯಬೇಕಾದ ಅನಿವಾರ್ಯತೆ. ಗಿರಣಿಯ ಅತ್ಯಲ್ಪ ಕೂಲಿಯನ್ನೇ ಮೆಚ್ಚಿಕೊಂಡು ಕಚ್ಚಿಕೊಂಡು ಮುಂದುವರೆಬೇಕು. ಜೊತೆಗೆ ಸೇನೆ ಸಾಧನೆಯಲ್ಲಿಯೂ ಕೂಡಾ ತೊಡಗಬೇಕು.

ಮಹಾಲಿಂಗ ಮಂಗಿಯವರ ಏಕಲವ್ಯನಂತೆ ತನಗೆ ತಾನೇ ಗುರುವಾಗಿ ತನ್ನ ದಾರಿಯನ್ನು ತಾವೇ ನಿರ್ಧರಿಸಿಕೊಳ್ಳುತ್ತಾರೆ. ದಬದಭೆಯ ಶಬ್ದ ಯಂತ್ರಗಳ ಸದ್ದು ಊರು ಓಣಿ ರಾತ್ರಿ ಕತ್ತಲನ್ನು ಹೊದ್ದು ಭ್ರಮೆಗಳಲ್ಲಿ ನರುಳುವಾಗ ಕರಿಹಂಚಿನ ಗೂಡಿನಲ್ಲಿ ಚಿಮಣಿ ಬುಡ್ಡೆಯ ಮಿನುಕು ಬೆಳಕಿನಲ್ಲಿ ಕಣ್ತೆರೆದು ಧ್ಯಾನಿಸುತ್ತಾರೆ. ಸಾಹಿತ್ಯ ಚಿತ್ರಕಲೆ ರಂಗಕಲೆಗಳನ್ನು ಹಠಯೋಗಿಯಂತೆ ಆರಾಧಿಸುತ್ತಾರೆ. ಹಗಲು ಬಿಡುವಿನಲ್ಲಿ ಗಿರಣಿ ಕೂಲಿ ಕಾರ್ಮಿಕರು ಸರ್ಕಾರಿ ದಿನಗೂಲಿ ನೌಕರರ ಸಂಘಟನೆಗೆ ಹೋರಾಟಗಳಲ್ಲಿ ಸಾಮಾಜಿಕ ಸಾಹಿತ್ಯಿಕ, ಸಾಂಸ್ಕೃತಿಕ ಸೇವೆಯಲ್ಲಿ ನಾಡುನುಡಿ ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಂತು ಕಾರ್ಯಪ್ರವೃತ್ತರಾಗುತ್ತಾರೆ.

'ಓದು ಒಕ್ಕಾಲು – ಬುದ್ದಿ ಮುಕ್ಕಾಲು' ಎಂಬಂತೆ ಓದಿದ್ದು, ಕೇವಲ ೧೦ ನೇ ತರಗತಿಯಾದರೂ ಬಾಹ್ಯ ವಿದ್ಯಾರ್ಥಿಯಾಗಿ ಪತ್ರಿಕೋದ್ಯಮ ಕೋರ್ಸು ಮುಗಿಸಿ ಮತ್ತು ಎಂ.ಎ. ಪದವಿಯನ್ನು ಗಳಿಸುತ್ತಾರೆ. ಸಾವಿರ ಗ್ರಂಥ ಕೋಶ ಓದುತ್ತಾರೆ. ನೂರಾರು ಕಡೆ ಸಾಂಸ್ಕೃತಿಕ ಪ್ರವಾಸ ಕೈಗೊಂಡು ದೇಶ ನೋಡುತ್ತಾರೆ. ಅಭ್ಯಾಸ ಅನುಭವಕ್ಕಾಗಿ ಕೋಶ ಓದಬೇಕು ದೇಶ ನೋಡಬೇಕು.

೨.೨ ಅಭಿವ್ಯಕ್ತಿ ಬದುಕು :

ಅವಕಾಶಗಳಿಗಾಗಿ ಕಾಯದೆ ಹುಡಿಕಿಕೊಂಡು ಹೋಗುತ್ತಾರೆ. ಮನೆ ಸಮೀಪದಲ್ಲಿ ರಂಗತಾಲೀಮು ಬಯಲಾಟದ ಮನೆಗೆ ನಿತ್ಯ ಹೋಗುವುದು. ಹತ್ತಿರದಲ್ಲೇ ಭಜನಾ ಮನೆಗಳಿದ್ದು, ಅಲ್ಲಿಗೂ ಹೋಗಿ ಕೂಡುವುದು ಮಾಡುತ್ತಾರೆ. ಚಿಕ್ಕಂದಿನಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಶಾಲಾ ಮಸ್ತಕ ನೋಡಿ ನಕಾಶೆ ಮತ್ತು ಇತಿಹಾಸ ಪುರುಷರ ಚಿತ್ರ ಬಿಡಿಸುವ ಹವ್ಯಾಸ. ೭–೮ ನೆಯ ವಯಸ್ಸಿನಲ್ಲೇ ನಾಟಕದಲ್ಲಿ ಪಾತ್ರಕ್ಕೆ ಕರೆದುಕೊಂಡಾಗ ಆ ಬಣ್ಣದ ಗೀಳು ಬಲಿಯುತ್ತ ಸಾಗುತ್ತದೆ. ೮–೧೦ ನೇ ವಯಸ್ಸಿನಲ್ಲಿ ನಾಟಕ ಬರೆದು ಆಡುವ ಪ್ರಯತ್ನ ಮಾಡಿದರು. ಅದಕ್ಕೆ ಅಜ್ಜ ಕತ್ತಿಬಿಲ್ಲು ಬಾಣ ಕಿರಿಟ ತಯಾರಿಸಿಕೊಟ್ಟು ಪ್ರೋತ್ಸಾಹಿಸುತ್ತಾನೆ. ಚಿಕ್ಕಂದಿನಲ್ಲೆ ಅಪ್ಪ ಮತ್ತು ಆತನ ಸಂಗಾತಿಗಳು ಸಂಪು ಸತ್ಯಾಗ್ರಹ ಮಾಡುವುದು. ಸಭೆಯಲ್ಲಿ ಭಾಷಣ ಮಾಡುವುದನ್ನು ಕುತೂಹಲದಿಂದ ಗಮನಿಸುತ್ತಾ ಅಪ್ಪ ತಂದೆ ಕಥೆ, ಕಾದಂಬರಿ, ಚಂದಮಾಮ ಓದುವವರೊಂದಿಗೆ ಓದುವ ಹವ್ಯಾಸವು ಬೆಳೆಯುತ್ತದೆ.

೧೮–೨೦ ನೇ ವಯಸ್ಸಿಗೆ ಬರುವಷ್ಟರಲ್ಲಿ ಏನಾದರೂ ಮಾಡಬೇಕು, ಸಾಧಿಸಬೇಕೆಂಬ ತುಡಿತ, ಆಗಲೇ ಮಹಜನ ವರದಿ ಚಳುವಳಿ ಬಂಧ ಸಂಗತಿಸಿದ್ದು ನಾಡು–ನುಡಿ ಕುರಿತು ಅಭಿಮಾನ ಪ್ರೀತಿ ಬೆಳೆಸಿಕೊಂಡು ಬಂದಿದ್ದು. ಗೋಕಾಕ ಸಾಹಿತಿಗಳಲ್ಲಿ ಪತ್ರಕರ್ತರಲ್ಲಿ ಎಡತಾಕುತ್ತ ಕಾರ್ಯಕ್ರಮಗಳಲ್ಲಿ ನಾಡ ಹಬ್ಬಗಳಲ್ಲಿ ಪಾಲ್ಗೋಳುತ್ತ ಬರುತ್ತಾರೆ. ಗೋಕಾಕದಲ್ಲಿ ಗೋಕಾಕ ವರದಿ ಜಾರಿಗಾಗಿ ಎಷ್ಟೇಲ್ಲ ಹಿರಿಯ ಸಾಹಿತಿ ಸಾಮಾಜಿಕ ಕಾರ್ಯಕರ್ತರು ಮುಂದೆ ಬಾರದಿದ್ದಾಗ ಫಾಲ್ಸ್‌ನಿಂದ ನಾಲ್ವರು ಗೆಳೆಯರೊಂದಿಗೆ ಹೋಗಿ ಮೊದಲ ಸತ್ಯಾಗ್ರಹಿಯಾಗಿ ತಹಶೀಲ್ದಾರರ ಕಛೇರಿ ಮುಂದೆ ನಿರಶನ ಕೈಕೊಂಡಿದ್ದು, ಪ್ರಗತಿಶೀಲ ಲೇಖಕರ ಸಂಘ, ಜ್ಯೋತಿ ಕಲಾವಿದರು ಹವ್ಯಾಸಿ ರಂಗತಂಡ ಕಟ್ಟಿದ್ದು, ಪತ್ರಿಕೆಗಳಿಗೆ ಬರೆಯುತ್ತ, ಮಸ್ತಕ ಬರೆಯುತ್ತ ಕಾರ್ಯಕ್ಷೇತ್ರ ವಿಸ್ತರಿಸಿಕೊಳ್ಳುತ್ತ ಸಾಗುತ್ತಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡು ಸಾಮಾಜಿಕ ಸಾಂಸ್ಕೃತಿಕ ಸೇವೆಯಲ್ಲಿ ಬಿಡುವಿಲ್ಲದೇ ತೊಡಗಿಸಿಕೊಳ್ಳುತ್ತಾರೆ[೬].

ಮನೆಯಲ್ಲಿ ಆರ್ಥಿಕ ಮುಗ್ಗಟ್ಟಿನಲ್ಲಿ ಬೆನ್ನಿಗೆ ಬಿದ್ದ ತಂಗಿಯರಿಗೆ ವಿದ್ಯೆ ಬದುಕು ಕಲ್ಪಿಸಿಕೊಟ್ಟು ತಾನು ಬದುಕು ಕಟ್ಟಿಕೊಳ್ಳುವುದು ಒಂದು ಬದುಕಿನ ಹೋರಾಟವಾದರೆ ಮಿಲ್ಲಿನಲ್ಲಿ ಆಡಳಿತ ಮಂಡಳಿ ಮತ್ತು ಅಪ್ಪನ ರಾಜಕೀಯ ವಿರೋಧಿ ಸಂಘಟನೆ ಸಮುದಾಯದ ಕೂಡಾ ಅವರ ಗುಂಡಾಗಿರಿ ಎದುರಿಸಿ ಏಕಾಂಗಿಯಾಗಿ ಬದುಕುವುದು ಒಂದು ಸವಾಲಾಗಿತ್ತು. ಈ ಎಲ್ಲದರೊಂದಿಗೆ ನಾಡು

ನುಡಿ ಹೋರಾಟ ಕಾರ್ಮಿಕರಿಗಾಗಿ ದಿನಗೂಲಿ ನೌಕರರಿಗಾಗಿ ಹೋರಾಟ, ಜಿಲ್ಲೆಗಾಗಿ ಹೋರಾಟ, ಸಾಹಿತ್ಯ ಸಂಸ್ಕೃತಿ ಸೇವೆ ಸಾಧನೆಯೊಂದಿಗೆ ಅಸ್ತಿತ್ವಕ್ಕಾಗಿ ಹೋರಾಟ. ಈ ಎಲ್ಲ ಪ್ರತಿರೋಧಗಳ ನಡುವೆಯೂ ಅದನ್ನೇ ಪ್ರತಿರೋಧ ಶಕ್ತಿಯನ್ನಾಗಿಸಿಕೊಂಡು, ಹಠದಿಂದ ಛಲದಿಂದ ಉಳಿದು ಬೆಳೆಯುವ ಸಂಕಲ್ಪ ತೊಡುತ್ತಾರೆ.

ಗೋಕಾವಿ ಪರಿಸರದ ಬಹುಮುಖ ಪ್ರತಿಭೆ – ಸೇವೆಯ ಕವಿ ಸಾಹಿತಿ. ರಂಗ ಕಲಾವಿದನಾಗಿ ತಮ್ಮ ಹೆಜ್ಜೆ ಗುರುತು ಮೂಡಿಸುತ್ತಾರೆ. ಮನುಷ್ಯನಿಗೆ ಸಕಲ ಸುಖ ಸೌಲಭ್ಯಗಳಿದ್ದರೆ ಆತ ಏನೂ ಸಾಧಿಸಲು ಮುಂದಾಗಲಾರ. 'ಹಸಿವು ಬಡತನಕ್ಕಿಂತ ಬೇರೆ ಗುರುವಿಲ್ಲ' ಎಂಬ ತನ್ನ ಸಮಸ್ಯೆ ಸವಾಲುಗಳೇ ತಾನು ಉಳಿದು ಬೆಳೆಯಲು ಪ್ರೇರೆಪಿಸಿದವು ಎನ್ನುತ್ತಾರೆ ಕವಿಗಳು. ವ್ಯಕ್ತಿಯ ಸಾಧನೆಯಲ್ಲಿ ಹೊರಗಿನ ಪರಿಸರದಷ್ಟೇ ಒಳಗಿನ ಮನೆಯ ವಾತಾವರಣ ಕೂಡಾ ಅಷ್ಟೇ ಮುಖ್ಯ. ಇಬ್ಬರೂ ತಂಗಿಯರನ್ನು ಓದಿಸಿ ಶಿಕ್ಷಕಿಯರನ್ನಾಗಿಸಿ ಮಾಡಿದ ಮೇಲೆ ತಾವು ಎಂ.ಎ. ಮಾಡುತ್ತಾರೆ. ಮೂವರು ತಂಗಿಯರಲ್ಲಿ ಎರಡನೆಯವಳಿಗೆ, ಮೂರನೆಯವಳಿಗೆ ಲಗ್ನ ಮಾಡಿ, ಇಬ್ಬರನ್ನು ಶಿಕ್ಷಕಿ ನೌಕರಿಗೆ ಅರ್ಹರಾಗುವಂತೆ ಮಾಡಿದ ಮೇಲೆ ತಾವು ಮದುವೆಯಾಗುತ್ತಾರೆ.

ಮೊದಲ ತಂಗಿ ನೌಕರಿ ಹಿಡಿದ ಮೇಲೆ ಪರಿಸ್ಥಿತಿ ಸುಧಾರಿಸುತ್ತದೆ. ಸಂಕಟಗಳು ಒಂದೇ ಸಮನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಆತಂಕ ದಿಗಿಲು ಕಡಿಮೆಯಾಗುತ್ತದೆ. ಮಹಾಲಿಂಗಮಂಗಿಯವರು ಮಡದಿ ವಿಜಯಲಕ್ಷ್ಮೀ ಮತ್ತು ಮದುವೆಯಾಗದೆ ಉಳಿದ ಗುರುಮಾತೆ ಲಕ್ಷ್ಮೀಬಾಯಿ ಕುಟುಂಬದ ಸಮಸ್ತ ಆಗು ಹೋಗುಗಳ ಚಿಂತೆ ವ್ಯಾಪ ಜವಾಬ್ದಾರಿ ಹೊತ್ತರೆಂದು ಮಹಾಲಿಂಗರು ಇಷ್ಟೆಲ್ಲಿ ಓದಲು ಬರೆಯಲು, ಎಂ.ಎ. ಮಾಡಲು ಹೋರಾಟ ಸಾಧನೈಗೆಯಲು ಪೂರಕ ವಾತಾವರಣ ನೆರವಾಯಿತು. ಸಾಹಿತ್ಯ ರಂಗ ಸಂಗಾತಿಗಳು, ಸಮಾಜ ಗಿರಣಿ ಕಾರ್ಯಕರ್ತರು ಮನೆಗೆ ಬಂದು ಹೋಗುವುದು ಎಲ್ಲವನ್ನು ನಿಭಾಯಿಸಿದರು. ಮಾತ್ರವಲ್ಲಿ ಸಾಹಿತ್ಯಕ್ಕೆ ಸಾಥನೆ ನೀಡದಿದ್ದರೂ ಹೆಂಡತಿ ಮತ್ತು ತಂಗಿ ಸಾರ್ವಜನಿಕ ಸೇವೆ, ರಾಜ್ಯೋತ್ಸವ, ಆರೋಗ್ಯ ಶಿಬಿರ, ನಾಟಕ ಪ್ರತಾಪ ಸತ್ಯಾಗ್ರಹ ಎಲ್ಲವನ್ನು ಬೆಂಬಲಿಸಿದರು ಹಾಗೂ ಸಹಕರಿಸಿದರು ಕೂಡಾ, ಮಹಾಲಿಂಗ ಮಂಗಿಯವರ ಏಕಾಗ್ರತೆ ಬರವಣಿಗೆಗೆ ಸಂಪೂರ್ಣ ಸಹಯೋಗ ನೀಡಿದ್ದನ್ನು ಮರೆಯಲಾಗದು.

೨.೩ ಪ್ರೇರಣೆ :

ಮನುಷ್ಯನ ಮೇಲೆ ಬಾಲ್ಯ ಜೀವನದ ಪ್ರಭಾವ ಪ್ರೇರಣೆ ಅಚ್ಚಳಿಯದ್ದು ಗೋಕಾಕ ಫಾಲ್ಸ್, ಚೆತೋಹಾರಿ ಜಲಪಾತ ಪರಿಸರ, ರುದ್ರರಮಣೀಯ ದೃಶ್ಯಕಾವ್ಯ. ಅಜ್ಜಿ ಹಾಡುವ ಗರತಿಹಾಡು, ಜೋಗುಳ ಪದಗಳು, ಸಂಪ್ರದಾಯದ ಹಾಡುಗಳು, ಅಜ್ಜಿಯ ಅನುಭಾವ ದರ್ಶದ, ಅಪ್ಪನ ಜೀವಂತ ಸಂಘರ್ಷದ ಸಾಮಾಜಿಕ ಬದುಕು, ಅವರ ಪ್ರಭಾವ ಅಪರವಾದುದು. ಮಂಗಿಯವರ ತಂದೆಗೂ

ಓದುವ ಗೀಳು ಚಂದಮಾಮ, ಕಟ್ಟಿಮನಿ, ಪುರಾಣಿಕ, ಎನ್. ನರಸಿಂಹಯ್ಯ ಅವರ ಕಾದಂಬರಿಗಳು. ಅರೇಬಿಯನ್ ನೈಟ್ಸ್; ಮೊದಲಾದ ಪುಸ್ತಕ ಓದು ಕೂಡಾ ಅವರನ್ನು ಓದಿನತ್ತ, ಸಾಹಿತ್ಯದತ್ತ ಪ್ರಾರಂಭಿಸಿದವು.

ಗೋಕಾಕ ಫಾಲ್ಸ್ ಔದ್ಯೋಗಿಕ ಕ್ಷೇತ್ರದಲ್ಲಿ ವಾರಕ್ಕೆರಡು ಬಿಟ್ಟಿ ಸಿನಿಮಾ ಬಯಲಲ್ಲಿ ಪ್ರದರ್ಶಿಸಲ್ಪಡುತ್ತಿದ್ದರು. ೧೯೫೭–೧೯೯೭ ರವರೆಗೆ ಸುಮಾರು ೪ ದಶಕ ವಾರಕ್ಕೆರಡು ಸಿನಿಮಾ ತಪ್ಪದೇ ನೋಡುತ್ತಾ ಬಂದಿದ್ದಾರೆ. ರವಿವಾರ – ಹಿಂದಿ ಸಿನಿಮಾ, ಬುಧವಾರ – ಇಂಗ್ಲೀಷ ಸಿನಿಮಾ, ಆಗಿನ ನಾಟಕಗಳು ಕೂಡಾ ಸಾಹಿತ್ಯ ನಟನೆಯತ್ತ ಆಕರ್ಷಿಸಿದವು. ಕನ್ನಡ ಪ್ರಾಧ್ಯಾಪಕರು ಶ್ರೀ ಅಗರಖೇಡ ಅಂತವರು ಎಸ್. ಎಂ. ಕುಲಕರ್ಣಿಯಂತವರು ಪಾಠ ಪುಸ್ತಕ ಮೂಲಕ ಅಭಿರುಚಿ ಕೆರಳಿಸಿದರು. ಓದುವ ಚಟ ಬೆಳೆದಂತೆ ಕನ್ನಡ ಸಾಹಿತ್ಯದ ಸರ್ವಜ್ಞ, ಬಸವ ಚನ್ನಬಸವ ಅಲ್ಲಮಾದಿ, ಅಕ್ಕಮಹಾದೇವಿಯಂತ ಶಿವಶರಣರು, ದಾಸರು, ಕುಮಾರವ್ಯಾಸ, ಹರಿಹರ ರಾಘವಾಂಕ ಆದಿಕವಿಗಳು ಅನಂತರ ಹೊಸಗನ್ನಡದ ಬೇಂದ್ರೆ, ಕುವೆಂಪು, ಪು.ತಿ.ನ. ಶಿವರುದ್ರಪ್ಪ, ಕೆ. ಎಸ್. ನರಸಿಂಹಸ್ವಾಮಿ, ಕಣವಿ ಕಾವ್ಯದಲ್ಲಿ, ಬಸವರಾಜ ಕಟ್ಟಿಮನಿ, ಕೃಷ್ಣಮೂರ್ತಿ ಪುರಾಣಿಕ, ನರಸಿಂಹಯ್ಯ, ಭೈರಪ್ಪ, ತ್ರಿವೇಣಿ, ದುಂ. ನಿ. ಬೆಳಗಲಿ ಸಾಹಿತ್ಯ ಕೂಡಾ ಅವರಿಗೆ ಸ್ಫೂರ್ತಿ ಪ್ರೇರಣೆ ನೀಡಿವೆ.

ಗೋಕಾವಿ ನಾಡಿನ ಹಿರಿಯ ಸಮಕಾಲಿನ ಸಾಹಿತ್ಯ ಸಂಗತಿಗಳು ಬರವಣಿಗೆಯ ಹುಚ್ಚು ಬೆಳೆಯಲು ಬಲಿಯಲು ಪ್ರತ್ಯಕ್ಷ ಪರೋಕ್ಷ ಕಾರಣರು. ವಿಶೇಷವಾಗಿ ಬಸವರಾಜ ಕಟ್ಟಿಮನಿ, ಕೃಷ್ಣಮೂರ್ತಿ ಪುರಾಣಿಕ, ಡಾ. ಚಂದ್ರಶೇಖರ ಕಂಬಾರ, ನಿಂಗಯ್ಯ ಸ್ವಾಮಿ ಪೂಜಾರಿ, ಕಾ. ಬಿ. ಎನ್. ಧಾರವಾಡಕರ, ಶಂಕರ ಮುಂಗರವಾಡಿ, ಪ್ರೊ. ಚಂದ್ರಶೇಖರ ಅಕ್ಕಿ ಅವರ ನಿರಂತರ ಒಡನಾಟ ನೇರ ಸಂಪರ್ಕಗಳು, ಅದೇ ರೀತಿ ಚಂಪಾ, ದುಂ. ನಿ. ಬೆಳಗಲಿ, ಮೇಘಮಿತ್ರ ವಜ್ರಮಟ್ಟಿ, ಮಲ್ಲಿಕಾರ್ಜುನ ಹೆಗ್ಗಳಗಿ, ಶಿವಾನಂದ ಬೆಳಕೂಡ, ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಬಿ. ಆರ್. ಪೋಲಿಸ ಪಾಟೀಲ, ಡಾ. ಅಶೋಕ ನರೋಡೆ, ಡಾ. ಸರಜೂ ಕಾಟ್ಕರ, ಎಂ. ಆರ್. ದೊರೆಸ್ವಾಮಿ ಅಂತಹ ಸಂಗಾತಿಗಳ ಸ್ನೇಹ ಸಂಪರ್ಕ ಸಾಂಗತ್ಯ ಸಮಾಲೋಚನೆಗಳು ಪ್ರಗತಿಶೀಲ ಲೇಖಕರ ಸಂಘ, ಜ್ಯೋತಿ ಕಲಾವಿದರು ಬಂಡಾಯ ಸಾಹಿತ್ಯ ಚಟುವಟಿಕೆಗಳು ಕೂಡಾ ಮಹಾಲಿಂಗ ಮಂಗಿಯವರ ಸಾಹಿತ್ಯ ಸೃಷ್ಟಿಗೆ ಪುಷ್ಠಿ ನೀಡಿವೆ.

ಗೋಕಾಕದಲ್ಲಿ ಸಾಹಿತ್ಯದ ಒಂದು ವಾತಾವರಣ ಪರಿಸರದಲ್ಲಿ ಲೇಖಕರ ಪತ್ರಕರ್ತರ ರಂಗ ಸಂಗಾತಿಗಳ ಒಡನಾಟದಲ್ಲಿ ಅವರಲ್ಲಿ ಸೂಕ್ತವಾದ ಕಲೆ ವಿಕಸಿತಗೊಳ್ಳುತ್ತದೆ. ಮಹಾಲಿಂಗಮಂಗಿಯವರ ೫೦ ವರ್ಷ ಪರೀಕ್ಷೆ ಓದುವ ವಿದ್ಯಾರ್ಥಿಯಂತೆ ಅದೇ ಆಸಕ್ತಿ ಶ್ರದ್ಧೆಯಿಂದ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಅಧ್ಯಯನ ಮಾಡಿದ್ದಾರೆ. ಪದವಿ ಶಿಕ್ಷಣದ ಅಭ್ಯಾಸ ಹಳಗನ್ನಡ, ನಡುಗನ್ನಡ, ಹೊಸಗನ್ನಡದ ಶಾಸ್ತ್ರೀಯ ಅಧ್ಯಯನ, ವ್ಯಾಕರಣ, ಕಾವ್ಯ ಮೀಮಾಂಸೆ, ಜಾನಪದ

ಸಂಸ್ಕೃತಿ ಅಧ್ಯಯನ ಕೂಡಾ ಅವರ ಓದು ಬರವಣಿಗೆಗೆ ಸಂಪಾದನೆ ಸಂಶೋಧನೆಗೆ ಖಚಿತ ನೆಲೆ ಒದಗಿಸಿದವು ಎನ್ನಬಹುದು.

ನೂರಾರು ಕನ್ನಡ ಪತ್ರಿಕೆಗಳಿಗೆ ಮಂಗಿಯವರು ಕವನ ಲೇಖನ ಬರೆದಿದ್ದಾರೆ. ಅವರು ಬರೆದಂತೆಲ್ಲಾ ಅದೇ ಅಭಿಮಾನದಿಂದ ಪತ್ರಿಕಾ ಸಂಪಾದಕರು ಪ್ರಕಟಿಸಿ ಪ್ರೋತ್ಸಾಹಿಸಿದರು. ಅದೇ ರೀತಿ ೬೦–೭೦ ಪುಸ್ತಕ ಪ್ರಕಟಿಸಿದ್ದಾರೆ. ಆರ್ಥಿಕವಾಗಿ ದುರ್ಬಲರಾದ ಅವರಿಗೆ ಕೈಸುಟ್ಟುಕೊಂಡು ಗ್ರಂಥ ಪ್ರಕಟಿಸುವುದು ಸಾಧ್ಯವಿರಲಿಲ್ಲ. ಮಂಗಿಯವರ ಎಲ್ಲ ಸಾಹಿತ್ಯ ಕೃತಿಗಳನ್ನು ಸ್ಥಳಿಯ ಸಾಹಿತ್ಯ ಮಿತ್ರರು ಬಹಳಷ್ಟು ಬೆಂಗಳೂರಿನ ಪ್ರಕಾಶಕರು ಅಭಿಮಾನದಿಂದ ಪ್ರಕಟಿಸಿಕೊಂಡು ಬಂದಿರುತ್ತಾರೆ. ಆ ಪತ್ರಿಕಾ ಸಂಪಾದಕರು ಮತ್ತು ಪುಸ್ತಕ ಪ್ರಕಾಶಕರು ಮಹಾಲಿಂಗ ಮಂಗಿಯವರು ಸಾಹಿತ್ಯ ರಚನೆಗೆ ಶಕ್ತಿ ಮತ್ತು ವೇಗ ತಂದು ಕೊಟ್ಟಿದ್ದನು ಅಲ್ಲಗಳೆಯಲಾಗದು. ಅದೇ ರೀತಿ ಅಭಿಮಾನಿಗಳು ಸಹೃದಯಗಳು, ಸಾಹಿತ್ಯ ಸಂಘಟಕರು ಸಂಘ–ಸಂಸ್ಥೆಗಳು, ಪರಿಷತ್ತು, ಸಂಸ್ಕೃತಿ ಇಲಾಖೆ, ಬಂಡಾಯ ಸಂಘಟನೆಗಳು ಮನ್ನಿಸಿ ಕಾವ್ಯವಾಚನ ವಿಚಾರಗೋಷ್ಠಿಗೆ ಆಹ್ವಾನಿಸಿವೆ. ಸಂಘ ಸಂಸ್ಥೆಗಳು ಮಠ ಮಾನ್ಯರು ಗುರ್ತಿಸಿ ಗೌರವಿಸಿ ಮಾನ ಸನ್ಮಾನ ನಿಡುವ ಮೂಲಕ ಪರೋಕ್ಷವಾಗಿ ಅವರು ಮತ್ತಷ್ಟು ಗಂಭೀರವಾಗಿ ಸಾಹಿತ್ಯದಲ್ಲಿ ತೊಡಗಿಕೊಳ್ಳುವ ಕಾರಣಿಭೂತರಾಗಿದ್ದಾರೆ.

ಮಹಾಲಿಂಗ ಮಂಗಿಯವರು ವ್ಯಾಪಕ ಓದು, ಜೀವನಾನುಭವ, ಸಾಹಿತ್ಯ ಸಾಂಗತ್ಯ, ನಿರಂತರ ಸಾಹಿತ್ಯ ಚಟುವಟಿಕೆಗಳು ಅವರ ಬರಹಕ್ಕೆ ಸತ್ವ ಶಕ್ತಿ ತಂದು ಕೊಟ್ಟವು ಎನ್ನಬೇಕು. ಇದೆಲ್ಲಕ್ಕಿಂತ ಅವರೊಬ್ಬ ಕಾರ್ಮಿಕರಾಗಿದ್ದು ಶ್ರಮಿಕ ಸಮುದಾಯದ ಪ್ರಾತಿನಿಧಿಕ ಕವಿಯಾಗಿದ್ದು ತಾವು ಅನುಭವಿಸಿದ ಕಷ್ಟನಷ್ಟ, ಅನ್ಯಾಯ ದೌರ್ಜನ್ಯ, ದಬ್ಬಾಳಿಕೆ ಶೋಷಣೆಗಳೇ ಅವರ ಸಾಹಿತ್ಯಕ್ಕೆ ಮುಖ್ಯ ಸ್ಫೂರ್ತಿಯಾಗಿದೆ. ದುಡಿಸಿಕೊಳ್ಳುವ ಬಂಡವಾಳಶಾಹಿ, ಆಳುವ ಅಧಿಕಾರಿಶಾಹಿ, ವರ್ಗಹೋರಾಟ, ಸಮಾಜವಾದ ಸಮತಾವಾದ, ಅಭ್ಯಾಸ ಸಂಪರ್ಕಗಳು, ಕಮ್ಯುನಿಷ್ಟ ಹಿನ್ನೆಲೆಯಿಂದ ಕಾರ್ಮಿಕ ಚಳುವಳಿಯಿಂದ ಬಂದ ತಂದೆ, ಪ್ರಗತಿಶೀಲ ಬಂಡಾಯ ಮನೋಧರ್ಮದ ಲೇಖಕನಾಗಿ ಕವಿಯಾಗಿ ರೂಪುಗೊಳ್ಳಲು ಕಾರಣವಾಗುತ್ತದೆ.

ಶ್ರಮಜೀವಿ ದೀನದಲಿತ ಪರವಾಗಿ ಜನಪರ ಕಾಳಜಿ, ಸಾಮಾಜಿಕ ಕಾಳಜಿ, ಪ್ರಗತಿಶೀಲ ಬಂಡಾಯ ಮನೋಧರ್ಮ, ಚಳುವಳಿ ಹೋರಾಟಗಳು ಅವರ ಸಮಗ್ರ ಸಾಹಿತ್ಯ 'ಕಾವ್ಯ ಕಥೆ, ಕಾದಂಬರಿ, ನಾಟಕ' ಮುಂತಾದ ಎಲ್ಲದರಲ್ಲೂ ಜೀವದ್ರವ್ಯವಾಗಿ ಪ್ರವಹಿಸುವುದನ್ನು ಕಾಣುತ್ತೇವೆ.

ಪ್ರತಿ ಕಾರ್ಯಕ್ಕೂ ಕಾರ್ಯಕಾರಣ ಸಂಬಂಧವಿರುವಂತೆ ಪ್ರತಿ ಸೃಜನಶೀಲ ಸಾಹಿತ್ಯ ಕೃತಿಯ ಹಿಂದೆಯೂ ಒಂದು ಪ್ರೇರಣೆ ಸ್ಫೂರ್ತಿ ಇರುತ್ತದೆ. ಬೆಂಕಿ ಇಲ್ಲದೇ ಹೊಗೆ ಬರುವುದಿಲ್ಲವೆಂಬಂತೆ. 'ಒಂದು ಬೀಜ, ಬಸಿರು ಬೇನೆಯಿಲ್ಲದೆ ಜೀವ ಜನ್ಮ ತಾಳದು. ಸೃಜನಶೀಲ ಸೃಷ್ಟಿ ಪ್ರಕ್ರಿಯೆ ಕೂಡಾ

ಅಂತಹ ಹೆರಿಗೆ ನೋವಿನಲ್ಲೆ ಜೀವನ ಪಡೆಯುವುದು.

'ಗೋಕಾಕ ಗಿರಣಿ ಕೂಲಿ ಕೆಲಸಕ್ಕಿದ್ದಾಗ ಪಟ್ಟಭದ್ರ ದುಷ್ಟ ಕೂಟ, ಧೂರ್ತಸ್ವಾರ್ಥ ಹಿತಾಸಕ್ತಿಗಳು ಮತ್ತು ಆಡಳಿತ ಮಂಡಳಿಯ ಕುತಂತ್ರ, ದೌರ್ಜನ್ಯ, ದಬ್ಬಾಳಿಕೆ, ಕಿರುಕುಳ, ನನ್ನ ನೋವು ನಿರಾಸೆಗಳು ಭರಿಸಲಾರಷ್ಟು ಭಾರವಾದಾಗ ಅಸಹನೀಯವಾದಾಗ ಕಾವ್ಯದ ಮುಖದಲ್ಲಿ ಕಾರಿಕೊಂಡಿದ್ದೇನೆ. ಆತ ಪಟ್ಟಪಾಡು, ಸೃಷ್ಟಿಸಿದ ತವಕ ತಲ್ಲಣಗಳು, ಆತಂಕ ಸಂವೇದನೆಗಳು ನನಗೆ 'ಹಕ್ಕಿಗಳೇಕೆ ಸಾಯುತ್ತಿವೆ, ನನ್ನ ನೆಲದ ಭ್ರೂಣಗಳು, ಕರ್ಮವೀರರ ಹಾಡು'. 'ಕಾವ್ಯಸೃಷ್ಟಿಗೆ ಕಾರಣ ಒಡಲಾಳದ ದಾವಾಗ್ನಿಯಲ್ಲಿ ಪ್ರತಿ ಪದವೂ ಕುದಿಕುದಿದು ನೊಂದು ಬೆಂದು ಬಂದಿವೆ ಎನ್ನತ್ತಾರೆ ಕವಿ'".

ಜನಪದ ಕಾಳಜಿ ತುಳಿತಕ್ಕೊಳಗಾದವರ ಕುರಿತು ಅನುಕಂಪ ಸ್ಪಂದನೆ, ಚಿಂತನ ಮಂಥನ, ಆಲೋಚನೆ ಸಮಾಲೋಚನೆ, ಪ್ರಗತಿಶೀಲ ಓದು ಒಡನಾಟ, ಚಿಂತನೆ ಕಾವ್ಯರೂಪ ಪಡೆದವು. 'ನನ್ನ ಭಾರತ ಮಹಾನ್' ಕುರಿತು ಈ ಮಾತು ಹೇಳಬಹುದು. ಇಲ್ಲಿಯ ಅನುಭಾವ ಪದಗಳು ಯಾರೋ ಧ್ವನಿ ಸುರಿಳಿಗೆ ಕೋರಿಕೆಯಿಟ್ಟಾಗ ಬರೆದರೆ, ವಯಸ್ಕರ ಶಿಕ್ಷಣ ಸಾಕ್ಷರತೆ ಅಭಿಯಾನದಲ್ಲಿ ತೊಡಗಿಸಿಕೊಂಡಿದ್ದರ ಪರಿಣಾಮ 'ಸಾಕ್ಷಾರತಾ ಕವಿತೆಗಳು' ಸ್ಥಾನ ಪಡೆದವು.

'ದಿಲ್ಲಿ ದೂರವಿಲ್ಲ' ಮಗಳ ಮನೆಗೆ ತೀರ್ಥಯಾತ್ರೆ ನೆಪದಲ್ಲಿ ದಿಲ್ಲಿಗೆ ಹೋದಾಗ ದಿಲ್ಲಿ ಮಣ್ಣ ಹುಡಿಯಲ್ಲಿ ಮೂಡಿದ ಕವನಗಳು. ಅವಸರದಲ್ಲಿ ತತಕ್ಷಣ ಅವಿರ್ಭವಿಸಿದ ಅಸಂಗತ ಅಮೂರ್ತ ಆಶುಕವಿತೆಗೆಳು. 'ಅನುರಾಗ' ಕವಿತೆಗಳೂ ಸಂದರ್ಭದ ಸೃಷ್ಟಿ ಕವಿ ಒಂದೊಮ್ಮೆ ಪ್ರೀತಿಯ ಸುಳಿಯನ್ನು ಪ್ರಣಯದ, ಹುದದಲ್ಲಿ ಸಿಲುಕ ವಿಲಪಿಸುವಾಗ, ತೀವ್ರತುಡಿತ, ಆಕರ್ಷಣೆ, ಕಾತುರ, ರೋಮಾಂಚನ, ವಿರಹ ಆ ಯಾತನೆ, ಸಂವೇದನೆಗಳೇ ಇಲ್ಲಿ ಕಾವ್ಯದ ಹನಿಯಾಗಿ ಹನಿದಿವೆ. ಶರಣ ಸಾಹಿತ್ಯ ಪರಿಷತ್ತು ಗದಗ ಸಮಾವೇಶದಲ್ಲಿ 'ವಚನ – ವಾಚನ'ಕ್ಕೆ ಆಮಂತ್ರಿಸಿದಾಗ ವಚನ ರಚನೆಗೆ ಅದೇ ಒಂದು ನೆಪ ನಿಮಿತ್ಯವಾಯಿತು'.

ಸೃಜನಶೀಲ ಪ್ರಕಾರಗಳಲ್ಲಿ – 'ಕಾವ್ಯರಚನೆ' ತುಂಬ ಸೂಕ್ಷ್ಮ – ಸಂಕೀರ್ಣ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಸೃಷ್ಟಿಮಾಡಿರುವ ಮಹಾಲಿಂಗರು ಹೇಳುವಂತೆ. ಕಾದಂಬರಿ ಲೇಖನಗಳನ್ನು ಒಂದೆರಡು ಪ್ರಯತ್ನದಲ್ಲೇ ಬರೆದು ಮುಗಿಸಬಹುದು. ಇನ್ನು ಕಥೆ ತುಂಬ ಸೂಕ್ಷ್ಮ ಕಸುರಿಕಲೆ ಕನಿಷ್ಟ ತಮಗೆ ೩–೪ ಪ್ರಯತ್ನವಾದರೂ ಬೇಕೆನ್ನುವರು. ಇನ್ನು ಕವಿತೆ ಕಾವ್ಯ ಅದಕ್ಕಿಂತ ಕಷ್ಟ ಎಷ್ಟು ತೀವ್ರವಾಗಿದ್ದುಕೊಂಡು ಬರೆದರು ಸಾಲದು. ಹೊತ್ತುಗೊತ್ತಿಲ್ಲದೇ ಅದು ಮಾಡಿ ಬಂದಾಗಲೇ ಹಿಡಿದಿಟ್ಟುಕೊಳ್ಳಬೇಕು. ಕೆಲವೊಮ್ಮೆ ೭–೮ ಸಲ ಬರೆದು ಹರಿದು ಬರೆದದ್ದು ಇದೆಯಂತೆ. ಅಷ್ಟಕ್ಕೂ ತೃಪ್ತಿತಾರದೆ ಹರಿದುಹಾಕಿದ್ದೇ ಬಹಳಷ್ಟವಿವೆ. ಕಾವ್ಯ ನಿಜಕ್ಕೂ ಭಾವ ಜೀವನ ಪಡೆಯುವ ಸೃಷ್ಟಿ ಪ್ರಕ್ರಿಯೆ ಎನ್ನುತ್ತಾರೆ ಮಹಾಲಿಂಗಮಂಗಿಯವರು.

[illegible]

[illegible]

[illegible]

[illegible]

ಬ) ೨.೪ ಪ್ರಗತಿಶೀಲ ಸಾಹಿತ್ಯದ ಪಕ್ಷಿನೋಟ :

ಮಹಾಲಿಂಗ ಮಂಗಿಯವರು ಪ್ರಗತಿ ಪಂಥದ ಧ್ಯೇಯಧೋರಣೆಗೆ ಬದ್ಧರಾಗಿ, ಪ್ರಗತಿಶೀಲ ಬಂಡಾಯ ಚಳುವಳಿಯ ಭಾಗವಾಗಿ ಬೆಳೆದು ಬಂದವರು. ತಮ್ಮೆಲ್ಲ ಕಾವ್ಯಕೃತಿ ಗದ್ಯಗ್ರಂಥಗಳಲ್ಲಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂದು ಪ್ರತಿಪಾದಿಸುತ್ತ ಬಂದಿದ್ದಾರೆ. ಈ ಸಂದರ್ಭದಲ್ಲಿ ಪ್ರಗತಿಪಂಥ ಅಥವಾ ಪ್ರಗತಿಶೀಲ ಸಾಹಿತ್ಯ ಚಳುವಳಿ ಕುರಿತು ಒಂದು ಪಕ್ಷಿನೋಟ ಅವಗಾಹನೆ ಇಲ್ಲಿ ಒದಗಿಸುವುದು ಅವಶ್ಯಕವೆನಿಸುತ್ತದೆ.

೨.೫ ಪ್ರಗತಿಶೀಲ ಸಾಹಿತ್ಯ :

ಸಾಹಿತ್ಯ ಪೂರ್ವದಲ್ಲಿ ಇಡೀ ಭಾರತದಲ್ಲಿ ಪ್ರೋಗ್ರೆಸ್ಸಿವ್ಹ ಲಿಟರೇಚರ ಪ್ರಗತಿಶೀಲ ಸಾಹಿತ್ಯ ಚಳುವಳಿ ಸ್ವರೂಪದಲ್ಲಿ ಬೆಳೆದು ಬಂತು. ೨ ನೇ ಮಹಾಯುದ್ಧ ಮತ್ತು ಅನಂತರದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ, ರಶಿಯಾ, ಚೀನಾಗಳಲ್ಲಿ ವಿಚಾರ ಕ್ರಾಂತಿಯೊಂದಿಗೆ ಸಾಹಿತ್ಯದಲ್ಲೂ ಬದಲಾವಣೆಯ ಹೊಸ ಗಾಳಿ ಬೀಸತೊಡಗುತ್ತದೆ. ಶ್ರಮಿಕ, ಶೋಷಿತ ವರ್ಗದ ಪರವಾಗಿ ಲೇಖಕರು ಸ್ಪಂದಿಸತೊಡಗಿದರು. ಸಾಮ್ರಾಜ್ಯಶಾಹಿ, ಬಂಡವಾಳಶಾಹಿ, ಪುರೋಹಿತಶಾಹಿ, ಆಡಳಿತಶಾಹಿ ಮೇಲ್ವರ್ಗದ ಪಟ್ಟಭದ್ರ ಶೋಷಕ ಮೊದಲುಗೊಳ್ಳುತ್ತದೆ. ಕೇವಲ ಮುಷ್ಟಿಯಷ್ಟು ಜನ – ಸಮಷ್ಟಿಯನ್ನು ತನ್ನ ಕಪಿ ಮುಷ್ಟಿಯಲ್ಲಿಟ್ಟುಕೊಂಡು ಶೋಷಿಸುತ್ತಾ ದಬ್ಬಾಳಿಕೆ ನಡೆಸುವುದನ್ನು ಮನವರಿಕೆ ಮಾಡಿಕೊಡಲಾಗುತ್ತದೆ.

ಅಷ್ಟರಲ್ಲಿ ರಷ್ಯಾ ಕ್ರಾಂತಿ, ಫ್ರಾನ್ಸ್ ಕ್ರಾಂತಿ, ಅಮೇರಿಕಾ ಮೇ '೧' ಕ್ರಾಂತಿಗಳೆಲ್ಲಾ ನಡೆದು ಹೋಗಿದ್ದವು. ವೈಜ್ಞಾನಿಕ ಅವಿಷ್ಕಾರದೊಂದಿಗೆ ಯಾಂತ್ರಿಕ ಯುಗದ ಆರಂಭದೊಂದಿಗೆ ಔದ್ಯೋಗಿಕ ಕ್ರಾಂತಿಯಾಗಿ ಬಹುಸಂಖ್ಯಾಸ ದುಡಿಯುವ ಶ್ರಮ ಜೀವಿಗಳ ವರ್ಗವೊಂದು ತಯಾರಾಗಿತ್ತು. ಶ್ರಮಿಕ, ಕಾರ್ಮಿಕರ ಹಕ್ಕು, ನ್ಯಾಯಯುತ ಸಂಬಳ ಸವಲತ್ತುಗಳಿಗಾಗಿ, ಸಂಘಟನೆ ಸಂಘರ್ಷಗಳು ನಡೆದಿದ್ದವು. ಮಾರ್ಕ್ಸ್ ಎಂಗೆಲ್ಸ್‌ರ ಆರ್ಥಿಕ ಕ್ರಾಂತಿ ವಿಚಾರಗಳು ಮಾರ್ಕ್ಸ್‌ವಾದ ಸಾಹಿತ್ಯ ತನ್ನ ಪ್ರಭಾವ ಬೀರತೊಡಗಿತು. ವಿಶ್ವವಿದ್ಯಾಲಯಗಳಲ್ಲಿ ಓದುವ ವಿದ್ಯಾರ್ಥಿಗಳು, ಬುದ್ಧಿಜೀವಿ, ಚಿಂತಕರು ಆಕರ್ಷಿಸಲ್ಪಟ್ಟರು. ಇಂಗ್ಲೇಂಡದಲ್ಲಿ ಲೇಬರ್ ಯುನಿಯನ್ ಸಭೆಗಳು ನಡೆಯುತ್ತಿದ್ದವು. ಜನ ಸಾಮಾನ್ಯರನ್ನು ಪ್ರತಿನಿಧಿಸುವ, ಎಡಪಂಥಿಯ, ಸಮಾಜವಾದದ ಧ್ಯೇಯದರ್ಶಗಳಿಗೆ ವಿದ್ಯಾರ್ಥಿಗಳಿಗೆ ಸ್ಪಂಧಿಸುವುದರೊಂದಿಗೆ, ಅಂತಹ ಸಭೆಗಳಲ್ಲಿ ಚಿಂತಹಶೀಲ ಸಾಹಿತಿಗಳು, ವಿದ್ಯಾರ್ಥಿಗಳು ಭಾಗವಹಿಸತೊಡಗುತ್ತಾರೆ[೧೦].

೨.೬ ಪ್ರೋಗ್ರೆಸ್ಸಿವ್ಹ್ ಮೂವ್‌ಮೆಂಟ್ :

ಪ್ರಗತಿಶೀಲ ಆಂದೋಲನ ವಿಚಾರ ಕ್ರಾಂತಿ ಬ್ರಿಟನ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಾಂಗ

ಮಾಡುತ್ತಿದ್ದ ಮುಲ್ಕರಾಜ ಆನಂದರಂತಹ ನೂರಾರು ಭಾರತೀಯ ವಿದ್ಯಾರ್ಥಿಗಳು ಪ್ರಗತಿಶೀಲ ಸಿದ್ಧಾಂತಗಳಡೆಗೆ ಆಕರ್ಷಿತರಾದರು. ಅವರ ಮೂಲಕ ಭಾರತದಲ್ಲಿ ಪ್ರಗತಿಶೀಲ ವಿಚಾರ ಸಂಘಟನೆ ಸಭೆ ಚರ್ಚೆ ಶುರುವಾದವು. ಪ್ರೋಗ್ರೆಸ್ಸಿವ್ಹ್ ರೈಟರ್ಸ್ ಅಸೋಶಿಯೇಷನ್, ಫೇಡರೇಶನಗಳು ದಿಲ್ಲಿ, ಕಲ್ಕತ್ತಾ, ಮುಂಬಯಿ, ಬೆಂಗಳೂರು ಮುಂತಾದ ಎಲ್ಲ ಕಡೆಗೂ ತಲೆ ಎತ್ತ ತೊಡಗಿದವು. ಹಿಂದಿಯಲ್ಲಿ ಪ್ರೇಮಚಂದ, ಭೀಷ್ಮಸಹಾನಿ, ಬಲರಾಜ ಸಹಾನಿ, ಕೈಫಿ ಅಜ್ಮಿ ಮುಂತಾದವು ಕೆ.ಎ. ಅಬ್ಬಾಸ್ ಭಾರತೀಯ ಲೇಖಕರಲ್ಲೂ ಹೊಸತುಡಿತ ಆವರಿಸಿಕೊಂಡಿತ್ತು.

೨.೭ ಕರ್ನಾಟಕ ಪ್ರಗತಿಪಂಥ :

ಪ್ರಗತಿಶೀಲ ಸಾಹಿತ್ಯ ಚಳುವಳಿ ಕನ್ನಡ – ಕರ್ನಾಟಕವನ್ನು ಆವರಿಸಿಕೊಳ್ಳುತ್ತದೆ. ಮೊಟ್ಟಮೊದಲು ಅ. ನ. ಕೃಷ್ಣರಾಯರು ಈ ಚಳುವಳಿಯ ನೇತೃತ್ವವಹಿಸಿದರು. ಮುಂದೆ ಅ.ನ.ಕೃ ತ.ರಾ.ಸು. ಚದುರಂಗ, ಬಸವರಾಜ ಕಟ್ಟಿಮನಿ, ನಿರಂಜನ, ಹಾಮಾನಾಯಕ ಪಾಪು ಕೋಟೆ, ಅನುಪಮಾ ನಿರಂಜನ, ಕ. ವೆಂ. ರಾಜಗೋಪಾಲ, ದು. ನಿಂ. ಬೆಳಗಲಿ, ಪಿ. ವ್ಹಿ. ವಜ್ರಮಟ್ಟಿ, ಎ. ಎಸ್. ಹಿಪ್ಪರಗಿ ಹೀಗೆ ಮುಂತಾದವರು ಪ್ರಗತಿಶೀಲ ಲೇಖಕರ ದೊಡ್ಡ ದಂಡೆ ತಯಾರಾಯಿತು. ಅ.ನ.ಕೃ ಕನ್ನಡ ನಾಡಿನಲ್ಲಿ ಪ್ರಗತಿಶೀಲ ಲೇಖಕರ ಸಂಘದ ಅಧ್ಯಕ್ಷರಾದರು. ೧೯೪೦ ರಿಂದ ಹತ್ತು ವರ್ಷ ಈ ಸಂಘಟನೆ ಚಳುವಳಿಗಾಗಿ ಕನ್ನಡ ಪ್ರದೇಶವನ್ನೆಲ್ಲಾ ಸುತ್ತಿದರು ಹಾಗೂ ಜನರಲ್ಲಿ ಜಾಗೃತಿ ಮೂಡಿಸಿದರು. ಇದರ ಪರಿಣಾಮವಾಗಿ ಅಂದಿನ ಬಹುತೇಕ ಕನ್ನಡದ ಹಿರಿಯ ಯುವ ಲೇಖಕರೆಲ್ಲಾ ಸ್ಪಂದಿಸಿದರು. ಕಾಲದ ಅಗತ್ಯ ವಾಸ್ತವದ ಅನಿವಾರ್ಯತೆ ಮನಗಂಡು ಪ್ರಗತಿಶೀಲ ಧ್ಯೇಯದರ್ಶನಗಳಿಗೆ ನಿಷ್ಠರಾಗಿ ಬರೆದರು. ಕುವೆಂಪು, ಬೇಂದ್ರೆ ಕೂಡಾ ಪ್ರಗತಿಶೀಲ ಸಾಹಿತ್ಯ ಸೃಷ್ಟಿಸಿದ್ದು ಗಮನಾರ್ಹ. ಕನ್ನಡದಲ್ಲಿ 'ಪ್ರಗತಿ ಪಂಥ' ಪ್ರಗತಿಶೀಲ ಸಾಹಿತ್ಯದ ಉದಯಕ್ಕೆ ಪರಿವರ್ತನೆಗೆ ದಾರಿಯಾಯಿತು. ನವೋದಯ ಕಾಲದ ವಿಶ್ವವಿದ್ಯಾಲಯಗಳ ಬಿಳಿಕಾಲರಿನ ಪಂಡಿತರು ಕ್ಲಾಸಿಕ – ರೋಮ್ಯಾಂಟಿಕ ಕವಿಗಳನ್ನು ಪ್ರಗತಿಶೀಲ ಚಳುವಳಿಯಲ್ಲಿ ಪ್ರಭಾವಿಸಿತು. ಕಮ್ಯುನಿಷ್ಟದಲ್ಲದವರೂ 'ಪ್ರಗತಿಶೀಲ' ಸಾಹಿತ್ಯ ರಚನೆಗೆ ಮುಂದಾಗುತ್ತಾರೆ. ಎಡಪಂಥಿಯರೆಂದು ಕರೆದುಕೊಳ್ಳಲು ಇಚ್ಚಿಸಿದ ಎಷ್ಟೋ ಲೇಖಕರು ಪ್ರಗತಿಶೀಲ ಚಳುವಳಿಯೊಂದಿಗೆ ಗುರುತಿಸಿಕೊಳ್ಳುತ್ತಾರೆ. ಇದು ಜನಪರ ಜೀವಪರ ಮಾನವೀಯ ಸಾಹಿತ್ಯವೆಂದು ಮನಗಂಡಿದ್ದು ಇದ ಕಾರಣವಾಗಿದೆ.

೨.೮ ಪ್ರಗತಿಶೀಲ ಸಾಹಿತ್ಯದ ಧೋರಣೆ :

ಶೋಷಣಾ ವಿಮುಕ್ತ ಮಾನವ ಸರ್ವಸಮಾನತೆಯ ಸುವ್ಯವಸ್ಥಿತ ಸಮಾಜ. ಕಲೆಗಾಗಿ ಕಲೆ, ಸಾಹಿತ್ಯಕ್ಕಾಗಿ ಸಾಹಿತ್ಯವೆಂದು ಪರಿಭಾವಿಸದೇ, ಜೀವದ ವಿಕಾಸಕ್ಕಾಗಿ ಸರ್ವರ ಅಭ್ಯುದಯಕ್ಕಾಗಿ ಜೀವನ ನಿಷ್ಠೆ ಸಿದ್ದಾಂತಗಳಿಗೆ ಬದ್ಧರಾಗಿ ಪ್ರಗತಿಶೀಲರು ಬರೆಯುವರು. ಎಲ್ಲ ಬಗೆಯ ಸಾಮಾಜಿಕ

ಅನ್ಯಾಯ, ಅನಿಷ್ಟ, ಮೌಢ್ಯ, ಶೋಷಣೆ, ದಬ್ಬಾಳಿಕೆ ವಿರುದ್ಧ ಪ್ರತ್ಯಕ್ಷ ಮತ್ತು ಲೆಖನೀಯ ಮೂಲಕ ಪ್ರತಿಭಟಿಸುವದು. ಸಾಮಾಜಿಕ ಕಾಳಜಿ ಹೊಣೆಗಾರಿಕೆಯಿಂದ, ದೀನ, ದುರ್ಬಲರ ಶೋಷಿತ ವರ್ಗದ ಧ್ವನಿಯಾಗಿ ಮಾನವೀಯ ಮೌಲ್ಯಗಳ ಅನುಷ್ಠಾನಕ್ಕಾಗಿ ಧ್ವನಿ ಎತ್ತುವುದು.

ಪ್ರಗತಿಶೀಲರು ಸಮಾಜದ ಒಳತಿಗಾಗಿ ಬರೆದರು. ಸಂಪ್ರದಾಯದ ಮೌಢ್ಯ – ಕೊಳೆ ತೊಳೆದು ಹಾಕುವ ಛಲದಿಂದ ಬರೆದರು. ಮಠ–ದೇವಾಲಯಗಳ ಆಷಾಢ ಭೂತಿತನ ಬಯಲಿಗೆಳೆದರು. ಮಠಗಳಲ್ಲಿ ಕಾರ್ಖಾನೆಗಳಲ್ಲಿ ಮತ್ತು ಜಮೀನ್ದಾರಿ, ಭಂಡವಾಳಶಾಹಿ ಸಮುದಾಯದಲ್ಲಿ ನಡೆಯುವ ಅನ್ಯಾಯ ಆಕ್ರಮ, ಶೋಷಣೆ, ದಬ್ಬಾಳಿಕೆ ವಿರುದ್ಧ ಬರೆದರು. ಈ ಘಟ್ಟದಲ್ಲಿ ಮೂಡಿ ಬಂದ ಪ್ರಮುಖ ಪ್ರಾತಿನಿಧಿಕ ಪ್ರಗತಿಶೀಲ ಕೃತಿಗಳು.

ಅ.ನ.ಕೃ	–	**ನಗ್ನ ಸತ್ಯ, ಶನಿಸಂತಾನ, ಸಂಜೆಗತ್ತಲು, ಕಬ್ಬಿನಕಾಗೆ.**
ತ.ರಾ.ಸು	–	**ಮುಂಜಾವಿನಿಂದ ಮುಂಜಾವು**
ಬಸವರಾಜ ಕಟ್ಟೀಮನಿ	–	**ಜರತಾರಿ ಜಗದ್ಗುರು, ಮೋಹದ ಬಲೆಯಲ್ಲಿ, ಜ್ವಾಲಾಮುಖಿಯ ಮೇಲೆ**
ಅರ್ಚಕ ವೆಂಕಟೇಶ	–	**ಅಸ್ಥಿಪಂಜರ**
ನಿರಂಜನ	–	**ಚಿರಸ್ಮರಣೆ, ಮೃತ್ಯುಂಜಯ, ಕೊಸೆಯ ಗಿರಾಕಿ**
ಕುವೆಂಪು	–	**ಅನೇಕ ವೈಚಾರಿಕ ಕ್ರಾಂತಿ ಗೀತೆಗಳು**

ಹೀಗೆ ಪ್ರಗತಿಶೀಲ ಜನಪರ ನಿಲುವಿನಿಂದ, ನೇರ ಸರಳ, ಪ್ರಾಮಾಣಿಕ ನಿರೂಪಣೆಯಿಂದ ಜನಪ್ರಿಯವಾಯಿತು. ಪಂಡಿತರಿಗೆ ಮಾತ್ರ ಮೀಸಲೆನಿಸಿದ್ದ ಸಾಹಿತ್ಯ ಪಾಮರರಿಗೂ ದಕ್ಕಿತು.

ಪ್ರಗತಿ ಪಂಥದ ೩ ಐತಿಹಾಸಿಕ ಮಹಾಸಮ್ಮೇಳನಗಳು ಧಾರವಾಡ, ಹಿರಿಯೂರು, ದಾವಣಗೆರೆಯಲ್ಲಿ ಯಶಸ್ವಿಯಾಗಿ ಜರುಗಿದವು. ೧೯೫೦ ರ ನಂತರ ಪ್ರಗತಿಶೀಲ ಸಾಹಿತ್ಯದ ಕಾವು ಕಡಿಮೆಯಾಗತೊಡಗಿದಂತೆ ಕಾಣುತ್ತದೆ. ಇಲ್ಲಿ ಅದೇ ಸಂದರ್ಭದಲ್ಲಿ ಸಾಹಿತ್ಯ 'ನವ್ಯ' ದ ಕಡೆಗೆ ತುಡಿಯತೊಡಗಿತು. ಮತ್ತೇ ಬುದ್ಧಿ ಜೀವಿಗಳು ಹೊಸದೊಂದು ಕಾವ್ಯ ಪರಂಪರೆಗೆ ಹಾತೋರೆಯ ತೊಡಗಿದದರು. ಆದರೂ ಬಸವರಾಜ ಕಟ್ಟಿಮನಿ, ನಿರಂಜನರಂತಹ ಪ್ರಗತಿ ಪಂಥಕ್ಕೆ ಸಮರ್ಪಿಸಿಕೊಂಡ ಕವಿ ಬದ್ಧ ಲೇಖಕರು ತಾವು ಜೀವಿಸುವವರೆಗೂ ಅದೇ ಆದರ್ಶ ಆಶಯಗಳಿಗೆ ನೀತಿ ನಿಲುವುಗಳಿಗೆ ಬದ್ಧರಾಗಿ ಬರೆಯುತ್ತ ಬಂದರು[೧೧].

ಪ್ರಗತಿಶೀಲ ಹಳೇ ತಲೆಮಾರಿನವರು ತೆರೆಗೆ ಸರಿದಂತೆ ಹೊಸ ತಲೆಮಾರಿನ ಸಾಮಾಜಿಕ ಚಿಂತಕರು ಪ್ರೊ. ಚಂದ್ರಶೇಖರ ಪಾಟೀಲ, ತಿ. ಲಂಕೇಶ, ಪ್ರೊ. ಬರಗೂರು ರಾಮಚಂದ್ರಪ್ಪ,

ಡಾ. ಸಿದ್ದಲಿಂಗಯ್ಯ, ದೇವನೂರು ಮಹಾದೇವ ಮುಂತಾದವರು 'ಬಂಡಾಯ – ದಲಿತ' ಮೊಗವಾಡ ತೊಟ್ಟು ಕ್ರಾಂತಿರಂಗದ ಮುಂಚೂಣಿಗೆ ಬಂದರು. "ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎಂಬ ಘೋಷಣೆಯೊಂದಿಗೆ ಬಂಡಾಯ ಸಾಹಿತ್ಯ ಕೂಡಾ ಧಾರ್ಮಿಕ, ಸಾಮಾಜಿಕ ಅನ್ಯಾಯಗಳ ವಿರುದ್ಧ ಅಸಹನೆ, ಆಕ್ರೋಶಗಳನ್ನು ಧ್ವನಿಪೂರ್ಣವಾಗಿ ವ್ಯಕ್ತ ಮಾಡುವುದರ ಜೊತೆಗೆ ಕಾವ್ಯವನ್ನು ಬೀದಿಗೆ ತಂದರು. ದುರ್ಬಲ ದಲಿತ ಅಸಹಾಯಕರ ಹತ್ತಿರ ತಂದರು. ಕೇವಲ ಸಾಹಿತ್ಯ ಚಳುವಳಿಗೆ ಮಾತ್ರ ಸೀಮಿತವಾಗದೆ ಸಂಘನಾತ್ಮಕ ಹೋರಾಟಕ್ಕೂ ಬಂಡಾಯಕ್ಕೆ ಮುಂದಾಗುತ್ತಾರೆ.

ಎಡಪಂಥಿಯ ಪ್ರಗತಿಶೀಲ ಲೇಖಕರು ರೈತ ಕಾರ್ಮಿಕ ಚಳುವಳಿ ಹೋರಾಟ ನಡೆಸುತ್ತ, ಸಾರ್ವಜನಿಕವಾಗಿ ಬೀದಿಗಿಳಿದು ಪ್ರತಿಭಟಿಸುತ್ತಾ ಬಂದರು. ಅ.ನ.ಕೃ, ಬಸವರಾಜ ಕಟ್ಟಿಮನಿ, ನಿರಂಜನರು ಮುಂತಾದವರು ಹೋರಾಟದ ಪ್ರತ್ಯಕ್ಷ ಭಾಗವಾಗಿದ್ದರು. ತಾವು ಬರೆದಂತೆ ಬದುಕಿದರೂ ಕೂಡಾ ಬರಹ ಬದುಕು ಒಂದಾಗಿತ್ತು ಎಂಬುದು ಗಮನಿಸಬೇಕು.

ಮಹಾಲಿಂಗಮಂಗಿಯವರ ಅಭಿಪ್ರಾಯದಲ್ಲಿ 'ದಲಿತ ಬಂಡಾಯ' ಪ್ರಗತಿಶೀಲ ಚಳುವಳಿಯ ಮುಂದುವರೆದ ಹೋರಾಟದ ಮೂಲಕ ಆಶಯ ಉದ್ದೇಶ, ಸ್ವರೂಪ. ಅದೇ ಶೋಷಣೆ ವಿಮುಕ್ತ ಸಾಮಾಜಿಕ ಜೀವನ, ಸಾಮಾಜಿಕ ನ್ಯಾಯ ವರ್ಗ ವರ್ಣರಹಿತ ಚಿಂತನೆ ಸಿದ್ಧಾಂತಗಳೇ ಎಲ್ಲ ಬಂಡಯಕ್ಕೆ ಬಂದಾಗ ಕಾವ್ಯಾಂಶ ಇನ್ನಷ್ಟು ಕಡಿಮೆಯಾಗುತ್ತ ವಾಚ್ಯವಾಯಿತು. ಆದರೆ ಜನಕ್ಕೆ ತಲುಪಿತು ಅಷ್ಟೇ. 'ನಾವು ಯಾರಿಗಾಗಿ ಬರೆಯುತ್ತೇವೆಯೋ ಅದು ಅವರಿಗೆ ತಲುಪದಿದ್ದರೆ ಬರೆದು ವ್ಯರ್ಥ' ಎಂದು ಹೇಳುತ್ತಾರೆ.

'ಈ ಎರಡು ಪ್ರಗತಿಶೀಲ ಬಂಡಾಯ ಸಾಹಿತ್ಯ ಚಳುವಳಿಯ ಭಾಗವಾಗಿ ಬರೆಯಲು ಪಾಲ್ಗೊಳ್ಳಲು ತನಗೆ ಯಾವ ವ್ಯತ್ಯಾಸ ಅನ್ನಿಸಲೇ ಇಲ್ಲ. ಕಟ್ಟಿಮನಿಯವರಿಗೆ ಹೊಂದಿಕೊಂಡು ಪ್ರೀಯನಾಗಿ ಸಂಘಟನೆಯಲ್ಲಿ ತೊಡಗಿದಂತೆ ಚಂಪಾ ಕೂಡಾ ಅಷ್ಟೇ ಆತ್ಮೀಯನಾಗಿ ಬಂಡಾಯದೊಂದಿಗೆ ಹೊಂದಿಕೊಂಡು ಸಾಗಿದ್ದೇನೆ' ಎನ್ನುತ್ತಾರೆ ಮಹಾಲಿಂಗಮಂಗಿಯವರು.

೨.೯ ಪ್ರಗತಿಶೀಲ – ಬಂಡಯ ಮತ್ತು ಮಹಾಲಿಂಗಮಂಗಿ :

ಗೋಕಾವಿ ನಾಡಿನಲ್ಲಿ ಖ್ಯಾತಿ ಪಡೆದ ಸಾಹಿತಿಗಾರರಾದ ಬಸವರಾಜ ಕಟ್ಟಿಮನಿ, ಕಾ.ಬಿ.ಎನ್. ಧಾರವಾಡಕರವರ ಮಾರ್ಗದರ್ಶನದಲ್ಲಿ ಪ್ರೊ. ಪಿ. ವ್ಹಿ. ವಜ್ರಮಟ್ಟಿ (ಮೇಘಮಿತ್ರ), ದು. ನಿಂ. ಬೆಳಗಲಿ ಮೊದಲಾದವರ ಸಹಯೋಗದೊಂದಿಗೆ ಮಹಾಲಿಂಗಮಂಗಿ, ಚಂದ್ರಶೇಖರ ಅಕ್ಕಿ, ನಿಂಗಣ್ಣ ಸಣ್ಣಕ್ಕಿ, ಜಿ. ಕೆ. ಬಡಿಗೇರ, ಶಂಕರ ಮುಂಗರವಾಡಿ, ಶಂಕರ ತಲ್ಲೂರ, ಸಲೀಂ ಧಾರವಾಡಕರ, ಟಿ. ಸಿ. ಮೊಹರೆ ಮೊದಲಾದ ನೂರಾರು ಯುವ ಬರಹಗಾರರು ಪ್ರಗತಿ ಪಂಥದ ಪುನರ್ ಸಂಘಟನೆಗೆ ಮುಂದಾಗುತ್ತಾರೆ.

೧೯೭೫ ರಲ್ಲಿ ಗೋಕಾವಿ ನಾಡಿನ ಪ್ರಗತಿಶೀಲ ಲೇಖಕರ ಸಂಘವನ್ನು ಅಸ್ತಿತ್ವಕ್ಕೆ ತರುತ್ತಾರೆ. ಬಸವರಾಜ ಕಟ್ಟೀಮನಿ ಗೌರವಾಧ್ಯಕ್ಷರು, ಕಾ. ಬಿ. ಎನ್. ಧಾರವಾಡಕರ ಉಪಾಧ್ಯಕ್ಷರು, ಮಹಾಲಿಂಗ ಮಂಗಿಯವರು ಕಾರ್ಯಾಧ್ಯಕ್ಷರು, ಸಲೀಂ ಧಾರವಾಡಕರ, ಲಕ್ಷ್ಮಣ ಕಾಪಸಿ ಕಾರ್ಯದರ್ಶಿಗಳು. ಧಾರವಾಡಕರ 'ಸಮದರ್ಶಿ' ಮತ್ತು 'ಯೋಗೇಶ' (ಮಹಾಲಿಂಗಮಂಗಿ ಸಹ ಸಂಪಾದಕರು) ಪತ್ರಿಕೆಗಳು ಸಂಘಟನೆಯ ಮುಖವಾನಿಯಂತಿದ್ದವು. ಎರಡೂ ಪತ್ರಿಕಾ ಕಾರ್ಯಾಲಯಗಳು ಪ್ರಗತಿಶೀಲ ಚಟುವಟಿಕೆಯ ಕೇಂದ್ರಗಳಾಗಿದ್ದವು. ಬಸವರಾಜ ಕಟ್ಟೀಮನಿ ಕೂಡಾ ಆಗಾಗ ಭೆಟ್ಟಿಕೊಡುತ್ತಿದ್ದರು. ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದರು. ಕಟ್ಟೀಮನಿಯವರ ಸ್ವಗ್ರಾಮ ಮಲಮರಡಿಯಲ್ಲಿ ೨-೩ ಸಲ ಗೋಷ್ಠಿ ಸಮಾವೇಶ ಕರೆಯಲಾಗಿತ್ತು.

೧೯೭೦-೯೦ ರ ಸುಮಾರು ೩ ದಶಕಗಳ ಕಾಲ ನಿರಂತರ ತಿಂಗಳೂ ಕಾರ್ಯಕ್ರಮ, ಸಭೆ ಸಮಾರಂಭ, ಕವಿಗೋಷ್ಠಿ, ವಿಚಾರ ಸಂಕೀರ್ಣ, ಕಟ್ಟೀಮನಿ ಸ್ಮರಣೋತ್ಸವ, ಪುರಾಣಿಕ ಸ್ಮರಣೋತ್ಸವ, ಪುಸ್ತಕ ಬಿಡುಗಡೆ ಸಂಘಟಿಸುತ್ತಾ ಬಂದರು. ಪ್ರೊ. ಪಿ. ವ್ಹಿ. ವಜ್ರಮಟ್ಟಿ, ದು. ನಿಂ. ಬೆಳಗಲಿ, ಡಾ. ಬುದ್ದಣ್ಣ ಹಿಂಗಮರೆಯಂತವರು ಅನೇಕ ದಿಗ್ಗಜರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದ್ದಾರೆ.

ಬೀದಿ ಕಾವ್ಯ, ಬೀದಿಭಾಷಣ, ಮೇ ದಿನಾಚರಣೆ, ಚಳುವಳಿ ಹೋರಾಟ ಕೂಡಾ ಹಮ್ಮಿಕೊಳ್ಳಲಾಗಿತ್ತು. ಗೋಕಾಕ ಫಾಲ್ಸ್, ಕೌಜಲಗಿ, ಯಾದವಾಡ, ಮೂಡಲಗಿಗಳಲ್ಲೂ ತಮ್ಮ ಚಟುವಟಿಕೆಯನ್ನು ವಿಸ್ತರಿಸಿಕೊಂಡಿದ್ದರು. ಈ ಸಂಘಟನೆಗೆ ಸ್ಫೂರ್ತಿ ಪ್ರೇರಣೆಯಿಂದ ನೂರಾರು ಹೊಸ ಭರವಸೆಯ ಯುವ ಪ್ರತಿಭೆಗಳು ಮೂಡಿ ಬಂದವು. ಪರಿಣಾಮ ನೂರಾರು ಸಾಹಿತ್ಯ ಕೃತಿಗಳಿಗೂ ಸಾಲು ಸಾಲಾಗಿ ಪ್ರಗತಿಶೀಲ ವಿಚಾರ ಹೊತ್ತು ಪ್ರಕಟನೆಗೊಂಡವು. ೮೦ ವರ್ಷದ ಹಿರಿಯ ಮಿತ್ರ ಶ್ರೀ ಎ. ಆರ್. ಮಿರ್ಜಾಬಾಯಿ (ಕಿರಣ) ೩-೪ ಕವನ ಸಂಕಲನ ಹೊರತಂದರು. ೨೦೦೦ ರ ಸುಮಾರಿಗೆ ಶ್ರೀ ಜಿ. ಕೆ. ಬಡಿಗೇರರು ಹೊರತಂದ 'ಕೊನೆಯ ಕ್ರಾಂತಿ' ಎಂಬ ಈ ಚಳುವಳಿಗಳ ಕೊನೆಯ ಪ್ರಗತಿಶೀಲ ಕೃತಿಗಳು ಇರಬೇಕು.

ಪ್ರೊ. ಚಂದ್ರಶೇಖರ ಅಕ್ಕಿ, ಮಹಾಲಿಂಗಮಂಗಿ, ಎಂ. ಆರ್. ದೊರೆಸ್ವಾಮಿ ಜೊತೆಗೂಡಿ ಸಂಕಲಿಸಿದ ಗೋಕಾವಿ ನಾಡಿನ ಪ್ರಾಥಮಿಕ ಕಥಾ ಸಂಕಲನ 'ಪರಿಸರ' ಮತ್ತು ಮಹಾಲಿಂಗ ಮಂಗಿ, ಶಂಕರ ತಲ್ಲೂರ, ಸಲೀಂ ಭಾರತಿ ಸಂಕಲಿಸಿದ ಪ್ರಾತಿನಿಧಿಕ ಪ್ರಗತಿಶೀಲ ಕವನ ಸಂಕಲನ 'ಸಮುದಾಯ' ಸಂಘಟನೆಯ ಪ್ರಭಾವ. ಒಂದು ಹಂತದಲ್ಲಿ ಬಸವರಾಜ ಕಟ್ಟೀಮನಿ ಅಧ್ಯಕ್ಷತೆಯಲ್ಲಿ ಗೋಕಾಕದಲ್ಲಿ ರಾಜ್ಯಮಟ್ಟದ ನಾಲ್ಕನೆಯ ಪ್ರಗತಿ ಪಂಥ ಸಮ್ಮೇಳನಕ್ಕೆ ಪೂರ್ವ ಸಿದ್ಧತೆಗಳನ್ನು ನಡೆಸಿದ್ದು ಅನಿವಾರ್ಯವಾಗಿ ನೇರವೇರಲಿಲ್ಲ.

ಮಹಾಲಿಂಗ ಮಂಗಿಯವರಿಗೆ ಪ್ರಗತಿಶೀಲ ಬಂಡಾಯ ಬೇರೆ ಬೇರೆ ಆಗಿರಲೇ ಇಲ್ಲ. ಆದರ್ಶ ಉದ್ದೇಶ, ಗುರಿ ದಾರಿ ಒಂದೇ ಎಂದು ಕಂಡಿತ್ತು. ಬದುಕು ಬರವಣಿಗೆ ಚಿಂತನೆ ನಿಲುವು ಎಲ್ಲವೂ ಅದೇ ಬೇರೆ ಕಡೆ ಬಂಡಾಯದ ಹೆಸರಲ್ಲಿ ಮಾಡುತ್ತಿದ್ದುದನ್ನು ಗೋಕಾಕದಲ್ಲಿ ಪ್ರಗತಿಶೀಲ ಹೆಸರಲ್ಲಿ ಮುಂದುವರೆಸಿದರು. 'ಇಲ್ಲಿ ಸಲ್ಲುವವರು ಅಲ್ಲೂ ಸಲ್ಲುವಂತೆ' ಇವರು ಕಡೆಗಳಲ್ಲಿ ಸಲ್ಲುತ್ತಿದ್ದರು.

ಬಂಡಾಯ ರಾಜ್ಯ ಸಂಚಾಲಕ ಪ್ರೊ. ಚಂದ್ರಶೇಖರ ಪಾಟೀಲರು ಕರೆದ ಸಭೆಗೋಷ್ಠಿ, ಸಮಾವೇಶಗಳಿಗೆ ಕರೆದಾಗಲೆಲ್ಲಾ ಹಾಜರಾಗುತ್ತಿದ್ದರು. ಮಂಗಿಯವರು ಬಂಡಾಯ ಸಂಘಟನೆಯ ಗೋಕಾಕ ಪ್ರತಿನಿಧಿಯಾಗಿದ್ದರು. ಕೆಲ ಅವಧಿಗೆ ಬೆಳಗಾವಿ ಜಿಲ್ಲಾ ಬಂಡಾಯ ಸಂಚಾಲಕರಾಗಿಯೂ ನಿಯುಕ್ತರಾಗಿದ್ದರು.

೨.೧೦ ಸಮಾರೋಪ :

ಬಂಡಾಯ ರಾಜ್ಯಮಟ್ಟದ ರಾಣೆಬೆನ್ನೂರು, ಬಾಗಲಕೋಟೆ, ಚಳ್ಳಕೆರೆ ಮುಂತಾದವುಗಳಲ್ಲಿ ೩ ಸಮ್ಮೇಳನ ಕವಿಗೋಷ್ಠಿಯಲ್ಲಿ ಪ್ರಾತಿನಿಧ್ಯ ಪಡೆದಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಕೇಂದ್ರ ಕಛೇರಿಯಲ್ಲಿ 'ಬಂಡಾಯ ದಶಮಾನೋತ್ಸವ ಕವಿಗೋಷ್ಠಿ'ಯಲ್ಲಿ ಮಹಾಲಿಂಗ ಮಂಗಿಯವರಿಗೆ ಜಿಲ್ಲೆಯಿಂದ ಪ್ರಾತಿನಿಧ್ಯವಿತ್ತು. ಚಂಪಾ ತಮ್ಮ 'ಸಂಕ್ರಮಣ' ವಾರಪತ್ರಿಕೆ ಮಾಡಲು ಮುಂದಾದಾಗ ಮಂಗಿಯವರನ್ನು ಗೋಕಾಕ ಪ್ರತಿನಿಧಿ ವರದಿಗಾರರಾಗಿ ನೇಮಿಸಕೊಂಡಿದ್ದರು. ಮೊದಲ ಸಂಚಿಕೆಯಲ್ಲೇ ಇವರ ಅಗ್ರಲೇಖನ 'ಸ್ವತಂತ್ರ ಭಾರತದ ನಡುವೆ ಪಾರತಂತ್ರದ ನಡುಗಡೆ' ಎಂಬ ಅಗ್ರಲೇಖನ ವರದಿ ಸಚಿತ್ರವಾಗಿ ಪ್ರಕಟವಾಗಿತ್ತು. ಮಂಗಿಯವರಂತೆ ಕಟ್ಟಿಮನಿಯವರೂ ಬಂಡಾಯ ವೇದಿಕೆಗಳಲ್ಲಿ ಭಾಗವಹಿಸಿದ್ದಾರೆ. ಬಂಡಾಯ ಮುಖವಾಣಿ ಎಂದೇ ಬಿಂಬಿತವಾದ 'ಸಂಕ್ರಮಣ'ಕ್ಕೆ ಬರೆಯುತ್ತಲೇ ಬಂದರು. ಈಗಲೂ ಬಂಡಾಯ ಸಂಘಟನೆ ಸಂಚಾಲಕ ಬಸವರಾಜ ಸೂಳೇಬಾವಿ (ಬಸೂ) ಸಮರ್ಪಿಸುತ್ತಾರೆ. ಪತ್ರಿಕೆ ಪ್ರಕಟಣೆ ಕಳಿಸುತ್ತಾರೆ.

ಮಹಾಲಿಂಗ ಮಂಗಿಯವರಿಗೆ ಪ್ರಗತಿಶೀಲ ಜೀವನ ದೀಕ್ಷೆ ಇದ್ದಂತೆ ಪ್ರಗತಿಶೀಲ ಬಂಡಾಯ ಒಲುವು ನಿಲುವು ಮೈಗೂಡಿಸಿಕೊಂಡು ಹಣೆಪಟ್ಟಿ ಕಟ್ಟಿಕೊಂಡು ಬೆಳೆದು ಬಂದ ಮಹಾಲಿಂಗಮಂಗಿಯವರು ತಮ್ಮೆಲ್ಲ ಸಾಹಿತ್ಯ ಕೃತಿಯಲ್ಲೂ ಆ ಸಿದ್ಧಾಂತ ಆದರ್ಶಗಳನ್ನು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಅವರ ಸಾಹಿತ್ಯ ಮೂಲದ್ರವ್ಯ ಪ್ರಗತಿಶೀಲ ಬಂಡಾಯ ಬಾವುಟ ಹಿಡಿದರೂ ಮಹಾಲಿಂಗ ಮಂಗಿಯವರು ಪ್ರಗತಿ ಪಂಥದ ಪಥದಲ್ಲೇ ನಡೆದು ಬಂದವರು.

* * *

: ಅಡಿಟಿಪ್ಪಣಿಗಳು :

೧) ನಮ್ಮ ಗೋಕಾವಿ : ಗೋಕಾವಿ ನಾಡಿನ ಸಾಹಿತ್ಯ ಪರಂಪರೆ : ಮಹಾಲಿಂಗ ಮಂಗಿ

೨) ಅದೇ

೩) ಅದೇ

೪) ಕನಸೆಂಬ ಭ್ರಮೆಯ ಬೆನ್ನೇರಿ : ಮಹಾಲಿಂಗ ಮಂಗಿಯವರ : ನಾನೇಕೆ ಬರೆಯುತ್ತೇನೆ ಎಂಬ ಲೇಖನ

೫) ಅದೇ

೬) ಅಭಿವ್ಯಕ್ತಿ : ಮಹಾಲಿಂಗ ಮಂಗಿ ಅವರ ಆತ್ಮಕತೆ

೭) ಕನಸೆಂಬ ಭ್ರಮೆಯ ಬೆನ್ನೇರಿ : 'ಲೇಖನ' : ನನ್ನ ಸಾಹಿತ್ಯದ ಪ್ರೇರಣೆ ಪ್ರಭಾವಗಳು : ಮಹಾಲಿಂಗ ಮಂಗಿ

೮) ಅದೇ

೯) ಅದೇ

೧೦) ಹೊಸಗನ್ನಡ ಸಾಹಿತ್ಯ ಚರಿತ್ರೆ : ಪ್ರೊ. ಎಲ್. ಎಸ್. ಶೇಷಗಿರಿರಾವ

೧೧) ಐಚ್ಛಿಕ ಕನ್ನಡ : ಪ್ರೊ. ಮಾಲಿ ಮುದ್ದಣ್ಣ

ಅಧ್ಯಾಯ – ೩

ಮಹಾಲಿಂಗ ಮಂಗಿಯವರ ಕಾವ್ಯ

ಅಧ್ಯಾಯ – ೩

ಮಹಾಲಿಂಗ ಮಂಗಿಯವರ ಕಾವ್ಯ

ಪ್ರವೇಶ :

ಮಹಾಲಿಂಗ ಮಂಗಿಯವರ ಹನಿಗವನ, ಕವನ, ನೀಳ್ಗವನ, ಕಥನ ಕವನ, ಚುಟುಕು ಜೊತೆಗೆ ವಚನಕಾವ್ಯವನ್ನು ರಚಿಸುತ್ತಾರೆ. ತಾವು ಪ್ರಗತಿಶೀಲ ಬಂಡಾಯ ಪರಂಪರೆಯ ಕವಿ ತಮ್ಮದು ಪ್ರತಿಭಟನಾ ಸಾಹಿತ್ಯವೆಂದು ಕರೆದುಕೊಂಡರು ನವೋದಯ, ನವ್ಯ, ಜಾನಪದ, ಸಂಪ್ರದಾಯ ಶೈಲಿಯ ಹಾಡು ಹಬ್ಬಗಳನ್ನು ಬರೆಯುತ್ತಾರೆ. ಅನುರಾಗ ಪ್ರಣಯ ಕಾವ್ಯಕ್ಕೂ ಸ್ಪಂದಿಸುತ್ತಾರೆ. ತತ್ವ ಪದಗಳನ್ನು ಹಾಡುತ್ತಾರೆ. ನೋಡುತ್ತ, ಓದುತ್ತ ಹೋದಂತೆ ಸಹೃದಯಗಳಿಗೆ ಅವರ ಕಾವ್ಯದ ಪರಿಚಯ ಆಳಹರವು ವೇದ್ಯವಾಗುತ್ತದೆ. ಮಹಾಲಿಂಗಮಂಗಿಯವರ ವಚನ ಸಾಹಿತ್ಯ ಹೊರತುಪಡಿಸಿ ಸ್ವರಚಿತ ಕವನಗಳನ್ನು ಮಾತ್ರ ಅಧ್ಯಯನ ವ್ಯಾಪ್ತಿಗೆ ಆಯ್ದುಕೊಂಡಿರುವುದರಿಂದ ಕೇವಲ ಆರು ಕವನ ಸಂಕಲನಗಳನ್ನು ಮಾತ್ರ ಪರಿಚಯಿಸುವ ಪ್ರಯತ್ನ ಮಾಡುತ್ತೇನೆ.

೩.೧ ಹಕ್ಕಿಗಳೇಕೆ ಸಾಯುತ್ತಿವೆ?– ೧೯೭೯ :

ಯುವ ಪ್ರಜ್ಞ ಪಬ್ಲಿಕೇಷನ್ಸ್ ಹುಬ್ಬಳಿಯಿಂದ ಪ್ರಕಾಶಿಸಲ್ಪಟ್ಟ ಕಾವ್ಯ ಕೃತಿ. ೭೨ ಪುಟಗಳ ಈ ಕವನ ಸಂಕಲನದಲ್ಲಿ ೫೦ ಕವಿತೆಗಳಿವೆ. ಬೆಲೆ ಕೇವಲ ೫ ರೂ. ರಮೇಶ ಧಾರವಾಡಕರ ಮುನ್ನುಡಿಯ ಪದ ಪ್ರೋತ್ಸಾಹದಾಯಕ ವಿಮರ್ಶಾತ್ಮಕ ಮಾತುಗಳನ್ನು ಇಲ್ಲಿ ಬರೆದಿದ್ದಾರೆ.

“ನಾಡ ರೈತನ ಬೆವರ ಹನಿಯೊಂದು
ಬಡ ಕಾರ್ಮಿಕನ ನೆತ್ತರ ಹನಿಯೊಂದು
ಶೂದ್ರ ಬಂಧುನಿನ ಕಂಬನಿಯೊಂದು
ಶೇಖರಿಸಿಕೊಂಡು ಕಾವ್ಯಕ್ಕೆ ಮಸಿ ಮಾಡಿಕೊಂಡಿದ್ದೇನೆ”.

ಎನ್ನುವ ಘೋಷಣಾ ವಾಕ್ಯದೊಡನೆ ತನ್ನ ಕಾವ್ಯದ ಗೊತ್ತು ಗುರಿ–ಧ್ಯೇಯ ಧೋರಣೆ. ಆದರ್ಶ ಉದ್ದೇಶಗಳನ್ನು ನಿರ್ದಿಷ್ಟ ಪದಗಳಲ್ಲಿ ಸ್ಪಷ್ಟಪಡಿಸುತ್ತಾರೆ. ‘ರೈತರ ಬೆವರ ಹನಿ, ಕಾರ್ಮಿಕನ ನೆತ್ತರ ಹನಿ, ಶೂದ್ರ ಬಂಧುವಿನ ಕಂಬನಿ ಶೇಖರಿಸಿಕೊಂಡ ಮಹಾಲಿಂಗರ ಮಸಿ

ಸಾಮಾಜಿಕ ಕಳಕಳಿಯ ಭಿನ್ನ ಕಾವ್ಯಕ್ಕೆ ಲವಲವಿಕೆಯೊದಗಿಸಿ, ಹಸಿ–ಹಸಿಯಾಗಿ, ಬಿಸಿ–ಬಿಸಿಯಾಗಿ ಉಳಿಯಬಲ್ಲದು.

"ಮಿಥ್ಯಾರೋಪ ಹೊತ್ತು
ಧ್ಯೇಯಾದರ್ಶನ ಹುಚ್ಚಿಗೋಸ್ಕರ
ತನಗೆ ತಾನೇ ಹಗೆಯಾಗಿ
ನಿತ್ಯ ಜೀವನದಲ್ಲಿ ತನ್ನಗೋರಿ
ಯನ್ನು ತಾನೇ ತೋಡಿಕೊಂಡಂತೆ
ಈ ಜಗತ್ತಿನ ನಿಷ್ಠಾವಂತ ಹುಚ್ಚರಿಗೆ".

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ಉಪಮೇಯಂತೆ ಬಸವಣ್ಣನಿಗಿಂತ ಭಕ್ತಿ ಭಂಡಾರಿ ಶಿವಭಕ್ತ ಬೇರುಂಟೆ? ಎಂಬಂತೆ ತೀವ್ರವಾಗಿ ಧ್ಯೇಯಾದರ್ಶನ ಹುಚ್ಚು ಹಚ್ಚಿಕೊಂಡು ಪಟ್ಟಭದ್ರ ದುಷ್ಟ ಶಕ್ತಿಗಳಿಗೆ ಸಲಾಮು ಹೊಡೆಯದೆ ಸೆಡ್ಡುಹೊಡೆದು ಸಮಸ್ಯೆ ಸವಾಲುಗಳನ್ನು ತಾಪತ್ರಯಗಳನ್ನು ಮೈಮೇಲೆ ಉಳಿದುಕೊಂಡು ನಿಂತ, ತನಗಿಂತ ಮಹಾಲಿಂಗ ಮಂಗಿಗಿಂತ ಹುಚ್ಚ ಮರುಳ ಬೇರಿರಲು ಸಾಧ್ಯವೆ. ಅಂತಹ ಆದರ್ಶಕ್ಕಾಗಿ ತುಡಿದು ಮಿಡಿವ ಮಡಿದ ಜಗತ್ತಿನ ತ್ಯಾಗಿ ಆದರ್ಶವಾದಿಗಳಿಗೆ ಮೊದಲ ಸಂಕಲನ ಅರ್ಪಿಸಿರುವುದು. ಮೊದಲ ಸಂಕಲನವೊಂದನ್ನು ತಂದೆ–ತಾಯಿಗೆ ಅರ್ಪಿಸುವರೇ ಬಹಳ ಇಲ್ಲ ವಿಭಿನ್ನತೆ ಅವರದು.

ಇಲ್ಲಿ ಬರುವ ಮೊದಲ ಕವನ ಕೂಡಾ ಹುಚ್ಚನ ಹಾಡು ಶೀರ್ಷಿಕೆಯಾಗಬೇಕಿದ್ದ ಕವನ.

"ಅವರು ಹುಚ್ಚನೆನ್ನುತ್ತಾರೆ
ನನಗೆ
ನೀವು ಹೇಳಿ ಹುಚ್ಚನೇ
ನಾನು.
ಅವರು ಹೇಳುವುದು ಕೇಳಿಯಲ್ಲ
ಅವರನ್ನು ಕೇಳಿ ಹೇಳುವುದಿಲ್ಲ.

ಅವರಿವರಂತೆ ತಾನು ಮಾಡಬಾರದ ಅನ್ಯಾಯ ಅನಾಚಾರ ಮಾಡಲೊಪ್ಪದಕ್ಕೆ ತಾನು ಹುಚ್ಚ ಆದರ್ಶವಾದಿ ಸತ್ಯವಾದಿಯಾಗಿದ್ದಕ್ಕೆ ಲೋಕವಿರೋಧಿ ಹುಚ್ಚನ ಪಟ್ಟ ಕಟ್ಟಿದರು. ದರಿದ್ರರ – ದುರ್ಬಲರ ರಕ್ತಕ್ಕೆ ಬೆಲೆಯೇ ಇಲ್ಲ. ಇಲ್ಲಿ ಈ ಅನ್ಯಾಯ ಅಕ್ರಮ ಯಾರೇ ಸಹಿಸಿದರೂ ನಾನು ಸಹಿಸುವುದಿಲ್ಲ ಎಂದು ಪ್ರತಿಭಟಿಸುತ್ತೇನೆ. ಮೋಸ ವಂಚನೆ ಬಯಲಿಗೆಳೆಯುತ್ತೇನೆ.

"ನನ್ನ ಕೈ ಸುಟ್ಟರೂ ಅಡ್ಡಿಯಿಲ್ಲ
ನಾಡಿಗೆ ನಾನು ಬೆಂಕಿ ನೀಡುತ್ತೇನೆ

ನನ್ನ ಜನಕ್ಕೆ ಬೆಳಕು ಕೊಡುತ್ತೇನೆ"

ಅದಕ್ಕಾಗಿ ಸತ್ತರೂ ಸರಿ, ಆದರೆ ಸೋಲೊಪ್ಪುವುದಿಲ್ಲ. ಕವಿಯ ಆದರ್ಶ ಪ್ರಾಮಾಣಿಕ ಹೋರಾಟ ರೋಷ ಆಕ್ರೋಶಗಳನ್ನು ಇಲ್ಲಿ ಧ್ವನಿಸುವ ಕಾವ್ಯ.

"ಓ ಬಂಧು

ಇಂದು ಮೇ ಒಂದು"

ಅಂದು ಸತ್ತವರ ಸ್ಮರಣೆಗಾಗಿ, ಇಂದು ಬದುಕಿದವರ ಬದುಕಿಗಾಗಿ, ಮುಂದು ಬರುವವರ ಭವಿಷ್ಯಕ್ಕಾಗಿ ಇಂದು ನಾನು ಕ್ರಾಂತಿಗೀತೆ ಹಾಡುತ್ತೇನೆ.

೧೮೮೬ ಮೇ ೧ ಚಿಕ್ಯಾಗೋ ಕಾರ್ಮಿಕರ ಕ್ರಾಂತಿ. ಬಲಿದಾನ ಸ್ಮರಿಸುವ ಕ್ರಾಂತಿಗೀತೆ. ಬಲಿದಾನಗೈದ ಶ್ರಮಿಕರ ರಕ್ತದಲ್ಲಿ ಅದ್ದಿ ಮಾಡಿದ ಕೆಂಬಾವುಟ ಅದು ಹೀಗೆ ಸಂಕಲನದುದ್ದಕ್ಕೂ ಕೆಂಪು ಕಾವ್ಯಗಳೇ ತುಂಬಿವೆ.

ಸತ್ಯ ವಾಸ್ತವ ಸತ್ಯ, ದೀನ ಬದುಕು, ಕೆಂಪುಕಾವ್ಯ, ಭ್ರಷ್ಟಾಚಾರ, ಆಸೆಗಳು, ಜನಜೀವನ, ರಾಜಕಾರಣ, ಸಂಕ್ರಾಂತಿ, ವ್ಯತ್ಯಾಸ, ಗೋಡೆಗೆಳು, ನೀವು ಬಸವಾನುಯಾಯಿಗಳು ಭೂಗೋಳಿನ ಕಥೆ, ಹಕ್ಕಿಗಳೇಕೆ ಸಾಯುತ್ತಿವೆ? ಎಂದು ಮೊದಲಾದ ತೀವ್ರವಾದ ಪ್ರತಿಭಟನಾ ಕಾವ್ಯ ಇಲ್ಲಿ ನೋಡಬಹುದು.

ಜೊತೆಗೆ ಕವಿಯ ಹೆಂಡತಿ ನಂಗೆ ಮಗುವಾಗ ಬೇಕೆನಿಸುತ್ತೆ. ತಿಳಿವು, ಸಾವು, ಬ್ರಹ್ಮಚಾರಿ, ಮಾಯೆ, ಕವಿತೆ, ನವ್ಯ ಕವನ. ಜೀವನ ಪ್ರೀತಿ, ವ್ಯಂಗವಿಡಂಬನೆ, ರಚನೆಗಳು ಇವೆಲ್ಲ ಅಕಾರದ ಶಬ್ದಗಳನ್ನಷ್ಟೇ ಬಳಸಿಕೊಂಡು ಹೆಣೆದ 'ಅಭಾಗಿನಿ' ಕಥನ ಕವನ. 'ಸಿರಿಗನ್ನಡ ಮಹಾಮಂತ್ರ' ನಡಗೀತೆ, 'ಯಾರೀಕೆ', 'ಜಾನಪದ ಹಾಡುಹಬ್ಬ', 'ಜನನ ಜೀವನ–ಮರಣ' ತತ್ವಪದಗಳನ್ನು ಒಳಗೊಂಡಿದ್ದರೂ ಇದು ಅಪ್ಪಟ 'ಪ್ರಗತಿಶೀಲ ಕಾವ್ಯ'.

'ಹಕ್ಕಿಗಳೇಕೆ ಸಾಯುತ್ತಿವೆ' – ಈ ಮಾತಿಗೆ ಸಾಕ್ಷಿ ನುಡಿಯುತ್ತದೆ.

"ಈ ಪಾಪದ ಬಿಡನಾಡ ಹಕ್ಕಿಗಳು
ಭಂಡ ಬೇಡರು ಹರವಿದ ವ್ಯವಸ್ಥೆಯ
ಬಲೆಯಲ್ಲಿ ಅಸ್ಪದಗಳಿಗಾಗಿ ಅರಿಯದೆ
ಹಿಂಡು ಹಿಂಡಾಗಿ ಅನುದಿನವೂ
ಮುಗ್ಧ ಮುದ್ದು ಹಕ್ಕಿಗಳು ಸಾಯುತ್ತಿವೆ".

೫೭ ಸಾಲುಗಳ ದೀರ್ಘ ಕವನ. ತಾನೂ ಓರ್ವ ಶ್ರಮಿಕ ಶೋಷಿತನಾಗಿ ತನ್ನವರ ಕಷ್ಟ ಸಮಸ್ಯೆ,

ದುಡಿಸಿಕೊಳ್ಳುವವರ ವಂಚನೆ, ಮೋಸ, ಅರ್ಥಮಾಡಿಕೊಂಡು ಕಾವ್ಯ ತೀವ್ರವಾಗಿ ಕಟ್ಟುತ್ತದೆ. ಓರ್ವ ಪ್ರಗತಿಶೀಲ ಕಾರ್ಮಿಕ ಕವಿಯ ಹುಟ್ಟಿಗೆ ಕಾರಣವಾದ ಈ ಸಂಕಲನದ ಮೊದಲ ಕೃತಿಯೇ ಓದುಗ ವಿಮರ್ಶಕರಲ್ಲಿ ಸಂಚಲನವನ್ನು ಉಂಟು ಮಾಡಿರುವಂಥದ್ದು[೧].

೩.೨ ನನ್ನ ನೆಲದ ಭ್ರೂಣಗಳು – ೧೯೮೩ ಮೇ ೧ ಕಾರ್ಮಿಕ ದಿನಾಚರಣೆ :

ಇದು ಕೂಡಾ ಪ್ರಗತಿಶೀಲ ಪ್ರತಿಭಟನಾ ಕಾವ್ಯದ ಮುಂದುವರೆದ ಭಾಗದಂತೆ ಮೂಡಿ ಬಂದಿದೆ. ಅನ್ಯಾಯ, ಅಸಮತೆ, ಅಧರ್ಮ, ಅಸ್ಪೃಶ್ಯತೆ, ಶೋಷಣೆ ವಿರುದ್ಧ ಜಾಗೃತಿ, ಕ್ರಾಂತಿ ಕರೆ ಇಲ್ಲಿ ತೀವ್ರವಾಗಿ ಅಭಿವ್ಯಕ್ತಿವಾಗಿದೆ.

ಕವನ ಸಂಕಲನದ ಆರಂಭದಲ್ಲಿ ಇಲ್ಲಿ ಒಂದು ಘೋಷ ವಾಕ್ಯವಿದೆ !

"ಸಂಗಾತಿಗಳೇ
ನಮ್ಮ 'ಗತಿ' ಗೆಟ್ಟ ಬದುಕಿಗೆ
ನಾವೇ 'ಗತಿ' ಕೊಡಬೇಕು
ಅದಕ್ಕೊಂದು 'ಗತಿ' ಕಾಣಿಸಬೇಕು".

ಆಳುವವರು, ದುಡಿಸಿಕೊಳ್ಳುವವರ, ಅನ್ಯಾಯ, ಶೋಷಣೆಗೆ ನಾವು ಕಾರಣ ಬಗ್ಗಿಕೊಂಡು ತಗ್ಗಿಬಗ್ಗಿ ಒಪ್ಪಿಕೊಂಡು ಸಾಗಿದ್ದು ತಪ್ಪು. ನಮ್ಮ ವಿಮುಕ್ತಿಗೆ ಹೊರಗಿನವರು ದೇವರು ಬರುವುದಿಲ್ಲ. ನಮ್ಮ ಉದ್ಧಾರ ನಮ್ಮ ಕೈಯಲ್ಲಿ ಜಾಗೃತಿ ಸುಸಂಘಟಿತ ಹೋರಾಟದಿಂದಷ್ಟೇ ಸಾಧ್ಯ.

"ಮೂಡಣ ಬಾನಿನ । ಬಾಗಿಲು ತೆರೆಯುತ್ತಿಲ್ಲ
ಇರುಳು ಕಳೆದು । ಹಗಲು ಹರಿಯುತ್ತಿಲ್ಲ
ಕವಿದ ಕಪ್ಪು ಮೋಡಗಳು । ಒತ್ತೊತ್ತಿ ಸೂರ್ಯನನ್ನು ಮುಸುಕಿವೆ
ಸತ್ಯವನ್ನು ಮರೆಯಿಸಿದೆ । ಅದೆಂತಾ ಮುಖ್ಯ ಮರೆವು

ನಮ್ಮ ಸೋಲಿಗೆ ಹತಾಸೆಗೆ ನಮ್ಮ ದೌರ್ಬಲ್ಯ ದಾಸ್ಯಗಳೇ ಕಾರಣ. ನಮ್ಮ ಗತಿಗೆಟ್ಟ ಬದುಕಿಗೊಂದು ಒಳ್ಳೆಯ ಗತಿ ನಾವೇ ಕಂಡುಕೊಳ್ಳಬೇಕು. ದುರ್ಗತಿಯನ್ನು ಪ್ರಯತ್ನಪೂರ್ವಕ ಗತಿಗಾಣಿಸಬೇಕು ಹಾಗೂ ಕೊನೆಗಾಣಿಸಬೇಕು. ಒಂದೊಂದು ಪದಪದ ರಚನೆಯು ನಮ್ಮ ಸೋಲು ವೈಫಲ್ಯಗಳಿಗೆ ಕಾರಣ ಹುಡುಕುತ್ತಾ ಜೊತೆಗೆ ಪಾರಾಗುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ದೆಸೆಯಲ್ಲಿ ದಿಕ್ಸೂಚಿಯಾಗಿವೆ. ಕವಿಯ ಕಳಕಳಿ ಕಳವಳ ಪರಿಣಾಮಕಾರಿಯಾಗಿ ಅಭಿವ್ಯಕ್ತಿವಾಗಿದೆ.

'ಜನಮರಳೋ ಜಾತ್ರೆ ಮರುಳೋ', ನಮ್ಮ ವೈಫಲ್ಯ ಸೋಲುಗಳಿಗೆ ನಮ್ಮ ಅಜ್ಞಾನ ಆಲಸ್ಯ, ದೈವದ ಮೌಢ್ಯ ಕಂದಾಚಾರಗಳೂ ಅಷ್ಟೇ ಕಾರಣ. ಜನರಾಡುವ ಆಡು ಮಾತಿನಲ್ಲೇ ಕವನ ಹೆಣೆಯುವ ಪ್ರಯತ್ನಗಳನ್ನು ಇಲ್ಲಿ ಗಮನಿಸಬಹುದು.

ಕವಿಯ ಕೈಗೆಕೊಳ್ಳಿ, ಪಾರ್ಥನಿಯಂ, ನಾಳೆಗಳನ್ನು ಮಾಡುವವರು. ಹಳ್ಳಿ ಎದ್ದರೆ?, ಬೀಜದ ಹೋರಿ, ಪಿರ್‍ಯಾಮಿಡ್ಡು, ಡ್ಯಾಂ, ಗಳಿಗೆ ಬಟ್ಟಲು, ಕಾಲಗರ್ಭ, ನೋವಿನಕಥೆ, ಶೋಕಗೀತೆ, ನಾ ಅಮರ ನಿರಂಜನ, ಸಾಯುತ್ತಿರುವ ನಮ್ಮ ಅನಾಥ ಪ್ರಜ್ಞೆ, ಕ್ರಾಂತಿ, ಕೊನೆ ಎಚ್ಚರಿಕೆ, ನಾವು ಕೂಲಿಗಳು ಸಾರ್ ಕೂಲಿಗಳು ಇಂತಹ ಮೊದಲಾದ ಕ್ರಾಂತಿ ಕಾವ್ಯದೊಂದಿಗೆ 'ಅನುಕಂಪ, ಚುಟುಕುಗಳು, ಗೆಳತಿಗೆ, ಸ್ಫೂರ್ತಿ, ೧, ೨, ೩, ಪ್ರಿಯಕರನ ಕರೆ' ಮೊದಲಾದ ಲಾಲಿತ್ಯ ಭಾವಪೂರ್ಣ ಕವನಗಳೂ ಇಲ್ಲಿ ಸ್ಥಾನ ಪಡೆದಿವೆ. ಒಟ್ಟು ಇಲ್ಲಿ ೫೦ ಕವನಗಳು ಸಂಕಲಿತವಾಗಿದ್ದು ಕೊನೆಯ ಪುಟಗಳಲ್ಲಿ ಮೊದಲ ಸಂಕಲನಕ್ಕೆ ಬಂದ ಸಹೃದಯದ ಪ್ರತಿಕ್ರಿಯೆಗಳನ್ನು ಹೆಕ್ಕಿ ಕೊಡಲಾಗಿದೆ.

೩.೩ ಕರ್ಮವೀರರ ಹಾಡು :

ಡಿಸೆಂಬರ್ ೧೯೮೩ ರಲ್ಲಿ ಪ್ರಕಟಿಸಲ್ಪಟ್ಟ ೩೨ ಪುಟಗಳ ಪುಟ್ಟ ಕೃತಿ ೨೫ ಕವನಗಳು ಸಂಕಲಿತಗೊಂಡ ಪುಸ್ತಿಕೆಗೆ ಕೇವಲ ೩ ರೂಪಾಯಿ. ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಸಂಘ ಗೋಕಾಕದ ಅಧ್ಯಕ್ಷರಾಗಿ ಲೇಖಕ ಎಂ. ಆರ್. ದೊರೆಸ್ವಾಮಿ ಬೆನ್ನುಡಿ ಬೆನ್ನಿಗಿದೆ.

ಕರ್ನಾಟಕ ಸರಕಾರಿ ದಿನಗೂಲಿ ಕಾರ್ಮಿಕರಿಗೆ ನ್ಯಾಯಾಲಯದಲ್ಲಿ ಸಂದ ವಿಜಯೋತ್ಸವ ಸ್ಮೃತಿಗೆ ಸಾಂದರ್ಭಿಕವಾಗಿ ಇನ್ನಷ್ಟು ಕವನಗಳಿಗೆ ಕಾಯದೆ ಅವಸರದಲ್ಲಿ ಹೊರತಾಗಿದೆ. ಪ್ರಾಯೋಜಕರು ಕೂಡಾ ನೌಕರ ಕಾರ್ಮಿಕರೇ ದಿನಗೂಲಿ ನೌಕರ ಸಂಘದ ಮುಂದಾಳು ದೊರೆಸ್ವಾಮಿ. ಕೂಡಾ ಚಳುವಳಿ ಸತ್ಯಾಗ್ರಹ ಬೀದಿ ಮೆರವಣಿಗೆ, ಊರೂರು ಸಂಘಟನಾ ಭಾಷಣದಲ್ಲಿ ಪಾಲ್ಗೊಳ್ಳುತ್ತಾ ಅವರಿಗಾದ ಅನ್ಯಾಯ ಶೋಷಣೆ ದಂಡಿಸುತ್ತಾ ಬಂದಿದ್ದು ಅರಿಕೆಯಲ್ಲಿ ಕವಿ ನಿವೇದಿಸಿಕೊಂಡು ಬಂದಿದ್ದಾರೆ.

"ಕಪ್ಪು ನೆಲದ ಕೆಂಪು ಸೂರ್ಯ
ನೆಲ್ಸನ್ ಮಂಡೆಲಾ".

ಅವರಿಗೆ ಗೌರವ ಪೂರ್ವಕ ಅರ್ಪಣೆ ಮಾಡಲಾಗಿದೆ. ಜೈಲಿನ ಸರಳುಗಳ ಹಿಂದೆ ದಶಕಗಳನ್ನು ಕಳೆದ ಮಹಾನ ಹೋರಾಟಗಾರ ಗಾಂಧೀ ಅನುಯಾಯಿಗೆ ಅರ್ಪಣೆ ಔಚಿತ್ಯವಾಗಿದೆ. ರಶಿಯಾ ಕ್ರಾಂತಿ, ಅಮೇರಿಕಾ ಕಾರ್ಮಿಕರ ಮೇ ಕ್ರಾಂತಿ, ಆಫ್ರಿಕಾದ ನೆಲ್ಸನ್ ಮಂಡೆಲಾ, ಬೆಂಜಮಿನ ಮೊಲಾಯಿನ್, ಮಾರ್ಕ್ಸ ಎಂಗೆಲ್ಸ್‌ರಿಗೆಲ್ಲ ಸ್ಪಂದಿಸುವ ಕವಿಗೆ ತಾವು ವಿಶ್ವದ ಶ್ರಮಿಕರು ಒಂದೇ ಎಂಬ ಭಾವನೆ. ಜಾತಿಮತ, ದೇಶಭಾಷೆ, ಗಡಿಮೀರಿ ತಾವು ಜಗತ್ತಿನ ಶ್ರಮಿಕರೆಲ್ಲರೂ ಒಂದಾಗಿ ಸಂಘರ್ಷ ಕೈಕೊಳ್ಳಬೇಕೆಂಬ ಆಶಯ ಕೂಡಾ ವ್ಯಕ್ತವಾಗುವುದು.

"ಕರ್ಮವೀರರ ಹಾಡು" ಎಂಬ ತಲೆಬರಹ ಕೂಡಾ ಅರ್ಥಪೂರ್ಣ ಅನ್ವರ್ಥಕ. ಸಂಕಲನದ ಅಶೋತ್ತರ ಆದರ್ಶ ಎತ್ತಿ ತೋರಲು ಇದೊಂದೇ ಸಾಕು ಎನ್ನವಷ್ಟು ಸಶಕ್ತವಾಗಿದೆ.

"ಈ ನೆಲದ ಮಕ್ಕಳು ನಾವು
ಈ ಮಣ್ಣಿನ ಮಕ್ಕಳು ನಾವು
ರಾಷ್ಟ್ರ ಶಿಲ್ಪಿಗಳು ನಾವು
ಜಗದನ್ನದಾತರು ನಾವು
ಶಾಂತಿ ಸೈನಿಕರು ನಾವು
ಸಮತೆಯ ಧೂತರು ನಾವು".

ತಮ್ಮ ಅಸ್ತಿತ್ವ ಘೋಷಿಸುವ ಪದ ಪುಂಜಗಳು

"ನಾವುಗಳು ಹಸಿವೆಗೆ
ನಮ್ಮ ಕಸುವು ಬಳಸುವೆವು
ನಮ್ಮಗಳ ಬೆವರಲ್ಲೇ
ನಮ್ಮನ್ನೇ ಬೇಯಿಸಿಕೊಳ್ಳುವೆವು".

ದುಡಿಯುವವರು ನಾವು ಯಾರ ಎಂಜಲಿಗೂ ಕೈ ಒಡ್ಡುವುದಿಲ್ಲ. ಅನ್ಯರ ಕಣ್ಣೀರಲ್ಲಿ ನಿಮ್ಮಂತೆ ನಮ್ಮನ್ನ ಬೇಯಿಸಿಕೊಳ್ಳುವುದಿಲ್ಲ ಎಂದು ಪರೋಕ್ಷವಾಗಿ ತಿವಿಯುತ್ತ ಸೂಕ್ತ ಸಂಬಳ ಸೌಲತ್ತು ಬದುಕು ತಮ್ಮ ಹಕ್ಕು.

"ನಾವು ತೆತ್ತ ನೆತ್ತರಕೆ
ಬಸಿದ ಬೆವರಿಗೆ
ಭಿಕ್ಷೆ ಬೇಡುವುದಿಲ್ಲ
ಬೆಲೆ ಕೇಳುವೆವು".

ಈ ಕವನದ ಪ್ರತಿ ಸಾಲು ಶಬ್ದಗಳಲ್ಲೂ ಕ್ರಾಂತಿಯ ಕಿಚ್ಚಿದೆ. ದುಡಿಯುವ ಜನರು ನಾವು ಸಾವಿನಂಜಿಕೆ ನಮಗಿಲ್ಲ. ಕರ್ಮವೀರರು ನಾವು ಸೋಲುಗಳನ್ನು ನಮಗಿಲ್ಲ ಕ್ರಾಂತಿ ಪಂಜನ್ನು ಎತ್ತಿ ಹಿಡಿಯುವ ಕವಿ. ದುಡಿಯವ ದುಡಿಸಿಕೊಳ್ಳುವ ಆಳುವ ಆಳಿಸಿಕೊಳ್ಳುವ ಭೇದ ವ್ಯವಸ್ಥೆ ಬದಲಿಸಿ ಸರ್ವಸಮಾನ ಸಮಾಜವಾದ ಶ್ರಮಿಕರ ಸ್ವರಾಜ್ಯ ಸ್ಥಾಪಿಸುವ ಕನಸು ಬಿತ್ತುತ್ತಾರೆ. ಇಲ್ಲಿ ಚುಟುಕಿನ ಗುಟುಕು ನೋಡಿ.

ಕಾಲ :

"ಕಾಲನಿಗೆ ಹೆದರಿ ಹಿಮ್ಮೆಟ್ಟೆ
ಕಾಲಿಗೆ ಬುದ್ಧಿ ಹೇಳಿದರೆ ನಮ್ಮ ಬಲಿ ।

ಕಾಲನನ್ನು ಕಾಲಡಿ ಮೆಟ್ಟಿ
ಮೆಟ್ಟಿಲಾಗಿಸಿ ಮೇಲೆರಿದರೆ ನಾವು ಕಲಿ"।

ಎಚ್ಚರ :

"ಶ್ರಮಿಕರೆಲ್ಲರೂ ಸೇರಿ
ರೊಚ್ಚಿನಿಂದೊಮ್ಮೆ ಉಚ್ಚೆ ಹೊಯ್ದರೂ
ಶೋಷಕ ಕುಲ ಸಂಬಂಧಿ ಸಮೇತ
ಕೊಚ್ಚಿ ಹೋದಿರಿ ಎಚ್ಚರ".

ಕವಿಯ ರೋಷಾವೇಶಕ್ಕೆ ಕಾವ್ಯಕಲಾಶಕ್ತಿಗೆ ಈ ಮೇಲಿನೆರಡು ಸಶಕ್ತ ಚುಟುಕುಗಳೇ ಸಾಕ್ಷಿ. ಎಚ್ಚೆತ್ತ ಸೇಡಿನ ಕಿಡಿಗಳು, ನಾಳೆ ಆಳುವುದು, ನಮ್ಮ ದಾಳಿ, ಶ್ರಮಿಕರು ಬರುತ್ತಿದ್ದಾರೆ, ಕುದುರೆ ಮುಖ, ಹಗರಣ, ಹೆಣಗಳ ನಡುವೆ, ಭ್ರಮೆಗಳ ನಡುವೆ, ಜ್ವಾಲಾಮುಖಿ, ಸತ್ಯವಾದಿ ಲೋಕವಿರೋಧಿ, ಹೀಗೆ ಕ್ರಾಂತಿಗೀತೆಗಳೊಂದಿಗೆ ಅಸಹಾಯಕತೆ ಹತಾಸೆಗಳ ನಡುವೆ ಕವಿ ಸರ್ವೋದಯದ ಸಮಾನತೆಯ ಹೊಂಗನಸು ಕಾಣುತ್ತಾರೆ[೨].

"ಅನ್ವೇಷಣೆ ಯಾರಿಗೆ ಬೇಕೀ ಯುದ್ಧ?" ಅಂತಹ ವೈಚಾರಿಕೆ ಚಿಂತನೆಗಳೂ ಇವೆ. ಬೆಂಜಮಿನ ಮೊಲಾಯಿನ್‌ನ ನೆನಪಿಗೆ, ನೆಲ್ಸನ್ ಮಂಡೇಲಾ, ಕಪ್ಪು ನೆಲದ ಕೆಂಪು ಸೂರ್ಯ ವ್ಯಕ್ತಿ ಚಿತ್ರಣಗಳು ಸಂಕಲನದ ಮಹತ್ವ ಹೆಚ್ಚಿಸಿವೆ.

३.४ ನಲ್ಲ ನಲ್ಲೆಯರಿಗಾಗಿ ಅನುರಾಗ :

"೧೯೮೯ ರಲ್ಲಿ ರಾಯಬಾಗದ ಸಂಘರ್ಷ ಸಾಹಿತ್ಯಕೂಟದಿಂದ ಪ್ರಕಟಿಸಲ್ಪಟ್ಟಿದೆ. ಹೆಸರೇ ಹೇಳುವಂತೆ ಅಪ್ಪಟ ಪ್ರೇಮ ಕಾವ್ಯ. ಹಿಂದಿನ ಸಂಕಲನದಲ್ಲಿ ಕ್ರಾಂತಿಯ ಕಿಚ್ಚು ಬೆಂಕಿಯಿದ್ದರೆ ಇಲ್ಲಿ ಪ್ರೀತಿಯ ಹಿತವಾದ ಕಾವು ಬಿಸಿಯೂ ಇದೆ. ವಿರಹ ನುರಿಯೂ ಇದೆ. ಮತ್ತೊಬ್ಬ ನಾಡಿನ ಹಿರಿಯ ಅನುರಾಗದ ಕವಿ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ ನಾಲ್ನುಡಿ ಬರೆದಿದ್ದಾರೆ.

'ಮಹಾಲಿಂಗ ಮಂಗಿಯವರು ಮೂಲತಃ ಅನುರಾಗದ – ಪ್ರೇಮದ ಕವಿಯೇ ಎಂಬುದು ಈ ಕವನಗಳನ್ನು ಲಕ್ಷಿಸಿದರೆ ಅರ್ಥವಾಗುತ್ತದೆ. ವೈಚಾರಿಕ ನಿಲುವು, ಹೋರಾಟ, ಸಾಮಾಜಿಕ ಕ್ರಿಯಾಶೀಲತೆ, ಇತ್ಯಾದಿಗಳು ನಾವು ಹೊತ್ತುಕೊಂಡ ಗಂಟು ಬಯುಸಿ ಧರಿಸಿದ ಬಟ್ಟೆ. ಆದರೆ ಭಾವಪೂರ್ಣ ಆರಾಧನೆ ಪ್ರಣಯದ್ದಾಗಿರಲಿ, ಕಾಯಕದ್ದಾಗಿರಲಿ,

ಬದುಕಿನದಾಗಿರಲಿ, ಮೂಲಭೂತವಾಗಿ ಹೃದಯದ ಸಂಪತ್ತು ಅಂಥ ಸಂಪತ್ತು ಮಹಾಲಿಂಗರಲ್ಲಿ ಹಿಂದೊಮ್ಮೆ ತುಂಬಿತ್ತು. ಈಗ ತುಂಬಿ ತುಳುಕಿ ಕಾವ್ಯವಾಗಿ ಹರಿಯುತ್ತಿದೆ'.

ಅರ್ಪಣೆಯೂ ಕಾವ್ಯಮಯ
"ಅನುರಾಗದ ಹುಚ್ಚನು ಹಚ್ಚಿದ
ಆ ನನ್ನ ಹುಚ್ಚಿಯ ಅನುಗಾಲ ನೆನಪಿಗೆ
ಅನುರಕ್ತ
ನಯನಗಳು
ಸೂಸುವ
ಯಾತನೆಯ
ಹನಿಗಳ ಕಾಣಿಕೆ".

ಅನುಶಾಸನ, ಅನುಸಂಧಾನ, ಅನುಬಂಧನ, ಮೂರು ಭಾಗಗಳಲ್ಲಿ ಕವಿತೆ ವಿಂಗಡಿಸಿಲಾಗಿದ್ದರೂ ಕಾವ್ಯ ಮೂಲದ್ರವ್ಯ ಅದೇ ಪ್ರೇಮಾನುರಾಗ.

"ಅನುದಿನವೂ ನಿನ್ನ ನೋಡಿ ನೋಡಿ
ಅನುಚಣವೂ ನಿನ್ನ ನೆನೆ ನೆನೆದು
ಅನುರಾಗ – ಅನುತಾಪಗಳ
ಅನುಸಂಧಾನಗಳ ಅನುಭವಗಳಿಂದ
ನಾ, ಕವಿಯಾದ ಬಗೆ ಬಲ್ಲೆಯಾ".

ಅಂತರಂಗವನ್ನು ತಟ್ಟುವ, ಹೃದಯವನ್ನು ಮೀಟುವ ಭಾವ, ಸಂವೇದನೆ ಅರಳಿಸಿ ಕೆರಳಿಸುವ ಕಚಗುಳಿಯಿಟ್ಟು ಪುಳುಕಿತಗೊಳಿಸುವ ಪುಡಿಗವನ ಹನಿಗವನ, ಕವನಗಳೊಂದಿಗೆ ಗೇಯತೆ ಹೊಂದಿರುವ ಹಾಡು ಹಬ್ಬಗಳು ಇಲ್ಲಿ ಸ್ಥಾನ ಪಡೆದಿವೆ. ವಿರಹ ವಿಷಾದವೂ ಇಲ್ಲಿ ಹೂತು ಹೋಗಿವೆ. ಪ್ರೀತಿಯ ಸೆಳೆವಿಗೆ ಬಿದ್ದು ಪ್ರಣಯ ಸುಳಿಯಲ್ಲಿ ಸಿಲುಕಿದಾಗ ಕವಿ ಪ್ರಣಯಿಯಾಗುತ್ತಾನೆ[೩]. ಪ್ರಗತಿಶೀಲ ಧೋರಣೆಯಿಂದ ವಿಭಿನ್ನವಾದ ಕಾವ್ಯಗಳು ಇಲ್ಲಿವೆ.

೩.೫ ನನ್ನ ಭಾರತ ಮಹಾನ್ – ೨೦೦೦ :

ತಮ್ಮ ಬದುಕಿನ ಸುವರ್ಣ ಮಹೋತ್ಸವವದಲ್ಲಿ ಹೊರತಾದ ಕವನ ಸಂಕಲನ ಪ್ರೊ. ಚಂದ್ರಶೇಖರ ಅಕ್ಕಿ ಅವರ ನಾಲ್ನುಡಿ ಕಳೆಯೆತ್ತಿದೆ.

ಕವಿ ತಮ್ಮ ಸ್ವತಃ ಅನುರಾಗದಿಂದ ಅನುಭಾವದವರೆಗೆ "ತಮ್ಮ ೫ ದಶಕಗಳ ಸಿಂಹಾವಲೋಕನ ನಿವೇದಿಸಿಕೊಂಡಿದ್ದಾರೆ. ಪಟ್ಟಪಾಡು, ಅನುಭವಿಸಿದ ಕಷ್ಟ ಸಂಘರ್ಷ, ಮುಗ್ಗಟ್ಟಿನ ಪ್ರತಿಕೂಲ ವಾತಾವರಣದಲ್ಲೂ ತಾವು ಸಾಧಿಸಿದನ್ನು ಸಹೃದಯರ ಮುಂದೆ ತೆರೆದಿಟ್ಟಿದ್ದಾರೆ. ಇಲ್ಲಿ ಒಟ್ಟು ೫೦ ಕವನಗಳಿವೆ. ೫೦ ವರ್ಷದ ಪ್ರತೀಕವೆಂಬಂತೆ ತಮ್ಮ ಎಂದಿನ ಪ್ರಖರ ಪ್ರಗತಿಶೀಲ ಚಿಂತನೆ, ಪ್ರತಿಭಟನೆ ಕೂಡಾ ಮಾನವೀಯ ಮೌಲ್ಯಗಳ ಅನ್ವೇಷಣೆ, ಆತ್ಮಶೋಧನೆ, ಆಧ್ಯಾತ್ಮಿಕ ತತ್ವಚಿಂತನೆ ಅದರ ಜೊತೆಗೆ ಪರಿಸರ, ಸಾಕ್ಷರತಾ ಪದಗಳು, ಅನುಭಾವ ಪದಗಳೆಲ್ಲ ಇಲ್ಲಿ ಒಳಗೊಂಡಿದೆ. ಕಾವ್ಯ ಮಾಲೆಯಲ್ಲಿ ವಿವಿಧ ಬಣ್ಣಗಳ ಹೂವು ಇದ್ದರೂ" ಮಾನವೀಯ ಮೌಲ್ಯಗಳಿಗೆ ನಿರಂತರ ತುಡಿವ ಮನಸ್ಸು ಸಮಬಾಳು ಸಮಕಾಲಿನ ಕಳಕಳಿಯನ್ನು ಕಾಣುತ್ತೇವೆ.

"ಹೇಳುವೆನು ಕೇಳು ಭವ್ಯಭಾರತದ ಕಥೆಯ
ಕಡುನೊಂದು ಹಾಡುವೆನು ದಿವ್ಯದೇಶದ ವ್ಯಥೆಯಾ".

ನಾವೆಲ್ಲ ಅಭಿಮಾನ ಹೆಮ್ಮೆಪಟ್ಟುಕೊಳ್ಳುವ ನಮ್ಮ ದೇಶ ಸಂಸ್ಕೃತಿ ತನ್ನ ಒಡಲಲ್ಲಿ ಅದೆಂಥಾ ಮೋಸ ವಂಚನೆ, ಅನ್ಯಾಯ ಧರ್ಮನೀತಿಯನ್ನು ಅಳವಡಿಸಿಕೊಂಡಿದೆ. ಇಡೀ ಕಾವ್ಯದ ಪೋಸ್ಟಮಾರ್ಟಂ ಮಾಡಿ ಧೂರ್ತ ದುಷ್ಟತನಗಳನ್ನು ಬಿಡಿಬಿಡಿಯಾಗಿ ಬಿಡಿಸಿಡುತ್ತದೆ. ೪೪ ಸಾಲುಗಳುದ್ದಕ್ಕೂ ವೈಚಾರಿಕ ಚಿಂತನೆ ಆತ್ಮಾವಲೋಕನಗಳೊಂದಿಗೆ ಹೊಸ ದೃಷ್ಟಿ ಸಂದೇಶ ಕಾವ್ಯ ನೀಡುತ್ತದೆ.

"ಹುಡುಕುತ್ತಿದ್ದೇನೆ । ಸ್ವಾಮಿ ಬಹುಕಾಲದಿಂದ
ಸಿಕ್ಕರೆ ತೋರಿಸಿ । ಭೆಟ್ಟಿಯಾದರೆ ಹೇಳಿ ಕಳಿಸಿ
ನನಗವರ ಕಾಣಲಿದೆ । ಮುಂಗೈಗೆ ಮುದ್ದಿಡಲಿದೆ.
ಅವರ ಪಾದಗಳ ಧೂಳನ್ನು ಮುಡಿಯಲಿದೆ".

ನಾನಾ ನಮೂನೆಯ ಮೊಗವಾಡಗಳ ಹಿಂದೆ ಕಳೆದು ಹೋಗಿರುವ ಮನುಷ್ಯ ಮಾನವೀಯತೆಯ ಹುಡುಕಾಟದ ಪರಿಕಲ್ಪನೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಈ ಎರಡೂ ಮಂಗಿಯವರ ಸಮಗ್ರ ಕಾವ್ಯದ ಅತ್ಯುತ್ತಮ ಚಿಂತನಶೀಲ ಕವಿತೆಗಳಾಗಿವೆ".

"ಬೇಕಾಗಿದ್ದಾನೆ ಭಾರತೀಯ, ಕನಸುತ್ತ ಕನವರಿಸುತ್ತ, ಸಂಪೂರ್ಣ ವಿರಾಮ, ಸ್ವರೂಪ ದರ್ಶನ, ಮಾನವ ಮಹಾದೇವನಾಗ ಬಲ್ಲ. ಕಾಯುತ್ತಿದ್ದೇವೆ ಗಾಂಧೀಗಾಗಿ, ಅತಂರಂಗಸುದ್ಧಿ, ಬದುಕು ಹೋರಾಟ ಪ್ರತಿಯೊಬ್ಬರನ್ನು ಆತ್ಮಶೋಧನೆಗೆ ಚಿಂತನೆಗೊಳಪಡಿಸುವ ಕಾವ್ಯ ಸಂಕಲನ, ವೈವಿಧ್ಯಮಯ ಕಾವ್ಯಗಳು ಇಲ್ಲಿ ಸಂಕಲಿತವಾಗಿದೆ".

೩.೬ "ದಿಲ್ಲಿ ದೂರವಿಲ್ಲ" :

ಹಿಂದಿನ ಸಂಕಲನ ಪ್ರಕಟವಾದ ದೀರ್ಘಕಾಲದ ನಂತರ ೮ ವರ್ಷಕ್ಕೆ ಈ ಸಂಕಲನ ಬಂದಿದೆ. 'ದಿಲ್ಲಿ ದೂರವಿಲ್ಲ' ಕನ್ನಡಕ್ಕೆ ವಿಶಿಷ್ಟ ಕಾವ್ಯ ಪ್ರಯೋಗ, ದಿಲ್ಲಿ ಸುತ್ತ ಗಿರಕಿ ಹೊಡೆಯುತ್ತ ಬಿಡಿಬಿಡಿಯಾಗಿ ಹರಡಿಕೊಂಡರೂ ವಸ್ತು ಒಂದೇ. ಅಖಂಡ ಕಾವ್ಯ ಪ್ರವಾಸ ಕಥನ ಮಾದರಿಯಲ್ಲಿ ಪ್ರವಾಸ ಕಾವ್ಯ ಎನ್ನಬಹುದು. ಕೋಟಿಗಟ್ಟಲೇ ಜನ ನಿತ್ಯ ದಿಲ್ಲಿ ಕಂಡರೂ ತಮ್ಮ ಅನುಭವ ಸಂವೇದನೆಗಳನ್ನು ಅಕ್ಷರ ಕಾವ್ಯದಲ್ಲಿ ದಾಖಲಿಸುವುದು ಅಪರೂಪ. ಹಾಗೆಯೇ ಏಕವಸ್ತುವನ್ನು ಅನೇಕರು ವೀಕ್ಷಿಸಿದರೂ ಪ್ರತಿ ವ್ಯಕ್ತಿ ಅರ್ಥೈಸುವ ಅನುಭವಿಸುವ ದೃಷ್ಟಿ ಅಭಿವ್ಯಕ್ತಿ ಸೃಷ್ಟಿಯಲ್ಲೂ ಭಿನ್ನತೆ ನಾವಿನ್ಯತೆ ಇರುತ್ತದೆ. ನಿತ್ಯ ದಿಲ್ಲಿಯಲ್ಲಿದ್ದರೂ ನಾವು ಗಮನಿಸಲಾರದ ಗ್ರಹಿಸಲಾರದ ಹೊಸ ನೋಟವೂ ಇಲ್ಲಿದೆ. ಹಾಗಾಗಿ 'ದಿಲ್ಲಿ ದೂರವಿಲ್ಲ' ವಿಶಿಷ್ಟ ಸಂವೇದನೆಯ ಕವನ ಸಂಕಲನವೆನಿಸುತ್ತುದೆ. ದಿಲ್ಲಿ ನೋಡಿದವರು, ನೋಡದವರೂ ಓದಿ ಆನಂದಿಸಬಹುದಾದ ಕೃತಿ. ದಿಲ್ಲಿಯನ್ನು ವಿವಿಧ ನೋಟಕೋನಗಳಲ್ಲಿ ಅಕ್ಷರ ಕಾವ್ಯದಲ್ಲಿ ಸೆರೆ ಹಿಡಿದ ಶಬ್ದ ಚಿತ್ರಗಳ ಸುಂದರ ಅಲ್ಬಮನಂತಿದೆ.

"ದಿಲ್ಲಿ –

ಬೆರಗು	–	**ಬೆಡಗು**
ಒಣಪು	–	**ಒಯ್ಯಾರ**
ಕುತೂಹಲ	–	**ಕೌತುಕ**
ಆತುರ	–	**ಕಾತುರ**
ಧಾವಂತ	–	**ಆತಂಕ**
ವಿಸ್ಮಯ	–	**ವಿಕ್ಷೇಪ್ತ**

ದಿಲ್ಲಿ ಇಲ್ಲಿ
ಮನುಷ್ಯರಿಗೂ ಮನುಷ್ಯತ್ವದ ಭೆಟ್ಟಿಗೂ
ಅವಸರದಲ್ಲಿ ಅವಕಾಶವೇ ಒದಗುವುದಿಲ್ಲ.
ಮಹಾನಗರಿ ದಿಲ್ಲಿ
ಮೋಹಕ ಮಾಯಾನಗರಿ
ದಿನ ಬೆಳಗೆಂದರೆ ಹೊಸ ಹೊಸ
ಸುದ್ದಿಗಳನ್ನು ಹಡೆಯುತ್ತದೆ
ಬಲವಂತಕ್ಕೆ ಬಸಿರಾಗಿ
ಅನಿವಾರ್ಯ ಹೆರಿಗೆಯಾಗಿ
ಹೊರ ಚೆಲ್ಲಿದ ಗರ್ಭಪಾತಗಳು

ದಿಲ್ಲಿಯಲ್ಲೂ

ನಾಯಿಗಳ ಬಾಲ ಡೊಂಕು
ಕಾಗೆಗಳ ಬಣ್ಣವೂ ಕಪ್ಪು
ಕರೆಂಟು ಕೈಕೊಡುತ್ತದೆ
ಕಳವು ಸುಲಿಗೆಯಾಗುತ್ತವೆ".

ಅಲ್ಲೂ ಕೊಳೆಗೆರೆ, ಜೋಪಡಿ ಪಟ್ಟಿ, ನಿರ್ಗತಿಕ ನಿರ್ವಸತಿಗರ ನೆಲೆಗಳಿವೆ ಹಾಗೂ ಹಸಿವು ಬಡತನಗಳಿವೆ. ದೀಪದ ಬುಡಕ್ಕೆ ಕತ್ತಲೆ ಬಿದ್ದಿದೆ ಕವಿ ಗಮನ ಸೆಳೆಯುತ್ತಾನೆ. ಹೀಗೆ ತರಹೇವಾರಿ ಕವಿತೆಗಳು ಒಂದಕ್ಕಿಂತ ಒಂದು ಭಿನ್ನ. ೮೬ ಪುಟದ ಪುಸ್ತಕದಲ್ಲಿ ೬೪ ಜೀವಂತ ಲವಲವಿಕೆಯ ಕವಿತೆಗಳಿವೆ. ಪ್ರಗತಿಶೀಲ ವೈಚಾರಿಕ ದೃಷ್ಟಿ, ಸಾಮಾಜಿಕ ಕಳಕಳಿ ಉದ್ದಕ್ಕೂ ಮಿಡಿಯುವುದನ್ನು ಕಾಣುತ್ತೇವೆ.

ನಾನು ಅಧ್ಯಯನ ವ್ಯಾಪ್ತಿಗೆ ನಿಗಧಿ ಪಡಿಸಿದ ೬ ಕವನ ಸಂಕಲನಗಳ ಪರಿಚಯ ಅವಲೋಕನ ಇಲ್ಲಿ ಒದಗಿಸಿದ್ದೇನೆ. ಇದರ ಹೊರತಾದ ವಚನ ಕಾವ್ಯ 'ತಡಸಲ ಮಹಾಲಿಂಗನ ವಚನಗಳು' ಕೂಡಾ ಕಂದಾಚಾರ, ಆಷಾಢಭೂತಿತನ, ಖಾವಿಗಳ ಸೋಗಲಾಡಿತನ ಕುರಿತು ಬರೆದ ಜಾಗೃತ ವಚನಗಳು.

೩.೭ ಸಮಾರೋಪ :

ಮಹಾಲಿಂಗ ಮಂಗಿಯವರ ತಮ್ಮ ಜೀವಂತ ಜೀವನಾನುಭಾವಗಳನ್ನೇ ಇಲ್ಲಿ ಕಾವ್ಯವಾಗಿ ನೀಡಿದ್ದಾರೆ. ಕಾವ್ಯದುದ್ದಕ್ಕೂ ಸ್ವಾನುಭವ ಆ ದುಃಖ, ದುಮ್ಮಾನ, ಅಳಲು, ಅಸಹಾಯಕತೆ, ಹತಾಸೆ, ನಿರಾಶೆ, ರೋಷ, ಆವೇಶ, ಹೋರಾಟದ ಛಲ ತುಂಬಿವೆ. ಆದ್ದರಿಂದ ಅಲ್ಲಿ ಸ್ವಂತಿಕೆಯಿದೆ, ಸೋಪಜ್ಞತೆಯಿದೆ. ಮಹಾಲಿಂಗಮಂಗಿಯವರಿಗೆ ಸಾಹಿತ್ಯಕ್ಕಿಂತ, ಕಾವ್ಯಕಲೆಗಿಂತ ಶೋಷಿತರ ಶ್ರಮಿಕರ ಬದುಕು ಭವಿಷ್ಯ ಮುಖ್ಯವಾಗಿದೆ. ಸಮಾನತೆ, ಸಂತೃಪ್ತಿ, ಸರ್ವಾಂಗೀಣ ಉನ್ನತಿ ಪ್ರಗತಿ ವಿಮುಕ್ತ ಜೀವನ ಮುಖ್ಯವಾಗುತ್ತದೆ. ಅದು ತುಂಬ ಸರಳ ಸಹಜವಾದ ಪ್ರಾಮಾಣಿಕ ಅಭಿವ್ಯಕ್ತಿಯಾಗಿರುವುದರಿಂದ ಓದುಗರನ್ನು ತಟ್ಟುತ್ತದೆ. ಚಿಂತನೆಗೆ ಆಲೋಚನೆಗೆ ತೊಡಗಿಸುತ್ತದೆ.

ಮಹಾಲಿಂಗ ಮಂಗಿಯವರ ಕಾವ್ಯ ತುಂಬ ಜೀವಪರವಾಗಿದೆ. ಜನಪರ ನಿಲುವು, ಸಮಾಜಪರ ಒಲವು, ಸಹಜವಾಗಿ ಮೂಡಿ ಬಂದಿದೆ. ಆಡು–ನುಡಿಯ ಸೊಗಡು, ದೇಸಿ ಭಾಷೆಯ, ತಾಜಾತನ, ಪ್ರಾದೇಶಿಕತೆ ಅಸ್ಮಿತೆಗಳು ದಟ್ಟವಾಗಿ ಒಡಮೂಡಿವೆ. ಸಮಕಾಲೀನ ಸಂದರ್ಭದಲ್ಲಿ ತಮ್ಮದೇ ಆದ ರೀತಿಯಲ್ಲಿ ಕಾವ್ಯಕಟ್ಟಿದ ಕವಿ ಮಂಗಿಯವರು ಹತ್ತರೊಳಗೆ ಹನ್ನೊಂದಾಗಿ ಹೋಗಿದೆ. ತಮ್ಮ ವಿಶಿಷ್ಟತೆಯ ಛಾಪನ್ನು ಒತ್ತುತ್ತಾರೆ. ಅದೇ ಅವರ ಹೆಗ್ಗಳಿಕೆಯಾಗಿದೆ.

: ಅಡಿಟಿಪ್ಪಣಿಗಳು :

೧) ಹಕ್ಕಿಗಳೇಕೆ ಸಾಯುತ್ತಿವೆ? : ರಮೇಶ ಧಾರವಾಡಕರ : ಮುನ್ನುಡಿಯಿಂದ

೨) ಕರ್ಮವೀರರ ಹಾಡು : ಲೇಖಕ ಎಂ. ಆರ್. ದೊರೆಸ್ವಾಮಿ : ಬೆನ್ನುಡಿಯಿಂದ

೩) ನಲ್ಲ ನಲ್ಲೆಯರಿಗಾಗಿ ಅನುರಾಗ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ : ನಾಲ್ನುಡಿಯಿಂದ

೪) ನನ್ನ ಭಾರತ ಮಹಾನ್ : ಶ್ರೀ ಚಂದ್ರಶೇಖರ ಅಕ್ಕಿ : ನಾಲ್ನುಡಿಯಿಂದ

ಅಧ್ಯಾಯ – ೪

ಮಹಾಲಿಂಗ ಮಂಗಿಯವರ ಕಾವ್ಯ ಧೋರಣೆ

ಅಧ್ಯಾಯ – ೪

ಮಹಾಲಿಂಗ ಮಂಗಿಯವರ ಕಾವ್ಯ ಧೋರಣೆ

ಪ್ರವೇಶ :

"ನಾಡ ರೈತನ ಬೆವರ ಹನಿಯೊಂದು
ಬಡ ಕಾರ್ಮಿಕನ ನೆತ್ತರ ಹನಿಯೊಂದು
ಶೂದ್ರ ಬಂಧುವಿನ ಕಂಬನಿಯೊಂದು
ಶೇಖರಿಸಿಕೊಂಡು ನನ್ನ ಕಾವ್ಯದ ಮಸಿ ಮಾಡಿಕೊಂಡಿದ್ದೇನೆ".

ಮಹಾಲಿಂಗ ಮಂಗಿಯವರ ತಮ್ಮ ಮೊದಲ ಕವನ ಸಂಕಲನ. ಮೊದಲ ಪುಟದಲ್ಲಿ ಬರೆದುಕೊಂಡು ಘೋಷವಾಕ್ಯದಲ್ಲೇ ತಮ್ಮ ಕಾವ್ಯದ ಧ್ಯೇಯ ಧೋರಣೆಗಳನ್ನು ಸ್ಪಷ್ಟಪಡಿಸಿದ್ದಾರೆಂದು ಹೇಳಬಹುದು. 'ನನ್ನ ಕಾವ್ಯದಲ್ಲಿ' ಮಧುವಿನ ಮಾಧುರ್ಯವಿಲ್ಲ ಮಧ್ಯದ ಮತ್ತೂ ಇಲ್ಲಿಲ್ಲ. ಪ್ರತಿಭಟನೆಯ ಕಾಟ, ಪ್ರತಿಕಾರದ – ಕಾರವಿದೆ. 'ನನ್ನ ಲೇಖನಿಯ ಕತ್ತಿಯಿಂದ ಬೆಳಕಿನ ಕಿಡಿಗಳನ್ನೆ ಕಡಿದಿದ್ದೇನೆ'. ದೀನ–ದುರ್ಬಲ, ಅಬಲೆಯರಿಗಾಗಿ, ಅಸಹಾಯ ಶ್ರಮಿಕ ಶೋಷಿತರಿಗಾಗಿ ನಾನು ಲೇಖನಿ ಎತ್ತಿಕೊಂಡಿದ್ದೇನೆಂದು ಧ್ವನಿಯೆತ್ತಿ ಹೇಳುತ್ತಾರೆ. ತಾನು ಯಾರಿಗೋಸ್ಕರ ಏಕಾಂಗಿ ಬರೆಯುತ್ತಿದ್ದೆನೆಂದು ಘಂಟಾಘೋಷವಾಗಿ ಸಾರುತ್ತಾರೆ.

"ಓ ಬಂಧು
ಇಂದು ಮೇ ಒಂದು ।
ಅಂದು ಸತ್ತವರ ಸಂಸ್ಮರಣೆಗಾಗಿ
ಇಂದು ಬದುಕಿದವರ ಬದುಕಿಗಾಗಿ
ಮುಂದು ಬರುವವರ ಭವಿಷ್ಯಕ್ಕಾಗಿ
ಇಂದು ನಾನು ಹಾಡು ಹಾಡುತ್ತಿದ್ದೇನೆ".

ಕೆಂಬಾವುಟ ಹಿಡಿದು ಕ್ರಾಂತಿ ಸಂದೇಶ ಹೊತ್ತು, ಒಂದು ವರ್ಗದ ಜೀವನೇಲೆ ಹಾಸದ ಪರಿವರ್ತನೆಯ ಸಂಕ್ರಾಂತಿ ಸಂದರ್ಭದಲ್ಲಿ ಚಳುವಳಿಯ ಭಾಗವಾಗಿ ಹೋರಾಟ ಮುಂದುವರೆಸಿಕೊಂಡು ಹೋಗುತ್ತಿದ್ದೇನೆ. ರೈತ, ಕಾರ್ಮಿಕರ, ಶ್ರಮಿಕ ಶೋಷಿತರ, ದೀನ–ದಲಿತರ ಪರವಾಗಿ ಕವಿಯಾಗಿ ಧ್ವನಿ ಎತ್ತುತ್ತೇನೆ.

ಅಮಾಯಕ, ಅಸಂಘಟಿತ ದುರ್ಬಲರಲ್ಲಿ ಜಾಗೃತಿ ಅರಿವು, ಒಕ್ಕಟ್ಟು ಮೂಡಿಸಲು ಲೇಖನಿ ಬಳಸಿದ್ದೇನೆ. ಮೋಜು, ಮಜಾ, ಮನೋರಂಜನೆಗಾಗಿ ಕವಿ ಕಾವ್ಯ ರಚಿಸುತ್ತಿಲ್ಲ. ಮಧುವಿನ ಮಾಧುರ್ಯವಾಗಲಿ, ಭ್ರಮಾನಂದ ನೀಡುವ ಕಲ್ಪನಾ ವಿಲಾಸ ಕಾವ್ಯ ಅಲ್ಲ. ಕವಿ ತನ್ನ ಕಾವ್ಯದ ಗೊತ್ತು ಗುರಿಗಳನ್ನು ಮುಂದಿನ ಸಾಲುಗಳಲ್ಲಿ ಇನ್ನಷ್ಟು ಸ್ಪುಟವಾಗಿ ಸ್ಪಷ್ಟಪಡಿಸುವುದನ್ನು ಗಮನಿಸಿ.

"ಸಾವುಕಾರಿ, ಅಧಿಕಾರಿ, ಧರ್ಮಾಧಿಕಾರಿಗಳ
ಹಿಂಸೆ, ಶೋಷಣೆ, ಧೂಷಣೆಗಾಗಿ ಕೊರಗಿದ್ದೇನೆ
ದೌರ್ಜನ್ಯ, ದಬ್ಬಾಳಿಕೆ, ಭ್ರಷ್ಟಾಚಾರಕ್ಕಾಗಿ ಕೆರಳಿದ್ದೇನೆ
ಅನ್ಯಾಯ, ಅನೀತಿ, ಅಧರ್ಮಕ್ಕಾಗಿ ಕುದಿಯುತ್ತೇನೆ".

ನಮ್ಮ ಅಜ್ಞಾನ, ಆಲಸ್ಯ, ಅಸಹಾಯಕತೆ, ದೌರ್ಬಲ್ಯಕ್ಕಾಗಿ ಮತ್ತೆ ಮಮ್ಮಲ ಮರಗುತ್ತೇನೆ. 'ಯಾರಿಗಾಗಿ ಯಾರ ವಿರುದ್ಧ ತನ್ನ ಹೋರಾಟವೆಂಬುದು' ಇಲ್ಲಿ ನಿಚ್ಚಳ. ಜಮಿನ್ದಾರಿ, ಬಂಡವಾಳಶಾಹಿ, ಅಧಿಕಾರಿ, ಆಡಳಿತಶಾಹಿ, ಪರೋಹಿತಶಾಹಿ, ವಸಾಹತುಶಾಹಿಗಳು ಪಟ್ಟ ಭದ್ರ ಹಿತಾಸಕ್ತಿಗಳು ಜನಸಾಮಾನ್ಯರ ಶ್ರಮಿಕರ ಮೇಲೆ ಎಸಗುತ್ತಿರುವ ದೈಹಿಕ, ಮಾನಸಿಕ, ಹಿಂಸೆ, ದಬ್ಬಾಳಿಕೆ, ದೌರ್ಜನ್ಯಗಳ ಸಂಕಲ್ಪನೆ ಅರಿವು ಕವಿಗಿದೆ. ಮೇಲ್ವರ್ಗದ ಜನ ಯಾವ ರೀತಿ, ಮೋಸ ವಂಚನೆಯಿಂದ ಶ್ರಮಿಕರ ಶ್ರಮದ ಲಾಭ–ಫಲವನ್ನು ಸಂಚು ಮಾಡಿ ತಾವೇ ಕಬಳಿಸುತ್ತಿದ್ದಾರೆ. ರೈತ ಕಾರ್ಮಿಕರ ಬೆವರು ರಕ್ತದ ಫಲವನ್ನು ತಾವು ಮಾತ್ರ ಅನುಭವಿಸುತ್ತಿದ್ದಾರೆ. ಈ ಅನ್ಯಾಯ, ದ್ರೋಹ, ದಬ್ಬಾಳಿಕೆ, ಶೋಷಣೆ, ತಡೆಯಲು ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹ–ಉಗ್ರ ಪ್ರತಿಭಟನೆ ಕಾವ್ಯದ ವಸ್ತು ಧೋರಣೆ.

"ಅಮಾನವೀಯತೆ, ಅಸಮತೆ, ಅಸ್ಪೃಶ್ಯತೆ
ಅಳಿಸಲೆಂದು ಇಂದು ದೀಕ್ಷೆ ಕಂಕಣ ತೊಡಲೆಂದು
ಈ ಶ್ರಮಿಕ ಯುಗದ 'ಸಂಕ್ರಾಂತಿ' ಹಾಡಿಗೆನಾ
ನಿಮ್ಮೆದೆಗಳ ಮೇಲೆ ಪಲ್ಲವನು ಬರೆಯುತ್ತಿರುವೆ".

(ಇಂದು ಮೇ ಒಂದು)

ಎನ್ನುವ ಕವಿಗೆ ಸ್ಪಷ್ಟ ಚಿಂತನೆ ಆಲೋಚನೆಗಳಿವೆ. ಕಾವ್ಯಕ್ಕೆ ನಿಶ್ಚಿತ ಉದ್ದೇಶ ಆದರ್ಶಗಳಿವೆ. ಅನ್ಯಾಯ ಅಸಮಾನತೆ ವಿರುದ್ಧ ಪ್ರತಿಭಟನೆ, ಸಾಮಾಜಿಕ, ನ್ಯಾಯಕ್ಕಾಗಿ ನಿರಂತರ ಹೋರಾಟ ಈ ಪ್ರಗತಿಶೀಲ ಸಿದ್ಧಾಂತ, ಎಡಪಂಥಿಯ ಬದ್ಧತೆಗಳನ್ನು ನಾವು ಮಂಗಿಯವರ ಕಾವ್ಯದ ಉದ್ದಕ್ಕೂ ಗ್ರಹಿಸಬಹುದು.

'ನೀತಿ ನ್ಯಾಯಗಳನ್ನರಸುತ್ತ, ಧ್ಯೇಯಾದರ್ಶದ ಹುಚ್ಚಿಗೋಸ್ಕರ' ವೈಯಕ್ತಿಕ ಸುಖ ಸಂತೋಷಕ್ಕೆ ಕೊಳ್ಳಿಯಿಟ್ಟು ಈ ಜಗತ್ತಿನ ನಿಷ್ಠಾವಂತ ಹುಚ್ಚರಿಗೆ ಮಹಾಲಿಂಗರು ತಮ್ಮ ಚೊಚ್ಚಲ ಕವನ ಸಂಕಲನವನ್ನು ಅರ್ಪಿಸುತ್ತಾರೆ. ಸಹಜ ಸಾಮಾನ್ಯವಾಗಿ ನಾವು ನೀವೆಲ್ಲ ಪ್ರಥಮ ಗ್ರಂಥ ಕೃತಿಯನ್ನು ಹೆತ್ತವರಿಗೆ ಅರ್ಪಿಸುವುದು ಮಾಮುಲು; ಆದರೆ ಕವಿ ತನ್ನ ಕೀರ್ತಿ ಆಲೋಚನೆಯಲ್ಲೂ ಭಿನ್ನ. ಈ ಜಗದ

ಆದರ್ಶದ ಹುಚ್ಚಿಗಾಗಿ ಅಪರೂಪದ ಹುಚ್ಚು ಎನ್ನಿಸದಿರದು. ಮೊದಲ ಸಂಕಲನದಿಂದ ಮೊದಲ ಕವಿತೆಯೇ 'ಹುಚ್ಚನ ಹಾಡು' ತನ್ನ ಹೋರಾಟದಲ್ಲಿ ಆದರ್ಶದ ಪಥದಲ್ಲಿ.

"ಸಾಧ್ಯವಾಗದಿದ್ದರೆ ಸೋತರೇ । ನನ್ನ ಬಿಸಿ ರಕ್ತವನ್ನು
ಬಿದ್ದ ಹಸಿ ರಕ್ತದೊಡನೆ ಬಸಿದು
ಬೀದಿಯನ್ನು ಇನ್ನಷ್ಟು ರಂಚಿತವಾಗಿ ನೋಯಿಸುತ್ತೇನೆ ।

ಆಗಲಿ ಹುಗಿದಿರುವ ಮಂಕುಬೂದಿ ಬಗೆಯುತ್ತೇನೆ
ಹುದುಗಿರುವ ಕಿಡಿಯನ್ನು ಖಂಡಿತ ಪಡೆಯುತ್ತೇನೆ
ನನ್ನಕ್ಕೆ ಸುಟ್ಟರೂ ಅಡ್ಡಿಯಿಲ್ಲ
ನಾಡಿಗೆ ನಾನು ಬೆಂಕಿ ನೀಡುತ್ತೇನೆ
ನನ್ನ ಜನಕ್ಕೆ ಬೆಳಕು ಕೊಡುತ್ತೇನೆ".

(ಹುಚ್ಚನ ಹಾಡು)

ಈಗಾಗಲೇ ಹೋರಾಟದ ಹಾದಿಯಲ್ಲಿ ಸೋತು ಸತ್ತು ಹೋದವರ ರಕ್ತ ತರ್ಪಣ ನೀಡಿದ ಕ್ರಾಂತಿಕಾರಿಗಳ ಸಾಲಿನಲ್ಲಿ ನನ್ನ ರಕ್ತ ಹರಿಸಿ ಸಾಯಲೂ ಸಿದ್ಧ. ಎಂತಹ ದಿವ್ಯ ಧ್ಯೇಯಾದರ್ಶ ವೀರ ಸಂಕಲ್ಪ ಕವಿಯದ್ದು. ತನ್ನ ಶ್ರಮಿಕ ಶೋಷಿತ ತುಳಿತಕ್ಕೊಳಗಾದ ಸಮುದಾಯಕ್ಕಾಗಿ ಸಾಮಾಜಿಕ, ನ್ಯಾಯಕ್ಕಾಗಿ ಎಲ್ಲ ತ್ಯಾಗಕ್ಕೂ ಸಿದ್ಧ. ಹೀಗೆ ಘೋಷಿಸಿಕೊಳ್ಳುವ ಸಮರ್ಪಿಸಿಕೊಳ್ಳುವ ಧೈರ್ಯ ಎಲ್ಲರಿಗೂ ಅಸಾಧ್ಯ. ಇಲ್ಲಿ ಕವಿ ಕಾವ್ಯ ಬೇರೆಯಲ್ಲ, ಕವಿ ಕಾವ್ಯದ ಜೀವಾಳ, ಬದುಕು ಮತ್ತು ಬರಹದಲ್ಲಿ ಸಮನ್ವಯತೆ ಕಾಣಬಹುದಾಗಿದೆ.

ಕವಿ ಮಂಗಿಯವರಿಗೆ ಸತ್ಯ, ನ್ಯಾಯ, ಕ್ರಾಂತಿಯ ಆದರ್ಶದ ಹುಚ್ಚು. ಅಂತಹ ಧ್ಯೇಯವಾದಿಗಳೆಂದರೆ ಅವರಿಗೆ ತುಂಬ ಇಷ್ಟ. ತಮ್ಮ ಮುಂದಿನ ಅನೇಕ ಕೃತಿಗಳನ್ನು ಅಂತಹ ಮಹನೀಯರಿಗೆ ಅರ್ಪಿಸಿತ್ತಾರೆ. "ಕಪ್ಪು ನೆಲದ ಕೆಂಪು ಸೂರ್ಯ ನೆಲ್ಸನ್ ಮಂಡೇಲಾ, ಮನುಕುಲದ ಅಣ್ಣ ಮಹಾನುಭಾವ ಬಸವಣ್ಣ. ಬಸವರಾಜ ಕಟ್ಟಿಮನಿ, ಕಾರ್ಲಮಾರ್ಕ್ಸ ಮತ್ತು ಪೆಡ್ರರಿಕ್ಸ್ ಎಂಗೆಲ್ಸ್, ಸಮಾಜವಾದಿ ಸದ್ಗುರು. ಮಾಧವಾನಂದ ಪ್ರಭೂಜಿ ಗುರು ಪ್ರತ್ರಪ್ಪ ಮಹಾರಾಜರು, ಗೋಕಾವಿ ನಾಡಿನ ಸ್ವಾತಂತ್ರ್ಯ ಸೇನಾನಿಗಳಿಗೆ ಕನಕ–ಪುರಂದರ ದಾರ್ಶನಿಕ ಕವಿಗಳಿಗೆ, ನಿಸ್ವಾರ್ಥ ಲೋಕ ಸೇವಕರಿಗೆ ನಿಷ್ಠಾವಂತ ಶಾಂತಿ ಸೈನಿಕರಿಗೆ, ಗೋಕಾಕ ಗಿರಣಿ ಕಾರ್ಮಿಕ ಸಮುದಾಯಕ್ಕೆ, ಲೋಕದ ಅನ್ನದಾತ ರೈತರಿಗೆ, ಚಿಂತಕ ಪ್ರೊ. ಸಿದ್ದೇಶ್ವರ ಸ್ವಾಮಿಜೀ, ಬುದ್ಧಪ್ರಿಯ ಬಂತೇಜಿ, ಶ್ರಮಿಕ ಚಳುವಳಿಯ ಯಮನಪ್ಪ ಅರಭಾಂವಿ, ನಿಂಗಯ್ಯ ಸ್ವಾಮಿ ಪೂಜಾರಿ, ಬಿ. ಎನ. ಧಾರವಾಡಕರ, ತನ್ನ ಸಾವಿನ ಉರುಳಲ್ಲೇ ಬದುಕಿಗೆ ಜನ್ಮವಿತ್ತ ನನ್ನ ತಾಯಿಯಿ ಪ್ರಪಂಚದಲ್ಲೆ ತಾಯಂದಿರಿಗೆ ಮತ್ತು ಅಭಿಮಾನಿ ಸಹೃದಯರಿಗೆ"[೨].

ಸಮಾಜದ ಮಹೋನ್ನತಿಗಾಗಿ, ಸ್ವಂತದ ಸ್ವಾರ್ಥ ಸುಖ ಸಂತೋಷಗಳನ್ನು ತ್ಯಾಗ ಮಾಡಿ ತಮ್ಮನ್ನೇ ಸಮುದಾಯಕ್ಕಾಗಿ ಸಮರ್ಪಿಸಿಕೊಂಡವರು. ಇವರಾರು ಮಹಾಲಿಂಗಮಂಗಿ ಅವರ ಜಾತಿ ಕುಲ ಬಂಧುಗಳಲ್ಲ, ಪಿತೃಗಳಲ್ಲ. ಜನಪದ ಕಾಳಜಿಯ ಸಾಮಾಜಿಕ ಹೋರಾಟಗಾರರು ಚಿಂತಕರು. ಆದ್ದರಿಂದ ಇವರೆಲ್ಲ ಅವರಿಗೆ ಆತ್ಮ ಬಂಧುಗಳು. ಈ ಮೇಲಿನ ಧ್ಯೇಯವಾದಿಗಳ ತತ್ವ ಸಿದ್ಧಾಂತ ಧೋರಣೆಗಳನ್ನು ಒಪ್ಪಿಕೊಂಡವರು. ಅವರು ನುಡಿದ ನಡೆದ ಪಥದಲ್ಲಿ ಹೆಜ್ಜೆಯಿಟ್ಟು ಸಾಗಲೆತ್ನಿಸುವ ಆದರ್ಶ ಜೀವನದಿ ವಾರಸುದಾರರು. ವರ್ಣಭೇದ, ವರ್ಗಬೇದ, ಜಾತಿ, ಮತ ಭೇದ, ದುಡಿವ ದುಡಿಸಿಕೊಳ್ಳುವ ಆಳುವ ಆಳಿಸಿಕೊಳ್ಳುವ ಶೋಷಕ–ಶೋಷಿತ ಈ ಸಾಮಾಜಿಕ ವ್ಯವಸ್ಥೆ ಮೌಢ್ಯಕಂದಾಚಾರಗಳ ಕುರಿತು ತೀವ್ರ ಅಸಮಾದಾನ ಅಸಹನೆ ಬದಲಾವಣೆ ಪ್ರಗತಿಯ ತೀವ್ರ ಹಂಬಲ ಕವಿಗೆ. "ವೇದಕಾಲದ ಮುದಿಋಷಿಗಳ ಕಟ್ಟಿದ ಸುವರ್ಣ ಗೋಡೆಗಳು, ಮತ್ತೆ ನಡು ಮಧ್ಯ ಮುನ್ನೂರು ಅರೆಕಿರಿ ಗೋಡೆಗಳನ್ನು ಬಲ್ಲ ಬಲ್ಲಂಗಕಟ್ಟೆ ಮೂವತ್ತುಮೂರು ಕೋಟಿ ದೇವರ ಮಾಡ (ಗೂಡು) ಬೇರೆ ಮಾಡಿದರು. ಗೊಡ್ಡು ಸಂಪ್ರದಾಯ ಎಷ್ಟು ಕರೆದರೂ ಗೊಡ್ಡು, ಜಿಡ್ಡು, ಹೋಗುವದಿಲ್ಲ". ಆಷಾಢಭೂತಿ ಡಾಂಬಿಕರಿಗೆ ಸಂಪ್ರದಾಯದ ಅವಕಾಶವಾದಿಗಳಿಗೆ ಸ್ವಾರ್ಥ ಸಾಧನೆಗೆ ಅನುಕೂಲವಾಗಿದೆ.

"ಇನ್ನ ಕೈ ಕಾಯಬಾರದು
ಗ್ಯಾರಂಟಿ ಖಲಾಸ ಆದ ಸುಡಗಾಡ
ಹಳೇ ಗೋಡೆಗಳನ್ನು ಒದ್ದು ಕೆಡವಿ
ನೆಲಸಮ ಮಾಡಬೇಕು".

(ಗೋಡೆಗಳು)

ಹಾಗೆ ನೋಡಿದಾಗಲೇ ಮತಭೇದ, ಅಸಮತೆ, ಅಸ್ಪೃಶ್ಯತೆ ಧಾರ್ಮಿಕ ಶೋಷಣೆ, ಕಂದಾಚಾರ ನಿಲ್ಲುವುದು. ಸರ್ವ ಸಾಮಾನ್ಯವಾದ ಸಮಾನ ವ್ಯವಸ್ಥೆ ಮಾಡಬೇಕೆನ್ನುವುದೇ ಕವಿಯ ಆಶಯ. ಅಣ್ಣ ಬಸವಣ್ಣ ಅಗ್ರಜ – ಅಂತ್ಯಜ ಭೇದವಳಿಯಲು ಕ್ರಾಂತಿಯನ್ನೇ ಮಾಡಿದ. ಆದರೆ ನಾವು ಬಸವಾನುಯಾಯಿಗಳು ಅಂದುಕೊಳ್ಳತ್ತಲೇ ಬಸವ ತತ್ವಕ್ಕೆ ಕೊಡಲಿ ಇಟ್ಟಿದ್ದೇವೆ.

'ನೀವು ಬಸವಾನುಯಾಯಿಗಳು' ಎಂಬ ಕವನದಲ್ಲಿ ಬಸವ ತತ್ವಗಳನ್ನು ಹೊತ್ತು ಇಷ್ಟಲಿಂಗವನ್ನು ನದಿಗೆ ಬಿಳ್ಕೊಟ್ಟು ಬೆಳ್ಳಿಯ ಬರಿ ಕರಡಿಗೆ ಇಟ್ಟುಕೊಂಡಿದ್ದೇವೆ. ಬಸವ ಕಿತ್ತೆಸೆದ ಮೂಢನಂಬಿಕೆ ಅನಿಷ್ಟ ಸಂಪ್ರದಾಯಗಳನ್ನು ಎತ್ತಿಕೊಂಡು ಸೊಂಪಾಗಿ ಪೋಷಿಸಿಕೊಂಡು ಬಂದಿದ್ದೇವೆ. ಆತನ ಮಂತ್ರೋಪದೇಶವನ್ನು ತಿರುಮಂತ್ರಿಸಿ ಬಿಟ್ಟಿದ್ದೇವೆ. "ಅವರಿವರ ತನುವ ನೋಯಿಸಿ ಮನವ ನೋಯಿಸಿ, ಅನ್ಯಾಯವಾಗಿ ಅಕ್ರಮವಾಗಿ ನಾಳಿಗೆ ನಾಡಿದ್ದುಗೆಂದು ಸಂಪತ್ತು ಕೂಡಿ ಹಾಕುತ್ತಾ ಎತ್ತು ಮೇರೆಸಿ ಗೊಂದಲ ಆಚರಿಸುವ ಬದಲು ನನ್ನ ಬಿಟ್ಟು ತತ್ವಗಳನ್ನಷ್ಟೇ ಅನುಷ್ಠಾನಕ್ಕೆ ತರಲು ಸಂಕಲ್ಪಿಸಿದರೆ ತನಗದೇ ದಿಬ್ಬ". ಬಸವಣ್ಣನ ಬಾಯಲ್ಲಿ ಕವಿ ತನ್ನ ಧ್ಯೇಯ ಧೋರಣೆಗಳಿಗೆ ಶಬ್ದ ರೂಪಕೊಡುವ ಪ್ರಯತ್ನ ಮಾಡಿದ್ದಾರೆ.

ತಮ್ಮ ಚೊಚ್ಚಿಲು ಕವನ ಸಂಕಲನ (೧೯೭೯) ರಲ್ಲಿ ಲೇಖಕರು ತಮ್ಮ ನಿವೇದನೆಯಲ್ಲಿ ಧೋರಣೆ ಸ್ಪಷ್ಟಪಡಿಸಿದ್ದಾರೆ. "ಮಾನವೀಸಂ ತಿಳಿಹದಿಯ ಮೇಲೆ ನಿಂತು ವಸ್ತು ನಿಷ್ಠವಾಗಿ ಒಲವು ನಿಲುವುಗಳ ಮೂಲ ಆಲೋಚನೆಯ ಅಂಗವಾಗಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳ ಭಾಷಾ ಶೈಲಿಯ ಮೂಲಕ ಅಭಿವ್ಯಕ್ತಪಡಿಸಿದ್ದೇನೆ. ವಿಮರ್ಶಕರನ್ನೋ, ಇನ್ನಾರನ್ನೋ, ದೃಷ್ಟಿಯಲ್ಲಿಟ್ಟುಕೊಂಡು ಅಥವಾ ಇನ್ನಾರನ್ನೋ ಧೂಷಿಸುವ ಉದ್ದೇಶದಿಂದ ಖಂಡಿತವಾಗಿಯೂ ಬರೆದಿಲ್ಲ".

ಯಾರು ಸಾದಿಸಲಾರದ್ದೇನನೋ ಈ ಮೂಲಕ (ಕ್ರಾಂತಿ ಬಂಡಾಯ) ಸಾಧಿಸುತ್ತಿದ್ದೇನೆಂಬ ಒಣಭ್ರಮೆಯೂ ನನಗಿಲ್ಲ. ನನ್ನ ಸಾಧ್ಯತೆಯ ಮಿತಿಯಲ್ಲಿ ಒಂದು ವರ್ಗದ ಪ್ರತೀಕವಾಗಿ ಪ್ರಾಮಾಣಿಕವಾಗಿ ಸ್ಪಂಧಿಸುತ್ತೇನೆ. ಸಮಷ್ಟಿ ಸೇವೆಯಲ್ಲಿ ನನ್ನದೂ ಒಂದು ಮುಷ್ಟಿ ಅಷ್ಟೇ.

೪.೧ ಕವಿ ಕಾವ್ಯದ ಆದರ್ಶ :

ಇಲ್ಲಿ ಕವಿಗೆ ತಾನೇಕೆ ಕಾವ್ಯ ಬರೆಯುತ್ತೇನೆ. ಯಾರಿಗಾಗಿ ಯಾವ ಉದ್ದೇಶಕ್ಕಾಗಿ ಎಂಬುದರ ಸ್ಪಷ್ಟ ಉದ್ದೇಶವಿದೆ.

"ಸಾಹಿತ್ಯ ಕಲೆ ಕೇವಲ ಕಲೆಗಾಗಿ ಅಲ್ಲ
ದಾನವನನ್ನೂ ಮಾನವನ್ನಾಗಿ
ಮಾನವನನ್ನೆ ಮಹಾದೇವನನ್ನಾಗಿ
ಮಾಡುವುದೇ ಅದರ ನಿಜವಾದ ಗುರಿ ಉದ್ದೇಶ".

ಎಲ್ಲ ಜೀವಿಗಳ ಬದುಕು ಹಸನಾಗಬೇಕು. ಶೋಷಣೆ ವಿಮುಕ್ತ ಆರ್ಥಿಕ ಸ್ವಾವಲಂಬನೆಯ ಸಾಮಾಜಿಕ ಸಮಾನತೆಯ ಜೀವನ ಎಲ್ಲರಿಗೂ ಒದುಗಬೇಕೆಂಬುದೇ ಕವಿಯ ಆಶಯ. ಕವಿಗೆ ಸಾಮಾಜಿಕ ಸ್ವಾಸ್ಥದ ಅರಿವಿದೆ. 'ಕಾವ್ಯ ಸಾಹಿತ್ಯ ಅದು ಸಮಾಜದ ವಾಸ್ತವ, ಓರೆ ಕೋರೆ ಗುಣ ದೋಷಗಳ ಯಥಾವತ್ತ ಚಿತ್ರಣ ನಿರೂಪಣೆ ಮಾಡಿದರೆ ಸಾಲದು ಸಾಹಿತಿಗೆ ನಾಳಿನ ಮುಂದಿನ ಸರ್ವಾಂಗ ಸುಂದರ ಸುಖಿ ಸಂಪನ್ನ, ಸಮಾಜ ರೂಪಿಸುವ ಹೊಣೆಯೂ ಇದೆ'. ಸರ್ವತೋಮುಖ ಅಭಿವೃದ್ಧಿಯ ಸರ್ವಾಂಗೀಣ ಉನ್ನತಿಯ ಸಮಾಜ ಹೀಗಿದ್ದರೇ ಸರಿ. ಒಂದು ಆದರ್ಶ ಮಾದರಿಯ ಜೀವ ಜಗತ್ತಿನ ಪರಿಕಲ್ಪನೆಯನ್ನು ತನ್ನ ಕನಸಿನ ಶ್ರಮಿಕರ ಶೋಷಣೆ ವಿಮುಕ್ತ ಸ್ವರಾಜ್ಯದ ಕನಸು ಕಟ್ಟಿಕೊಡುವ ಪರಿ.

"ಜಾತಿ ಮತ ಭೇದ ಅಳುಕಿಸಿ
ಹೊಸ ದೇಶ ಕೋಶ ಕಟ್ಟುವೆವು

ದೀನದಲಿತರಂತರ ಕರಗಿಸಿ
ಸಮತೆಯ ಸ್ವರಾಜ್ಯ ತರುವೆವು.
ನಾವು ಶಾಂತಿಗೆ ಬದ್ಧರು
ಆದರೆ ಸಮರಕ್ಕೂ ಸಿದ್ಧರು
ನಮಗಿನ್ನಿಲ್ಲ ಯಾರ ಭಯ
ಜಗಕಿದೋ ಶ್ರಮಿಕರ ಅಭಯ

(ಕರ್ಮವೀರರ ಹಾಡು)

ನಾವುಗಳು ಹಸಿವೆಗೆ
ನಮ್ಮ ಕಸುವು ಬಳಸುವೆವು
ನಮ್ಮಗಳ ಬೆವರಲ್ಲೇ
ನಮ್ಮನ್ನೇ ಬೇಯಿಸಿಕೊಳ್ಳುವೆವು."

(ಕರ್ಮವೀರರ ಹಾಡು)

ಬಸವಣ್ಣನ ಕಾಯಕ ತತ್ವದ ಶರಣರ ರಾಜ್ಯವೂ ಇದೆ. ಡಿ.ವಿ.ಜಿ. ಕೇಳುವಂತೆ 'ನಾವು ಬೇಯಿಸಿದ ಅನ್ನದ ನೀರು, ನಮ್ಮ ಬೇವರ ನೀರೋ ಇಲ್ಲ ಪರರ ಕಣ್ಣಿರೋ' ಹೊಟ್ಟೆಗೆ ಅನ್ನ ತಿನ್ನವವರೆಲ್ಲ, ತುತ್ತು ಎತ್ತುವ ಮುನ್ನ ತಮ್ಮ ಆತ್ಮ ಸಾಕ್ಷಿಯನ್ನು ಕೇಳಿಕೊಳ್ಳಬೇಕಾದ ಪ್ರಶ್ನೆ.

ಕವಿ ಕನಸಿನ ಸಮಾಜ ರಚನೆಯ ಚಿತ್ರಣ
"ಸರ್ವರಿಗೂ ಸಮಬಾಳು । ಸರ್ವರಿಗೂ ಸಮಪಾಲು
ಯಾರ ಹಂಗು ಯಾರಿಗಿಲ್ಲ । ಶೋಷಣ ವಿಮುಕ್ತ ಸಮಾಜ
ಒಂದೇ ನೆಲ ಒಂದೇ ಜಲ । ಒಂದೇ ಜನ ಒಂದೇ ಮನ
ಜಾತಿ ವಿಜಾತಿ ವಿಷಮತೆಯಿಲ್ಲ । ಕೀಳು ಮೇಲೆಂಬ ಅಸಮತೆಯಿಲ್ಲ".

ದೇವಾಲಯಗಳೆಲ್ಲಿ ವಾಸ್ತು ಕಲಾ ಶಾಲೆಗಳಾಗಿವೆ.
ಚರ್ಚುಗಳು ವೃದ್ಧಾಶ್ರಮಗಳಾಗಿ ಮಾರ್ಪಟ್ಟಿವೆ.
ಮಸೀದೆಗಳು ವಾಚನಾಲಯಗಳಾಗಿ ಬಿಟ್ಟಿವೆ.
ಗುರುದ್ವಾರಗಳು ವಿಶ್ವಶಾಂತಿ ನಿಲಯಗಳಾಗಿವೆ.

ಮಠಗಳೆಲ್ಲ ವೃತ್ತಿ ತರಬೇತಿ ಕೇಂದ್ರಗಳಾಗಿವೆ.
ನ್ಯಾಯಾಲಯಗಳು ಸಲಹಾ ಸಮಿತಿಗಳಾಗಿವೆ.
ಸೆರೆಮನೆಗಳಷ್ಟೂ ಶಿಶು ವಿಹಾರಗಳಾಗಿವೆ.

ಅರಮನೆಗಳೆಲ್ಲ ಸಾಂಸ್ಕೃತಿ ಕಲಾ ಮಂದಿರಗಳಾಗಿವೆ.

(ಸರ್ವೋದಯದ ಹೊಂಗನಸು)

ಒಂದೇ ಎತ್ತರದ ಸಮತಟ್ಟಾದ ವೇದಿಕೆ ಮೇಲೆ
ಸರ್ವರು ಸಾಲಾಗಿ ಸಮಾನ ಗೌರವದಿ ನಿಂತಿರುತ್ತೇವೆ
ಎಲ್ಲರ ತಲೆಗೂ ಮುಗಿಲಿಗೂ ಸಮಾನ ಅಂತರವಿರುತ್ತೆ

ದೇಶ ಭಾಷೆಗಳ ಗಡಿಯಿಲ್ಲ
ಕುಲವರ್ಣಗಳ ಭೇದಗಳಿಗೆಡೆಯಿಲ್ಲ
ಸಾವು ನೋವುಗಳ ತಡೆಯಿಲ್ಲ
ಹಸಿವು ಅವಮಾನ ಆತಂಕಗಳಿಲ್ಲ"

(ಶ್ರಮಿಕರ ಬರುತ್ತಿದ್ದಾರೆ)

ಕುವೆಂಪು ಧ್ಯೇಯಾದರ್ಶದಂತೆ 'ಮನುಜಮತ ವಿಶ್ವಪಥ ಒಂದೇ ಎಂದು ಸಾರುವ ಜಗತ್ತಿನ ಶ್ರಮಿಕ ಸಮುದಾಯ ಒಂದೇ'. ನಮಗೆ ದೇಶ ಭಾಷೆ ಕುಲ ವರ್ಣಗಳ ಗಡಿ ಬೇಕಿಲ್ಲ. ಸರ್ವಸಮಾನತೆಯ ಸರ್ವೋದಯದ ಕನಸು. ಇಂಚಗೇರಿ ಆಧ್ಯಾತ್ಮ ಸಾಂಪ್ರದಾಯದ ಜಯ ಜಗತ್ ಸಂದೇಶ. ಮಂಗಿಯವರ ಗುರು ಸಂಪ್ರದಾಯದ ಘೋಷಣೆ ಕರೆ, ಸರ್ವೋದಯ ಮಾಡಿಕೊಳ್ಳದಿದ್ದರೆ – ಸರ್ವನಾಶ "ಏಳಿ ಎಚ್ಚರಗೊಳ್ಳಿ" ಸಂದೇಶವಿದು.

'ಭೂಸುರರು ವೇದಕಾಲದಿ ಶಾಸ್ತ್ರ ಬಲದಿಂದ ಸಮಾಜವನ್ನು ಆಳಿದರು. ಕ್ಷತ್ರಿಯರು ಇತಿಹಾಸಗಳಲ್ಲಿ ಶಸ್ತ್ರ ಬಲದಿಂದ ಸಮುದಾಯವನ್ನೇ ಆಳಿದರು. ಆದರೆ ನಾವು ನವ ಮನ್ವಂತರದ ಅಧಿಕಾರಿಗಳನ್ನು ನಾವು

ಭವಿಷ್ಯತ್ತಿನ ವಾರಸುದಾರರು
ಸಮತೆಯ ಸ್ವರಾಜ್ಯ ಸ್ಥಾಪಿಸಿ
'ಶ್ರಮ' ಬಲದಿಂದ – ಬಾಳುವೆವು.

(ನಾಳೆ ಆಳುವದು ನಮ್ಮ ಪಾಳಿ)

ಆಳುವೆವು ಬದಲಾಗಿ 'ಬಾಳುವೆವು' ಪದ ಗಮನಿಸಿ ಜಗತ್ತಿನ ನಿರ್ಮಾತ ಶ್ರಮ ಜೀವಿಗಳಿಗೂ ಒಂದು ಕಾಲ ಬರಲೇಬೇಕು, ಬರುತ್ತದೆ. ಆದರೆ ಬೇಡಿದರೆ ಬಯಸಿದರೆ ಅದು ಸಿಗುವುದಿಲ್ಲ. ಆಸ್ತಿ ಅಂತಸ್ತು ಅಧಿಕಾವನ್ನು ಯಾರು ಬಿಟ್ಟು ಕೊಡುವುದಿಲ್ಲ. ಬೀಕ್ಷೆ ನಿಡುವರಲ್ಲ. ನಮ್ಮ ನ್ಯಾಯಯುತ ಹಕ್ಕು ಅಧಿಕಾರವನ್ನು ಒಗ್ಗಟ್ಟಿನಿಂದ ಬಲವಂತದಿಂದ ಕಿತ್ತುಕೊಳ್ಳಬೇಕು.

ಕವಿ ದುಡಿವ ಶ್ರಮ ಸಮುದಾಯವನ್ನು 'ಕರ್ಮವೀರ'ರೆಂದು ಕರೆದಿದ್ದಾರೆ. ಮುಷ್ಟಿಯಷ್ಟು ಜನ ಸಮಷ್ಟಿಯನ್ನು ಸುಲಿದು ತಿನ್ನುತ್ತಿದೆ. ರಕ್ತ ಬೇವರು ಬಸಿರು ದುಡಿದು ಗಳಿಸಿದ ಫಸಲನ್ನು ಫಲವನ್ನು ವಂಚಿಸಿ ತಾನೇ ಉಪಭೋಗಿಸುತ್ತಿದ್ದೆ. ನಾವು ಎಚ್ಚೆತ್ತುಕೊಂಡು ಒಂದಾಗಿ ಎದ್ದು ನಿಂತರೆ, ಇಡಿಯಾದ ದುಡಿವ ಜನ ಸಮುದಾಯಕ್ಕೆ ಹಿಡಿದಷ್ಟು ಮಂದಿಯವ ಲೆಕ್ಕ? ಎಚ್ಚರಿಕೆ ಕೂಡ! ನಾಳೆ ನಾಳೆ ಆಳುವುದು ನಮ್ಮ ಪಾಳಿ' ಎಂದು ಭವಿಷ್ಯ ನುಡಿಯುತ್ತಾರೆ.

"ಒಂದೀಟ ಕಡಿಮೆ ಕಲ್ತ. ಅಂಗನವಾಡಿ ಅಕ್ಕೋರಿಗೆ ಏಳುನೂರು ಕೂಲಿ!
ಇನ್ನಷ್ಟ ಕಲಿತ ಕನ್ನಡ ಶಾಲೆ ಮಾಸ್ತರಿಗೆ ಆರು ಸಾವಿರ ಪಗಾರ
ಮತ್ತಷ್ಟು ಓದಿದ ಹೈಸ್ಕೂಲ ಸರ್‌ಗಳಿಗೆ ಹತ್ತು ಸಾವಿರ ಸಂಬಳ
ಮತ್ತು ಅsಟ ಓದಿದ ಕಾಲೇಜ ಪ್ರೋಪೇಸರಗಳಿಗೆ ಇಪ್ಪತ್ತು ಸಾವಿರ ಸಂಬಳ
(೮೦ ರ ದಶಕದಲ್ಲಿ ಈಗ ಲಕ್ಷ ರೂ)

ಆದ್ರ ಎಬಡ ಬೇವರ್ಸಿ ದ್ಯಾವ್ರು ಎಲ್ಲಾರಿಗೂ ಒಂದs
ಅಳತಿ ಹೊಟ್ಟೆಕಟ್ಟೆ ಕಳಸಿದ್ದು ಹೆಡ್ಡತನ ಅಂತಿರೋ ಏನ್
(ಅಲ್ಲ ಅಂತೀರೋ) ಎಂತ ವಿಪರ್ಯಾಸ.

ಮಂಗಿಯವರು ಶ್ರಮಿಕ ಶೋಷಿತರ ಬಿದ್ದವರ ತುಳಿತಕ್ಕೊಳಗಾದವರ ಹಾಗೂ ನೊಂದವರ ದುರ್ಬಲರ ಪಕ್ಷಪಾತಿ. ಕವಿ ಏನೇ ಬರೆದರೋ ಸಮಾತಾವಾದದ ಚಿಂತನೆ ಮರೆಯುವುದಿಲ್ಲ. ಅದು ಅವರ ಜೀವನ ದೃಷ್ಟಿ ಅಂತೆಯೇ ಅವರ ಕಾವ್ಯ ಸೃಷ್ಟಿ. ಸಾಕ್ಷರತೆ ಕುರಿತು ಹಲವು ಕವನಗಳು ಇಲ್ಲಿವೆ.

"ಮತ ಮೌಢ್ಯ ಜಾತಿ ಭೇದ ತೊಲಗಿಸೋಣ
ಸಮೃದ್ಧಿ ಸದ್ಭವ ಸಮೈಕ್ಯತೆ ಸಾಧಿಸೋಣ
ಜೊತೆಗೂಡಿ ಬಾಳೋಣ ಬಾಳುತ್ತ ಬೆಳೆಯೋಣ
ಜ್ಞಾನ ವಿಜ್ಞಾನದಾ ನವಭಾರತ ಕಟ್ಟೋಣ
(ಸಾಕ್ಷರರಾಗೋಣ)

ನಮ್ಮ ಸಂವಿಧಾನ ಸಮನಾಗಿ ಬಾಳೊಡಲಿ
ಧರ್ಮ ದೇವರು ಮನುಕುಲ ಒಂದ್ಗೂಡಲಿ
ಭಾಷೆ ಜನ ಮನದಿ ಸದ್ಭಾವ ಅರಳಿಸಲಿ
ನಮ್ಮ ಸಂಸ್ಕೃತಿ ನಮ್ಮನ್ನು ಮನುಷ್ಯರನ್ನಾಗಿಸಲಿ."
(ನನ್ನ ಭಾರತ ಮಹಾನ್)

ಸದ್ಬುದ್ಧಿ ಸದ್ಭಾವ, ಸರ್ವೋದಯ, ಸರ್ವಾಂಗೀಣ ಉನ್ನತಿ ಸರ್ವತೋಮುಖ ಅಭಿವೃದ್ಧಿ ಸಮಬಾಳು ಸಮಪಾಲು ಸಮಾನ ಜೀವನಾವಕಾಶಗಳು ಇವೇ ಮಹಾಲಿಂಗ ಮಂಗಿಯವರ ಕಾವ್ಯದ ತಿರುಳು ಮತ್ತು ಮುಖ್ಯ ಗುರಿ ಮಹಾತ್ವಾಕಾಂಕ್ಷಿ.

ಅನ್ಯಾಯ ದೌರ್ಜನ್ಯ ಶೋಷಣೆಗೆ ಅತಿಯಾದಾಗ ಕವಿಯಲ್ಲಿ ಅನಿವಾರ್ಯವಾಗಿ ರೋಷಾವೇಶ ವ್ಯಕ್ತವಾಗುವುದಿದೆ. ಆದರೆ ಶೋಷಕರ ಕುರಿತು ಅದು ದ್ವೇಷವಲ್ಲ ಎಚ್ಚರಿಕೆ. ಕವಿಗೂ ಗೊತ್ತು ನಮ್ಮ ಉದ್ಧಾರ ನಾವೇ ಮಾಡಿಕೊಳ್ಳಬೇಕು. ಬೇರೆಯವರಿಂದ ನಿರೀಕ್ಷೆಲಾಗದು ಅಂತಾ.

"ಸಂಗಾತಿಗಳೇ
ನಮ್ಮ 'ಗತಿ' ಗೆಟ್ಟ ಬದುಕಿಗೆ
ನಾವೇ 'ಗತಿ' ಕೊಡಬೇಕು
ಇಲ್ಲಿ ಅದಕ್ಕೊಮ್ಮೆ 'ಗತಿ' ಕಾಣಿಸಬೇಕು.

ನಮ್ಮ ಹಕ್ಕು ನ್ಯಾಯಕ್ಕಾಗಿ ನಾವೇ ಹೋರಾಟ ಮಾಡಬೇಕು. ನಮ್ಮ ಉನ್ನತಿ ಅವನತಿಗೆ ನಾವೇ ಜವಾಬ್ದಾರರು. ಹೋರಾಟದ ಹಾದಿಯಲ್ಲಿ ಬದುಕಬೇಕು ಹಾಗೂ ಗೆಲ್ಲಬೇಕು. ಇಲ್ಲಿ ಸಾಯಲೂ ಸಿದ್ಧರಾಗಬೇಕು. ಹೌದು ಸತ್ತಂತೆ ಬದುಕುವದಕ್ಕಿಂತ ಸತ್ತೂ ಬದುಕಬೇಕೆಂಬುದು ಕವಿಯ ಸಂದೇಶ.

'ಜಿರಲೆ ತಿಂದ ಹಳೆಯ ಶಾಸ್ತ್ರ ಪುರಾಣ ಬದಿಸರಿಸಿ ಹೊಸ ಇತಿಹಾಸ ಬರೆಯುತ್ತೇನೆ'. ಅವಕಾಶ ಸಿಕ್ಕರೆ 'ಭೂಗೋಳಿನ' ಗತಿ ಕತೆಯನ್ನೇ ಬದಲಿಸುತ್ತೇನೆ" ಎನ್ನುವ ಸಂಕಲ್ಪ.

"ಬದುಕು ಅದು ಬಂದಂತೆ ಸ್ವೀಕರಿಸಿ, ಆದಷ್ಟು
ಮಾಡುತ್ತೇನೆ, ಮಾಡುತ್ತ ಮಡಿಯುತ್ತೇನೆ.

048751

ಗೆದ್ದು ಗೆದ್ದು ಸೋತವರ ಕೂಡ
ಸೋತು ಗೆಲ್ಲುತ್ತೇನೆ.
ಬದುಕಿ ಸತ್ತವರ ಮಧ್ಯ ನಾನು
ಸತ್ತೂ ಬದುಕುತ್ತೇನೆ – ಚಿರಂಜೀವಿಯಾಗಿ
(ಭೂಗೋಳಿನ ಕಥೆ)

ಎತ್ತುವವರಿಲ್ಲದ ನಮ್ಮ ಹೆಣಕ್ಕೆ
ನಾವೇ ಹೆಗಲು ಕೊಡಬೇಕಾಗಿದೆ.

ಎಲ್ಲ ತ್ಯಾಗ ಹೋರಾಟಕ್ಕೂ ಸಿದ್ಧನಾಗಿರುವ ಕವಿಗೆ, ತನ್ನ ಶೋಷಿತ ಶ್ರಮಿಕ ಸಮುದಾಯದ ದೌರ್ಬಲ್ಯ ದಾಸ್ಯ. ಅಜ್ಞಾನಾಲಸ್ಯಗಳ ಕುರಿತು ಅರಿವು ಅನುಕಂಪವಿದೆ. ಅಷ್ಟೇ ಅಲ್ಲದೇ ಸಾತ್ವಿಕ ಅಸಹನೆ ಸಂತಾಪವೂ ಇದೆ.

ನನ್ನ ವ್ಯಂಗದ ನಾಲಗೆಯಲ್ಲಿ ನಂಜೇಯಿಲ್ಲ
ಅಸಹನೀಯ ಅಸಹಾಯ ನೋವಿದೆ
ನಾನು ಚುಚ್ಚಿದರೂ ನೋಯಿಸಲಿಲ್ಲ ನಿಮ್ಮನೆಚ್ಚರಿಸಲು
ನಿಮ್ಮ ಸ್ಥಿತಿಗತಿಗಾಗಿ ನನಗೆ ತೀವ್ರ ಕಳವಳ ವ್ಯಥೆಯಿದೆ.

ದಯವಿಟ್ಟು ನನ್ನ ಕಳವಳ ಅಳಲನ್ನು ಅರ್ಥಮಾಡಿಕೊಳ್ಳಿ. ಇಷ್ಟೆಲ್ಲ ನಿಮಗಾಗಿ ಈ ಕ್ರಾಂತಿ ಹೋರಾಟ ಅಸಂಘಟಿತ ಶೋಷಿತ ಶ್ರಮಿಕ ವರ್ಗ – ದುಡಿಸಿಕೊಳ್ಳುವ ಬಂಡವಾಳಶಾಹಿ ಶೋಧಕ ವರ್ಗದ ಕಪಿಮುಷ್ಟಿಯಲ್ಲಿ ಸಿಕ್ಕು ನಲಗುತ್ತಿದೆ. ಅವರ ಅಸಹಾಯಕತೆಗೆ ದುರ್ಲಾಭಿ ಧನಿಕವರ್ಗ ಪಡೆದುಕೊಳ್ಳುತ್ತಿದೆ. ಆತ್ಮಶಕ್ತಿ ಧ್ವನಿ ಕಳೆದುಕೊಂಡು ಸಮುದಾಯಕ್ಕೆ ಜಾಗೃತಿ ಅರಿವು ನೀಡಿ ಸತ್ವ ಶಕ್ತಿ ತುಂಬುವುದೇ ಇಡೀ ಕಾವ್ಯದ ಮೂಲ ಉದ್ದೇಶವಾಗಿದೆ. ಅದನ್ನೇ ಸಾಂಕೇತಿಕವಾಗಿ ಸಾರವತ್ತಾಗಿ ಹಕ್ಕಿಗಳೇಕೆ ಸಾಯುತ್ತಿವೆ? ಎಂಬ ಕವಿತೆಯಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿ ಮಾಡಲಾಗಿದೆ.

"ಗೊತ್ತೆ ಹಕ್ಕಿಗಳೇಕೆ ಸಾಯುತ್ತಿವೆ?
ಈ ಪಾಪದ ನಾಡ ಬಡ ಹಕ್ಕಿಗಳು
ಭಂಡ ಬೇಡರು ಹರವಿದ ವ್ಯವಸ್ಥೆಯ
ಬಲೆಯಲ್ಲಿ ಅನ್ನದಗುಳಿಗಾಗಿ ಅರಿಯದೆ
ಅಡಿಯಿಟ್ಟು ಅನಿವಾರ್ಯವಾಗಿ ತೊಡರಿಕೊಂಡು
ಹಿಂಡು ಹಿಂಡಾಗಿ ಅನುದಿನವು
ಮುಗ್ಧ ಮುದ್ದು ಹಕ್ಕಿಗಳು ಸಾಯುತ್ತಿವೆ?"

'ಬಾಯಿಗೆ ಅನ್ನ ಕೈಗೆ ಕೆಲಸ'. ಬಣ್ಣದ ಮಾತು ಹೇಳುತ್ತಲೇ ಸ್ವಹಿತ ಸ್ವಲಾಭಕ್ಕಾಗಿ ಹೊಂಚು ಹಾಕುವ ಶೋಷಕ ವರ್ಗ ಹೆಣದ ಮೋಸದ ಜಾಲ ಹಸಿವು ಬಡತನ ಅಸಹಾಯಕತೆ ದೌರ್ಬಲ್ಯಗಳ ಲಾಭ ಪಡೆದು, ನ್ಯಾಯವಾದ ಹಕ್ಕು ಅಧಿಕಾರ ಕೂಲಿಯಿಂದ ವಂಚಿಸುವ ಆಳುವ – ಕೆಟ್ಟ ವ್ಯವಸ್ಥೆ. ಓ ಶೋಷಿತರೇ ತುಡಿಯುತ್ತ ಪರಿತಪಿಸುತ್ತ ದೈವವನ್ನು ಹಳಿದುಕೊಳ್ಳುತ್ತ ಕೂತರೆ ಪ್ರಾರಬ್ಧವೆಂದು ವಿಮುಕ್ತಿಗಾಗಿ ಕೊರಳೆತ್ತಿ ಪ್ರಾರ್ಥಿಸಿದರೆ, ಬಾನಿನಿಂದ ಧುತ್ತೆಂದು ಅದ್ಭುತವುದ್ಭವಿಸಿ ಪವಾಡ ನಡೆವ ಪುರಾಣ ಕಾಲವಲ್ಲ. ನಮ್ಮ ಗತಿಗೆಟ್ಟ ಬದುಕಿಗೆ ನಾವೇ ಗತಿ ಕೊಡಬೇಕು.

"ಮುದ್ದು ಹಕ್ಕಿಗಳೇ ಮಬ್ಬಿನಿಂದ
ಮುದಿ ಪರಂಪರೆಯ ಮಂಪರಿನಿಂದ
ಎಚ್ಚೆತ್ತು ಸೇಡಿನ ಕಿಡಿಗಾಗಿ ಕಳಚಿ
ಅಜ್ಞಾನಾಲಸ್ಯ, ದೌರ್ಜಲ್ಯದಾಸ್ಯಗಳು

ಸಾಪೇಕ್ಷ ಸಾಂದ್ರತೆಯ ಕ್ರೋಢಿಕರಿಸಿ
ಬಿಟ್ಟು ಭ್ರಾಂತಿ, ಕ್ರಾಂತಿ ಕ್ರಿಯೆಯಾಗಿ ನೆಲೆ
ಯೂರಿ ನಿಲ್ಲಿ, ಹೂಂ ಒಂದಾಗಿ ಒಮ್ಮೇಲೆ ನಿಮ್ಮೆಲ್ಲ
ಬಲಬಳಸಿ ಒದ್ದು ದೂರ ದಿಗಂತ ಕೈ ಸಿಡಿದು
ಹಕ್ಕಿನ ಪುಕ್ಕ ಬಿಚ್ಚಿ ಎಲ್ಲೆ ಮಿರಿ ಹಾರಿ
ಸೌಖ್ಯದ ಮೇಲೆ ತಲುಪಿ ಹಾಯಾಗಿರಿ".

(ಹಕ್ಕಿಗಳೇಕೆ ಸಾಯುತ್ತಿವೆ)

ಬಿಡಿಯಾದ ಶ್ರಮಿಕರನ್ನೆಲ್ಲ ಇಡಿಯಾಗಿ ಒಗ್ಗೂಡಿಸಿ, ಅವರಲ್ಲಿ ಅರಿವು ಜಾಗೃತಿ ಮೂಡಿಸಿ ಧೈರ್ಯ, ಆತ್ಮಬಲ, ವಿಶ್ವಾಸ ತುಂಬಿ ಸಂಘಟಣಾ ಶಕ್ತಿಯಾಗಿ ಸಾಮೂಹಿಕ ಹೋರಾಟಕ್ಕೆ ಸಜ್ಜುಗೊಳಿಸುವುದೇ ಕವಿಯ ಕಾವ್ಯದ ಧ್ಯೇಯ ಹಾಗೂ ಉದ್ದೇಶವಾಗಿದೆ. ಇಡೀ ಕಾವ್ಯಕ್ಕೆ ಮುನ್ನುಡಿ ರೂಪದ ಅಪೂರ್ವ ಕಾವ್ಯ. ನಮ್ಮ ಗೆಲುವು ನಮ್ಮ ಕೈಯಲ್ಲಿದೆ. ವರ್ಗ, ವರ್ಣ, ಭೇದ ಮರೆತು ಸಂಘಟನಾ ಶಕ್ತಿಯಾಗಿ ನಿಲ್ಲಬೇಕು. ಸತ್ವಶಕ್ತಿಗಳನ್ನೆಲ್ಲ ಸಂಚರಿಸಿ, ಸಂಕಲ್ಪಿಸಿ, ಸಿಡಿದೆದ್ದು ನಿಂತಾಗ ಮಾತ್ರ ನಿತ್ಯ ನರಕದಿಂದ ಸಂಕಷ್ಟದಿಂದ ಪಾರಾಗಲು ಸಾಧ್ಯ. ನಿಜಕ್ಕೂ ಆಶಾದಾಯಕ ಭರವಸೆದಾಯಕ ಗುಣಾತ್ಮಕ ಕಾವ್ಯ.

ಬಂಡವಾಳಶಾಹಿ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಕುತಂತ್ರ ಶಸ್ತ್ರಾಸ್ತ್ರಗಳ ತಯಾರಿಕೆ ಮಾರಾಟ, ಲಾಭಕೋರತನ ಸ್ವಾರ್ಥ, ಧೂರ್ತತನ ಒಡೆದಾಳುವ ನೀತಿ ಯುದ್ಧ, ಭೀತಿ ಸೃಷ್ಟಿಸುವುದು. ಪ್ರಚೋದಿಸುವುದು ಬಡವರ ಬಾಯಿಗೆ ಮಣ್ಣು ಹಾಕುವ ಯುದ್ದಗಳು, ಪದಾರ್ಥಗಳ ಅಭಾವ ಖರ್ಚು ವೆಚ್ಚ, ಬೆಲೆ ಏರಿಕೆ, ಸಾವು ನೋವು ತರುವ ಈ ಯುದ್ಧ ಯಾರಿಗೆ ಬೇಕು? ಜನ ಸಾಮಾನ್ಯ ದುಡಿದುಣ್ಣುವ ಸಮುದಾಯಕ್ಕೆ ಸುಖ ಶಾಂತಿಗೆ ಮಾರಕವಾದ ಯುದ್ಧ ನೀತಿಯ ಬಗ್ಗೆ ಪ್ರಗತಿಶೀಲ ಎಡಪಂಥಿಯ ನಿಲುವಿನ ಕವಿಗೆ ಸಹಜವಾಗಿಯೇ ಆಕ್ರೋಶ ಪ್ರತಿಕಾರ.

"ಅಲ್ಲೊಂದು ಕರ್ಬಲಾ ; ಇಲ್ಲೊಂದು ಕುರುಕ್ಷೇತ್ರ
ಅಲ್ಲಿ ಹೋಯರ ಪರ್ಚಿಲರು ; ಇಲ್ಲಿ ವ್ಯಾಸ ವಾಲ್ಮಿಕಿಯರು
ಮಹಾಕಾವ್ಯಗಳೆಲ್ಲ ಮಹಾಯುದ್ದಗಳ ಘೋರ ವರದಿಗಳು

ಓರ್ವನರಾಧಮ ಒಡೆಯನ ಪದವಿ ಸಾಮ್ರಾಜ್ಯಕ್ಕಾಗಿ
ಜನ ಕೋಟಿಯ ಸುಖ ಜೀವನ ದೋಚಿ ನಡೆಸಿದ ನರಮೇಧಗಳು

ಜಾತಿ ಭೇದ ಜನಾಂಗಭೇದ, ಗಡಿವಾದ ಭಷ್ಟುವಾದ
ವರ್ಣಕಲಹ ವರ್ಗಕಲಹಗಳ ವಿಷ ಬೀಜ ಬಿತ್ತುವರು.

ಸಂಗಾತಿಗಳೇ ಕೇಳಬೇಕು. ಯಾರಿಗೆ ಬೇಕೀ ಯುದ್ದ
ಶಾಂತಿಗೆ ಬದ್ಧರಾದ ದುಡಿವ ಜನರ ಬಾಯಿಗೆ ಮಣ್ಣು ಹಾಕುವ
ಸಾಮ್ರಾಜ್ಯಶಾಹಿ ಶೋಷಕರ ಯುದ್ಧ ಕುತಂತ್ರಗಳಿಗೆ
ಕಲ್ಲು ಹಾಕಲು ನಾವೆಲ್ಲ ಒಂದಾಗಿ ಸಿದ್ದರಾಗಬೇಕು.
ದಿನ ದುರ್ಬಲ ದುಡಿದು ದುಣ್ಣುವ ಜನಸಾಮಾನ್ಯರು ಎಚ್ಚೆತ್ತು
ಎದ್ದು ನಿಂತು ಶಾಂತಿ ಪತಾಕೆ ಹಿಡಿದು ಸಹಭಾಳ್ವೆಯ
ಘೋಷಣೆಯ ಒಕ್ಕೂರಲಿನಿಂದ ಹೇಳುವ ಸನ್ನದ್ಧರಾಗಬೇಕು.
(ಯಾರಿಗೆ ಬೇಕಿಯುದ್ಧ)

ಸೃಷ್ಟಿಕರ್ತ ನಮ್ಮನ್ನು ಹಿಂದು, ಮುಸ್ಲಿಂ, ಸಿಖ, ಇಸಾಯಿಯೆಂದು ನಾಮ ಲಾಂಛನ ಬಳಿದು ಕಳಿಸಿಲ್ಲ. ಭೂಗೋಳವನ್ನು ಇರಾಣ, ಇರಾಕ, ಹಿಂದೂಸ್ತಾನ, ಪಾಕಿಸ್ತಾನ ಎಂದು ಗಡಿಗೆರೆ ಎಳೆದು ವಿಭಜಿಸಲಿಲ್ಲ. ಈ ಪರಮ ಸತ್ಯ ಸಾಕ್ಷಾತ್ಕಾರ ಮಾಡಿಕೊಟ್ಟ ಅಂತಃಕಲಹ ದ್ವೇಷಾಸೂಯೆ ಅಳಿಸಿಬಾಳಬೇಕೆಂಬುದೆ ಕವಿಯ ಸಂದೇಶ. ಅದೇ ರೀತಿ ದುಡ್ಡು ದೊಡ್ಡಸ್ಥಿಕೆ ಅತಿ ಆಶೆ. ವ್ಯರ್ಥ ಪ್ರಯತ್ನ, ಮಾರ್ಗ ಬೇಡ, ಸಹಜ ಸಾಮಾನ್ಯ ಹೃದಯ ಶ್ರೀಮಂತಿಕೆಯ ನಿತ್ಯ ನೆಮ್ಮದಿಯ ಶರಣ ಜೀವನವೇ ಸಾಕು.

"ಬೇಕೇ ಬೇಕು ಎಲ್ಲರಿಗೂ ಎಂತಾದರೂ
ಹಿರಿಯ ಪಾತ್ರದ ಭಾರಿ ಗಾತ್ರದ ಮುಖವಾಡಗಳು"

ಒಟ್ಟಾರೆ ಅಸಲು ಸಹಜ ಸ್ಥಿತಿ ಮರೆಸಿ ದೊಡ್ಡಸ್ಥಿಕೆಯ ಮುಖವಾಡ ತೊಟ್ಟು ಮರೆವ ಚಪಲ.

"ತನ್ನ ಸತಿಗನುರೂಪ ಸಂಗಾತಿ
ಸುತರಿಗತಿ ಹಿತ ಪಿತ
ತಂತೆ ತಾಯಿಗನುಕೂಲ ಸುತ
ಒಳ್ಳೆಯ ನೆರೆ, ಹಿತ್ಯೆಷಿ, ಗೆಳೆಯ

ತನ್ನ ಅನ್ನ ತನ್ನ ಶ್ರಮದಿಂದಲೇ ಸಂಪಾದಿಸುವ
ಸತ್ಪ್ರಜೆಯಾಗುವ ಹಂಬಲ ನಮ್ಮಲೆಷ್ಟು ಮಂದಿಗೆ"

ಬಣ ಬಡಿವಾರ, ಆಡಂಬರ, ದೊಡ್ಡಸ್ಥಿಕೆ, ಆಷಾಡಭೂತಿತನ ಬಿಟ್ಟು ನಾವು ನಮ್ಮ ನೈಜ ಸ್ವರೂಪ ವ್ಯಕ್ತಿತ್ವದಲ್ಲೇ ಪ್ರಾಮಾಣಿಕವಾಗಿ ಪ್ರಕಟಗೊಳ್ಳಬೇಕಿದೆ. ಮನುಷ್ಯತ್ವವುಳ್ಳ ಮಾನವರಾಗಬೇಕಿದೆ. ಎಂತಹ ಉದಾತ್ತ ಜೀವನ ದೃಷ್ಟಿ ಅಷ್ಟು ಸರಳ ಸುಲಭವಾಗಿ ಕಟ್ಟಿಕೊಟ್ಟುವ ಪ್ರಯತ್ನ ಇಲ್ಲಿದೆ.

ಸಾಮಾಜಿಕ ಅವ್ಯವಸ್ಥೆ ಸಾಂಪ್ರದಾಯ ಮೌಢ್ಯಗಳ ವಿರುದ್ದ 'ಜನ ಮರುಳೋ ಜಾತ್ರೆ ಮರಳೋ', ಸಾಯುತ್ತಿರುವ ನಮ್ಮ ಅನಾಥ ಪ್ರಜ್ಞೆ ನಾ ಅಮರ ನಿರಂಜನ, ನಾವು ಕೂಲಿಗಳು ಸಾರ ಕೂಲಿಗಳು, ಅಂತಃ ಪ್ರಜ್ಞೆಗೆ ಸಾಕ್ಷಿಯಾಗಿವೆ. 'ಪರಿಸರ' ಕುರಿತು 'ಸಾಕ್ಷರತಾ' ಮಹತ್ವದ ಕುರಿತು ಮಾನವೀಯತೆ ಆತ್ಮಶೋಧನೆಗೊಳಪಡಿಸುವ ಮಾನವೀಯ ಕಾವ್ಯಗಳು ಸಾಕಷ್ಟು ತುಂಬಿವೆ. 'ನನ್ನ ಭಾರತ ಮಹಾನ್', ಬೇಕಾಗಿದ್ದಾನೆ, ಸ್ವರೂಪದರ್ಶನ, ಅಂತರಂಗ ಸುದ್ದಿ, ಮೌಲ್ಯಗಳ ಹುಡುಕಾಟ ನೋಡಬಹುದಾಗಿದೆ. ಕೆಂಪು ಕಾವ್ಯ ಕುಸುಮಗಳ ನಡುವೆ ಅನುರಾಗ ಪ್ರೀತಿ ತುಂಬಿದ ಗುಲಾಬಿಗಳು ಇವೆ.

ಕವಿ ಏನೇ ಬರೆಯಲಿ ಸಾಮಾಜಿಕ, ಶೈಕ್ಷಣಿಕ, ಪರಿಸರ ಪ್ರಣಯ, ಅನುಭಾವ ಹೀಗೆ ಆದರೆ ಪ್ರಗತಿಶೀಲ ಧ್ಯೇಯಧೋರಣೆ ಮಹಾಲಿಂಗಮಂಗಿಯವರ ಕಾವ್ಯದ ಮೂಲ ದ್ರವ್ಯ ಮೂಲತಃ ಅವರೊಬ್ಬ ಮಾನವೀಯತೆಯ ಪ್ರತಿಪಾದಕ, ಸಾಮಾಜಿಕ ಕಳಕಳಿಯ ಪ್ರಗತಿಶೀಲ ಕವಿ ಎಂಬ ಅರಿವು ಪ್ರಜ್ಞೆ ಎಲ್ಲ ಕಾವ್ಯದಲ್ಲೂ ಕಾಣಬಹುದು.

"ಹುಡುಕುತ್ತಿದ್ದೇನೆ ಸ್ವಾಮಿ – ಹುಡುಕಿಕೊಡವಿರಾ?
ಅಂತಃಕರಣ ತುಂಬಿದ ಮಾನವತೆ ಮಿತಿವ
ಸತ್ಪಥದಲ್ಲಿ ನ್ಯಾಯ ಹಿಡಿದು ನಡೆವ ನೈಜ ನಗೆಯ
ಅಂತರಂಗ ಬಹಿರಂಗ ಶುದ್ಧಿಯ ಅಪ್ಪಟ ಮನುಷ್ಯನನ್ನು
ಹುಡುಕುತ್ತಿದ್ದೇನೆ. ಸ್ವಾಮಿ ಬಹುಕಾಲದಿಂದ
ಸಿಕ್ಕರೆ ತೋರಿಸಿ, ಬೆಟ್ಟಿಯಾದರೆ ಹೇಳಿ ಕಳಸಿ
ನನಗವರ ಕಾಣಲಿದೆ. ಮುಂಗೈಗೆ ಮುದ್ದಿಡಲಿದೆ ।
ಅವರ ಪಾದಗಳ ಧೂಳನ್ನು ಮುಡಿಯಲಿದೆ."

(ಹುಡುಕಿಕೊಡವಿರಾ)

ಮತ್ತೆ ಮಹಾಲಿಂಗರ ಮೊದಲ ಆಕರ್ಷಣೆ. ಸತ್ಯಾನ್ವೇಷಣೆಯಲ್ಲಿ ನೀತಿ ನ್ಯಾಯಗಳನ್ನರಸುತ್ತ ಧ್ಯೇಯಾದರ್ಶದ ಹುಚ್ಚಿಗೋಸ್ಕರ ನೆನಪಾಗುತ್ತದೆ. ಕವಿಯ ಸತ್ಯ, ನ್ಯಾಯ, ನೀತಿ, ಧರ್ಮ, ಅಪ್ಪಟ ಮಾನವೀಯ ಆಕಾಂಕ್ಷೆ, ಮಹತ್ವಾಕಾಂಕ್ಷೆ ಧ್ಯೇಯ ಧೋರಣೆ ಅವರ ದೃಷ್ಟಿ ಕುರಿತು ಮನವರಿಕೆಯಾಗುತ್ತದೆ.

'ಅನುರಾಗ' ನಲ್ಲ-ನಲ್ಲೆಯರಿಗಾಗಿ ಬರೆದ ಪ್ರೇಮಕಾವ್ಯದ ಹನಿಗಳು ಅದು ಹೃದಯ ಜನ್ಯ. ಅಂತಃಕರಣ ಭಾವ ಸೌಂದರ್ಯದ ನಲ್ವಾಡುಗಳು. ಪ್ರೀತಿಯೇ ಹಾಗೆ ಪ್ರಣಯ ಕವಿಯಾಗುತ್ತಾನೆ. ಕವಿ ಪ್ರಣಯವಾಗುತ್ತಾನೆ ಎಂಬುದಕ್ಕೆ 'ಅನುರಾ'ಗ ಪುರಾವೆ ಒದಗಿಸುತ್ತವೆ. 'ನನ್ನ ಭಾರತ ಮಹಾನ್' ಸಂಕಲನದಲ್ಲಿ ಬಂಡಾಯಕ್ಕಿಂತ ಭಿನ್ನವಾದ ಸಾಮಾಜಿಕ, ಚಿಂತನೆ, 'ಆತ್ಮಾವಲೋಕದ' ಕುರಿತಾದ ಸಾಕ್ಷರತೆ ಮತ್ತು 'ಅನುಭವ ಭಕ್ತಿ' ಗೀತೆಗಳನ್ನು ವಿಭಿನ್ನಸ್ತರದಲ್ಲಿ ಅಧ್ಯಯನ ಮಾಡುವಂತಿವೆ.

'ದಿಲ್ಲಿ ದೂರವಿಲ್ಲ' ವಿಶೇಷ ಅನುಭೂತಿ ನೀಡುವ ಕಾವ್ಯ, ಇಲ್ಲೂ ಕವಿಯ ಜೀವನ ದರ್ಶನ ದೃಷ್ಟಿ ಗಂಭೀರ ಚಿಂತನೆಗೊಳಪಡಿಸುವವು.

ದಿಲ್ಲಿ ಪರಿಪರೇ । ಬಡಕಾರ್ಮಿಕರು ಕಷ್ಟಪಟ್ಟು
ತಿಕ್ಕಿ ತೊಳೆಯದಿದ್ದರೆ । ನಿಮ್ಮ ಬಾದಶಾಹಿ ದಿಲ್ಲಿ ಕೊಳೆತುನಾರುತ್ತಿತ್ತು
ಹಳ್ಳಿ ಬಡವರಿಂದಲೇ । ದಿಲ್ಲಿ ಸುಖನಾತಿ
ಹಳ್ಳಿಯಿಂದಲೇ । ದಿಲ್ಲಿ ಬಸಿರಾಗಿದ್ದು ಸುಳ್ಳಲ್ಲ.

ಸಾಮಾನ್ಯ ದೃಷ್ಟಿಗೂ ಪ್ರಗತಿಶೀಲ ಕವಿಯ ದೃಷ್ಟಿಗೂ ಅದೇ ವ್ಯತ್ಯಾಸ. ಮಹಾಲಿಂಗಮಂಗಿಯವರ ಎಲ್ಲೇ ಇರಲಿ ನಿದ್ದೆಯಲ್ಲೇ ಇರಲಿ ಬೇಕಾದರೆ ಸಾಮಾಜಿಕ ಕಳಕಳಿಯ ವಿಭಿನ್ನ ದೃಷ್ಟಿಯ ವಿವೇಚನೆ ಎಲ್ಲರಿಂದಲೂ ನಿರೀಕ್ಷಿಸಲು ಸಾಧ್ಯವೆ. ಅದೇ ಮಹಾಲಿಂಗಮಂಗಿಯವರ ಕಾವ್ಯ ಧೋರಣೆಯ ವಿಶೇಷತೆ. ಅವರ ಜೀವನ ದೃಷ್ಟಿಯದು ಸಂಕಲನದುದ್ದಕ್ಕೂ ಅದು ಅಭಿವ್ಯಕ್ತವಾಗುವುದು.

ಪುಣ್ಯಕ್ಷೇತ್ರ ನೋಡಲಿಲ್ಲ । ತೀರ್ಥಸ್ನಾನ ಮಾಡಲಿಲ್ಲ
ಮಠಮಂದಿರ ಸುತ್ತಲಿಲ್ಲ । ಧೂಪದೀಪ ಬೆಳಗಿಲ್ಲ
ವೇದ ಪುರಾಣ ಓದಲಿಲ್ಲ । ಗುರುಭೋದ ಕೇಳಲಿಲ್ಲ
ಭಕ್ತಿಯಂತೋ ತಿಳಿಯಲಿಲ್ಲ । ಜ್ಞಾನವೆಂತೋ ಅರಿಯಲಿಲ್ಲ
(ಆತ್ಮದರುಶನ ೨೦೦೦)

ನ್ಯಾಯವೇ ಧರ್ಮ, ಸತ್ಯವೇ ದೇವರು, ಕಾಯಕವೇ ಕೈಲಾಸವೆಂದು ನಂಬಿದ್ದ ಕವಿ (೨೦೧೦) ರಲ್ಲಿ ದಿಲ್ಲಿಗೆ ಹೋದಾಗ ತಾನು ಕಾಶಿಗೆ ಹೋದದ್ದು ಬರೆದುಕೊಳ್ಳುತ್ತಾರೆ. ತನ್ನನ್ನೇ ಪ್ರಾಮಾಣಿಕವಾಗಿ

ಲೇವಡಿ ಮಾಡಿಕೊಳ್ಳುವ ಆತ್ಮಾವಲೋಕನ ಆರೋಗ್ಯ ಪೂರ್ಣ ವಿವೇಚನೆ ಗ್ರಹಿಸಿ –

ನಾನು –

ನಾನೂ –

ನಾನೇ – ಕಾಶಿಗೆ ಹೋಗಿದ್ದೆ

ಆದರೆ ಹೇಸಿ ದೇಸಿ ಖಾಯಿಲೆಗಳಾವು

ವಾಶಿಯಾಗಲೇ ಇಲ್ಲ

(ಕಾಶಿಗೆ ಹೋದೆ)

ಇಲ್ಲಿ ನಾನು, ನಾನೂ – ನಾನೇ ಪದಗಳ ವಿಶಿಷ್ಠ ಧ್ವನಿ ಗಮನಿಸಿ 'ನಾನು' ಕಾಶಿಗೆ ಹೋಗಿದ್ದೆ ಎಂದರೆ ಸಾಕಿತ್ತು. ಅದು ಸಹಜ ಸಾಮಾನ್ಯ 'ನಾನು' ಅಂದರೆ ಇಲ್ಲಿ ಪ್ರಗತಿಶೀಲ ಬಂಡಾಯ ಕವಿಯಾಗಿ ವಿಚಾರವಾದಿ ಬುದ್ಧಿ ಜೀವಿಯಾಗಿ 'ನಾನು' ಹೋಗಬೇಕಾಯಿತಲ್ಲ ಎಂಬ ಜಿಜ್ಞಾಸೆ. 'ನಾನೇ' ಎಂಬಲ್ಲಿ ಪ್ರಜ್ಞಾವಂತನಾಗಿ ಪ್ರಜ್ಞಾಪೂರ್ವಕವಾಗಿ ಪ್ರತ್ಯಕ್ಷ ಕಂಡು ಅನುಭವ ಮಾಡಿಕೊಳ್ಳಲು ಹೊರಟ್ಟಿದ್ದೇನೆ ಎಂಬ ಸಮಜಾಯಿಷಿ! ಆದರೆ ಏನಾಯಿತು? ಏನು ಆಗಲಿಲ್ಲ. ಪರಿಣಾಮ ಪರಿವರ್ತನೆಯಾಗಲಿಲ್ಲ. ಕಾವ್ಯ ಹೀಗೆ ಬೆಳೆಯುತ್ತದೆ. ಅದರಲ್ಲಿ ಒಂದೆರಡು ಸಾಲು ಹಿಡುದು ತೋರಲಾಗಿದೆ. ಗನ್‌ಮ್ಯಾನಗಳು ಬಂಧನದಲ್ಲಿ ಖೈದಿಯಾಗಿರುವ ಭಗವಂತನ ಕುರಿತು ಸಹಾನುಭೂತಿ ವೈಚಾರಿಕತೆ ಅನೇಕ ಕಾವ್ಯದಲ್ಲಿ ಹಾಸು ಹೊಕ್ಕಾಗಿದೆ. ಕವಿಯ ಮನಸ್ಥಿತಿಗೆ ಕನ್ನಡಿ ಹಿಡಿದ ಕೆಲ ಸಾಲು ಓದುಗರ ಅವಗಾಹನೆಗೆ.

"ದಿಲ್ಲಿ ದೂರವಿಲ್ಲ – ಹೃದಯಕ್ಕೆ ಹತ್ತಿರವೇ ಇದೆ ।

ದಿಲ್ಲಿ ದೂರದ – ಅದಕs ನೋಡಾಕ ಚೆಂದ ಕಾಣ್ತದ ।

ಸಾರೀ ನಿಮ್ಮ ದಿಲ್ಲಿ । ವೆರಿ ವೆರೀ ದುಬಾರಿ ।

ದಿಲ್ಲಿ ದಿಲ್ಲಿಯೇ ದಿಲ್ಲಿಗೆ ದಿಲ್ಲಿಯೇ ಸಾಟಿ ।

ದಿಲ್ಲಿವಾಲೇ ದಿಲ್ಲಿವಾಲೇ । ನಿಮಗೂ ಸಲಾಮು ನಿಮ್ಮ ದಿಲ್ಲಿಗೂ ಸಲಾಮು ।

ದಿಲ್ಲಿಯಲ್ಲೆ ಮನಸ್ಸು ಉಳಿದಿದೆಯೋ ।

ಇಲ್ಲ ದಿಲ್ಲಿ ನನ್ನ ಮನಸ್ಸಿನಲ್ಲಿ ಕೂತಿದೆಯೇ ।

ದಿಲ್ಲಿ ! ಬೆರಗು – ಬೆಡಗು, ಒಣಪು ಒಯ್ಯಾರ, ಕುತೂಹಲ ಕೌತುಕ

ದಿಲ್ಲಿಯಲ್ಲೂ ನಾ ಕಂಡಂತೆ ನಾಯಿಗಳ ಬಾಲ ಡೊಂಕು ।

ಕವಿ ಮಹಾಲಿಂಗ ಮಂಗಿಯವರು ದಿಲ್ಲಿಯಲ್ಲಿ ಬಹುಮಹಡಿಯ ಕಟ್ಟಡದ ೨೧ ನೇ ಅಂತಸ್ತಿನ ಮನೆಯಲ್ಲಿ ಮಲಗಿರಬೇಕಾದರೆ ಅವರಿಗೆ ನಿಟ್ಟಿರಳು ಸುಡಗಾಡದೊಳಾರೋ ರೋಯ್ಯಂತೆ ಅಳುವ, ನಿಟ್ಟುಸಿರು ನರಳಿಕೆ ಬಿಕ್ಕಳಿಕೆ ಕೇಳಿ ಬರುತ್ತದೆ. ಆ ಧ್ವನಿ ತನ್ನ ಒಡಲಾಳದಿಂದ ಅಲ್ಲ ಭೂಮಿಯ ಒಡಲಾಳದಿಂದ ತೂರಿ ಬರುತ್ತಿರುವಂತೆ –

ಒಂದೆಡೆ ವಿಪರಿಮಿತವಾಗಿ ಲೆಕ್ಕಮಿರಿ
ಅಳತೆ ಮಿರಿ ಪೇರಿಸಿಟ್ಟ ಬೃಹತ್
ಭೂಭಾರದ ಬಹುಮಹಡಿ ಕಟ್ಟಡಗಳು ।
ಇನ್ನೋದೆಡೆ ಅನ್ಯಾಯ ಅನಾಚಾರ ಕ್ರೌರ್ಯ
ಪಾಪ ಸಹಿಸಲಾಗದೆ ತಾಳಲಾಗದೆ ಭೂತಾಯಿ
ತತ್ತರಿಸಿ ನೋವಿನಿಂದ ನಲುಗಿ ನರಳುತ್ತಿರುವಂತೆ.
(ವೀರ ನಾರಿಯ ರೋಧನೆ)

'ಮಾನವನ ದುರಾಶೆ ಅತಿಯಾಯ್ತು', ಅಯ್ಯೋ ಭೂದೇವಿ ಅರೆಕ್ಷಣ ಸಾಹನೆಗೆಟ್ಟು ತುಸು ತಲೆ ಕೊಡವಿದರೆ ಸಾಕು. ದಿಲ್ಲಿಗರ ಗತಿ ಅಧೋಗತಿ ಅವನತಿ ನೆನೆದು ಕಳವಳಿಗೊಳ್ಳುತ್ತಾರೆ.

ದಿಲ್ಲಿಯಲ್ಲಿ ನಾಯಿಗಳು ! ಬೀದಿ ಅಲೆಯುವುದಿಲ್ಲ
ಊರಾಡುವದಿಲ್ಲ ಊಳಿಡುವುದಿಲ್ಲ ! ಕಚ್ಚಿ ಕಚ್ಚಿ ತುರಿಸಿಕೊಳ್ಳವುದಿಲ್ಲ
ಕಂಡ ಕಂಡಲ್ಲಿ ಕಾಲೆತ್ತುವದಿಲ್ಲ ! ಸಿಕ್ಕ ಸಿಕ್ಕಲ್ಲಿ ಮೂಸುವದಿಲ್ಲ
ಹ್ಯಾಪು ಮೋರೆ ಜೋಲು ಬಿಟ್ಟುಕೊಂಡು
ಎ. ಸಿ. ಕಾರಿನಲ್ಲೇ ತಿರುಗಾಡುತ್ತವೆ.
ಕಣ್ಣುಗಳಲ್ಲೇ ಇರಿದು ಕೊಲ್ಲುತ್ತವೆ !
(ನಾಯಿಗಳು)

ಅಲ್ಲಿ ನಾಯಿಗಳ ಸ್ಥಿತಿ ಹಾಗಿದೆ. ಇಲ್ಲಿ ಮನುಷ್ಯರ ಸ್ಥಿತಿ ಹೀಗಿದೆ. ವಿಲಾಯಿತಿ ಬೆಕ್ಕಿಗೆ ಲಕ್ಷ – ನಾಯಿಗಳಿಗೆ ಮೂರ್ನಾಕು ಲಕ್ಷ ಬೆಲೆ ಮನುಷ್ಯ ಜೀವನಕ್ಕೆ ಬಿಡಿಗಾಸಿನ ಬೆಲೆಯಿಲ್ಲ. ಎಂತಃ ವಿಪರ್ಯಾಸ. ದಿನವಿಡೀ ಬೆವರು ಸುರಿಸಿದರು ಹೊಟ್ಟೆ ತುಂಬುವುದಿಲ್ಲ. ಮೈ ಮುಚ್ಚುವುದಿಲ್ಲ. ಅಂತಹ ಸಂದರ್ಭದಲ್ಲಿ ಕವಿ ಕೆರಳುವದಿದೆ[೩].

ತಾಳಿ ತಾಳಿ ಉಳಿದುರಿದು । ತಮ್ಮ ಹೊಟ್ಯಾನ ಕಿಚ್ಚಗಿ
ಕಡೀಕ ಅದರಾಗs ಒಂದಿನ । ಇವರ್ನೆಲ್ಲಾ ಕಿಚ್ಚಾ ಕೊಡ್ತಾದಷ್ಟ
ಇಂದ ಅಂವ ಉಟ್ಟಿದ್ದ ತಲಗಿ । ಸುತ್ತಿ ನಿಂತಾನು
ದುಡಿವ ಮಂದಿ ಕೈಗೆ । ದಂಡ ತಗೊಂಡರ
ನಿಮ್ಮ ನಾಜೂಕ ಕಾಯ್ದೆ ಕಾನೂನೆಲ್ಲ ಮಂಡ ಆಗ್ತಾವು.
(ಹಳ್ಳಿ ಎದ್ದರೆ)

ಗಾಳಿಗೊಮ್ಮೆ ಉಸಿರು ಬರುತ್ತದೆ
ಮಣ್ಣಿಗೆ ಉದ್ದನೆಯ ಕೆಂಪು ಕೈ ಮೂಡುತ್ತವೆ
ಗಗನ ಮಂಡಲದ ಪಂಚ ತಾರೆಗಳನ್ನು
ಎಣಿಸೆಣಿಸಿ ಬಡಿದು ನೆಲಕ್ಕೆ ಕೆಡುವಲಾಗುತ್ತದೆ
(ಕಾಲನಗರ್ಭ)

ನೆಲದ ಅಸಲು ಮಕ್ಕಳು । ಎಷ್ಟು ಸಹಿಸ್ಯಾರು ಇನ್ನೆಷ್ಟಂತ ದಾಹಿಸ್ಯಾರು
ಉರಿನುಂಗಿ ನುಂಗಿ ಹೊಟ್ಯಾಗ ಕಿಚ್ಚ ತುಂಬೇದ
ಕೆಂಡ ಕಾರದ ಇನ್ನೇನು ಮಾಡ್ತಾರು
(ಕೆಂಡ ಉಗುಳುವವರು)

'ತಡಸಲ ಮಹಾಲಿಂಗನ ವಚನಗಳು' ವಚನ ಕಾವ್ಯ ಕೂಡಾ ಅಪ್ಪಟ ಪ್ರಗತಿಶೀಲ ಪ್ರತಿಭಟನಾ ಕಾವ್ಯ ಆಧುನಿಕ ಜೀವಶೈಲಿ ಬದಲಾದ ನಂಬಿಕೆ, ಸಂಪ್ರದಾಯ, ಜೀವನದೃಷ್ಟಿ ಮೌಲ್ಯಗಳಿಗೆ ಸಮಸ್ಯೆಗಳಿಗೆ ವಚನಗಳು ಒಡ್ಡಿಕೊಳ್ಳುತ್ತೇವೆ.

ಹೀಗೆ ಮೌಲ್ಯಗಳು – ಅರ್ಥಕ್ಕೆ ಅರ್ಥಾರ್ಥವಾಗಿ ಬಿಟ್ಟು ಅನರ್ಥಕ್ಕೆ ಕಾರಣವಾಗಬಲ್ಲವು.
ಬಸವ ವಚನಗಳೇ ಪ್ರವಾಚಿಗಳ ಆಹಾರ
ಬಸವನ ಹೆಸರೇ ಪ್ರವಾದಿಗಳ ಆಧಾರ
ಬಸವಣ್ಣನೇ ಅನ್ನದಾತಾ ಆಶ್ರಯದಾತಾ
ಬಸವ ಸಮಯ ಸಾಧಕರ ಕಾಮಧೇನು
ಬಸವ ಅವಕಾಶವಾದಿಗಳ ಕಲ್ಪವೃಕ್ಷ.

ವಚನ ಬಾಚಾರ ತೆರೆದು ಮಾತು ಮಾರುವ ದಲ್ಲಾಳಿಗಳು

ಬಸವಣ್ಣ ನೀವು ಆತ್ಮ ಕಲ್ಯಾಣ ಲೋಕ ಕಲ್ಯಾಣವೆಂದಿರಿ
ಸ್ವಕಲ್ಯಾಣ ಅಂದುಕೊಂಡು ಸ್ವಂತದ ಕಲ್ಯಾಣ ಸಾಧಿಸಿಕೊಂಡವರು.

ನಾವೂ ವಚನ ಬರೆದೇ ಬರೆದವು
ವಚನ ಕೊಟ್ಟೆವು ಪರಿಪಾಲಿಸಲಾಗಲಿಲ್ಲ
ನಿಮ್ಮ ವಚನಾಂಕಿತ ತಿದ್ಧಿ – ತಿದ್ಧಿ ರದ್ದಿಯಾದೆವು.

ನೀವು ನುಡಿದು ನಡೆದು ತೋರಿದ ಕಲ್ಯಾಣದ ಹಾದಿ
ನುಡಿಯಲುಂಟು ಯಾರು ನಡೆಯಲಾಗದೆ
ಕೆಟ್ಟ ಕೆರ ಹಿಡಿದಿದೆ.

ಬೇಡ ಸ್ವಾಮಿ ಜಗದ್ಗುರುಗಳೊಬ್ಬರು ಬೇಡ
ಬೇಕಾಗಿದ್ದುದ್ದೊಬ್ಬ ಸದ್ಗುರು ।

ಪ್ರೀತಿಸಲ್ಪಡಬೇಕೆಂದರೆ ನೀ ಮೊದಲು ಪ್ರೀತಿಸು

ಮಾತು ಬಲ್ಲವರು ಬೇಕು – ಮಾತಿನ ಮಲ್ಲರಲ್ಲ

ಆಶಯಗಳಿಗಿಂತ ಆದರ್ಶಗಳು ಮುಖ್ಯ
ಆಯುಷ್ಯಕ್ಕಿಂತ ಆರೋಗ್ಯವೇ ಮುಖ್ಯ
ಚರಿತ್ರೆಗಿಂತ ಚಾರಿತ್ರ್ಯ ಮುಖ್ಯ ।

ಎಲ್ಲ ಎಲ್ಲ ಜಾಣೆಯರು ನಾವು । ಆದರೆ ಅದಲ್ಲ ಮುಖ್ಯ
ಬಾಳಲ್ಲಿ ಅದೆಷ್ಟು ತತ್ವಜ್ಞಾನ ಅಳವಡಿಸಿಕೊಂಡಿದ್ದೆವೆಂಬುದು ಮುಖ್ಯ.

ಗಾಂಧಿಗೆ ಗುಂಡಿಟ್ಟು ಗೋಡ್ಸೆಗೆ ಸ್ವಂತದ ಸ್ವಾರ್ಥ ಕಿಂಚಿತ್ತೂ ಇರಲಿಲ್ಲ. ನಾವು ಸ್ವಾರ್ಥಕ್ಕೆ ಅಧಿಕಾರಕ್ಕೆ ಮಹಾತ್ಮನನ್ನು ನಿರಂತರ ಕೊಲ್ಲುತ್ತಿದ್ದೇವೆ.

ಮಹಾಲಿಂಗಮಂಗಿಯವರ ವಚನದ ಕೆಲವು ಸಾಲುಗಳು ಬಾಳ ಕೈ ದೀಪಿಕೆಯಂತಿವೆ. ಮಂಗಿಯವರ 'ವಿಶ್ವ ಭಾರತೀಯರು' ಕವನ ಭಾರತೀಯರ ಜೀವನ ದೃಷ್ಟಿ ದರ್ಶನವನ್ನೇ ಮೂಢಿಸುತ್ತದೆ.

ವಿಶ್ವ ಭಾರತೀಯರು ನಾವು । ವಿಶ್ವದ ಮಿತ್ರರು ನಾವು
ಲೋಕ ಸೇವಕರು ನಾವು । ಶಾಂತಿ ಸೈನಿಕರು ನಾವು
ಭಯೋತ್ಪಾದಕರಲ್ಲ ನಾವು । ಪ್ರೀತಿಯ ಹರಿಕಾರರು
ಅಹಿಂಸೆಯ ಭೋದಕರು ನಾವು । ಸತ್ಯದ ಪ್ರತಿಪಾದಕರು.

ಸಹಯೋಗ ಸರ್ವೋದಯ ನಮ್ಮ ನೀತಿ ಸೂತ್ರ
ಬಾಳು ಬಾಳ್ಗೊಡು ಶಾಂತಿ ನಮ್ಮ ಬಾಳ ಮಂತ್ರ

ಹಿಂದೂಗಳು ನಾವು ಪ್ರಕೃತಿಯ ಶಿಶುಗಳು
ಪರಿಸರ ಘೋಷಣೆಗೆ ಮುಡಿಪಾಗಿರುವೆವು.

ನಾವು ಮುಕ್ಕೋಟಿ ದೇವಂಗೆ ಕೈ ಮುಗಿದೆವೆವು
ಹಲವು ನಾಮ ದೇವನೊಬ್ಬನೆಂದೇ ಬಗೆವೆವು
ನಾವು ಕಲ್ಲು ಲೋಹಕೆ ಆಕೃತಿಯಿತ್ತು ಭಜಿಸುವೆವು
ನಿರಾಕಾರ ನಿರ್ಗುಣ ಬ್ರಹ್ಮವನ್ನೇ ಧ್ಯಾನಿಸುವೆವು.

ರಾಮನಂತೆ ರಹಿಮನಿಗೂ ಸಲಾಂ ಹೇಳುವೆವು
ಏಸು ಸ್ವಾಮಿ ಮುಂದೆಯೂ ಮಂಡೆಗಾಲೂರೂವೆವು
ಅವರವರ ಭಾವಕೆ ಅವರವರ ಭಕುತಿಗೆ
ಅವರವರ ತೆರದಲ್ಲಿ ದೇವ ಮೈದೂರಬಲ್ಲ

ನಿರಾಕಾರ ನಿರಾಕರಿಸದೆ ಸಾಕಾರ ಸಾಕ್ಷಾತ್ಕರಿಸಿ
ಎಲ್ಲರೊಂದಿಗೆ ಬೆರೆತು ಹೊರತಾಗಿ ಬಲ್ಲೆವು
(ವಿಶ್ವ ಭಾರತಿಯರು ನಾವು)

ತುಂಬ ಸುದೀರ್ಘವಾದ ಕವನದ ಕೆಲ ಸಾಲುಗಳಿವು. ಭಾರತೀಯ ಸಂಸ್ಕೃತಿ ದರ್ಶನವೇ ಇಲ್ಲಿವೆ.

ಮುಸ್ಲಿಂರೆಲ್ಲ ಭಯೋತ್ಪಾದಕರಲ್ಲ, ಆದರೆ
ಭಯೋತ್ಪಾದಕರೆಲ್ಲ ಮುಸ್ಲಿಂರೆ..............
(ಧರ್ಮದ ಮರ್ಮ)

ತಪ್ಪು ಮಾಡಿದವರೆಲ್ಲ ಜೈಲಿನಲ್ಲಿದ್ದಾರೆ
ತಪ್ಪು ಮಾಡಿದವರೆಲ್ಲ ಹೊರಗಡೆಯಿದ್ದಾರೆ
ಹಾಗಂತ ಲೆಕ್ಕ ಹಾಕೋದು ದೊಡ್ಡ ತಪ್ಪಾದೀತು.
(ಕಾರಾಗೃಹದಲ್ಲಿ ಕವಿಗೋಷ್ಠಿ)

ಬದುಕೆಂದರೆ :

ದುಡ್ಡಿನ ಗುಡ್ಡೆಯಲ್ಲ । ಅಧಿಕಾರ ಅಂತಸ್ತಲ್ಲ
ಸನ್ಮಾನ ಪ್ರಶಸ್ತಿಗಳಲ್ಲ । ಬರೀ ಜವಾಬ್ದಾರಿ ಸೇವೆಗಳು ಅಲ್ಲ

ಇದ್ದರೂ ಇರಲಿ – ಇದ್ದಿಲ್ಲದಂತೆ
ಅಷ್ಟಿಷ್ಟು ನೋವು ನಲಿವು ಒಂದಿಷ್ಟು ಕಷ್ಟ ಚಿಂತೆ
ಆಗೀಗ ಕಂಬನಿ ಅನುಗಾಲ ಕಿರುನಗೆ.

ಮಾನವೀಯ ಕಾವ್ಯಕ್ಕೆ ಮಾನವೀಯ ಮೌಲ್ಯಗಳಿಗೆ ಪ್ರತೀಕವೆಂಬಂತೆ ಇಲ್ಲಿ ಸಾಲುಗಳು ಸಂತನ ಸಮ್ಯೈಕ್ಯದೃಷ್ಟಿ ಶರಣ ಮನೋಧರ್ಮ ಪ್ರತಿಪದಗಳಲ್ಲೂ ಪ್ರತಿಬಿಂಬಿತವಾಗಿವೆ.

೪.೨ ಸಮಾರೋಪ :

ಪ್ರಗತಿಶೀಲ ಸಾಹಿತ್ಯದ ಆಶಯ, ದಲಿತ ಬಂಡಿಯ ಚಳುವಳಿಗಳ ಪ್ರಮುಖ ಧೋರಣೆಗಳು ಇವರಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ಅಕ್ಷರ ಮತ್ತು ಕ್ರಿಯೆ ಎರಡರ ಸಮ್ಮೀಳನವನ್ನು ಈ ಕಾವ್ಯದಲ್ಲಿ ಗುರುತಿಸಬಹುದು. ದುಡಿಯುವ ಜನಾಂಗದ ಆಶೋತ್ತರಗಳು, ಕೂಲಿ–ಕಾರ್ಮಿಕರ ನೋವು ನಲಿವು ಮಂಗಿಯವರ ಕಾವ್ಯದಲ್ಲಿ ಮೈದುಳಿವೆ. ವ್ಯಕ್ತಿಗತವಾಗಿ ನಿಲ್ಲದೆ, ಸಮಷ್ಟಿಗತವಾಗಿ, ಸಮುದಾಯದ ಚಿಂತನೆಯಿರುವುದು ಮಂಗಿಯವರ ಕಾವ್ಯದ ಹೆಚ್ಚುಗಾರಿಕೆಯಾಗಿದೆ.

* * *

: ಅಡಿಟಿಪ್ಪಣಿಗಳು :

೧) ಹಕ್ಕಿಗಳೇಕೆ ಸಾಯುತ್ತಿವೆ? : ಲೇಖಕರ ಅರಿಕೆಯಿಂದ
೨) ಎಮ್. ಆರ್. ದೊರೆಸ್ವಾಮಿ : ಕರ್ಮವೀರರ ಹಾಡು ಬೆನ್ನುಡಿಯಿಂದ
೩) ದಿಲ್ಲಿ ದೂರವಿಲ್ಲ ಕವನ ಸಂಕಲನ ಹಾಗೂ ಲೇಖಕರ ಮುನ್ನುಡಿ, ಹಿನ್ನುಡಿಯಿಂದ

ಅಧ್ಯಾಯ - ೫

ಮಹಾಲಿಂಗ ಮಂಗಿಯವರ ಕಾವ್ಯದ ವೈಶಿಷ್ಟ್ಯ

ಅಧ್ಯಾಯ – ೫

ಮಹಾಲಿಂಗ ಮಂಗಿಯವರ ಕಾವ್ಯದ ವೈಶಿಷ್ಟ್ಯ

ಪ್ರವೇಶ :

ಕಾರ್ಮಿಕರ ಪರವಾಗಿ, ಶೋಷಿತರ ಪರವಾಗಿ, ಮೇಲ್ವರ್ಗದ ಬಂಡವಾಳಶಾಹಿ, ಜಮಿನ್ದಾರಿ, ಅಧಿಕಾರ ಆಡಳಿತಶಾಹಿ, ಪುರೋಹಿತಶಾಹಿ ಪ್ರತಿನಿಧಿಗಳು ಉಳ್ಳವರು ಬಿಳಿಕಾಲರಿನ ವಿದ್ಯಾಲಯಗಳ ಅಧ್ಯಾಪಕರುಗಳು ಕ್ಲಾಸರೂಮನ ತಣ್ಣೇಳಲ್ಲಿ ಕೂತು, ಹೋರಾಟ ಬಂಡಾಯದ ಬಗ್ಗೆ ಬರೆಯುವುದಕ್ಕೂ, ಶೋಷಕ ಪಟಭದ್ರ ದುಷ್ಟಹಿತಾಶಕ್ತಿಗಳ ಎದುರು ಹೋರಾಟ ಕಣದಲ್ಲಿ ನಿಂತು ಕೆಂಬಾವುಟ ಹಿಡಿದು ದುಡಿದ ವರ್ಗದ ಪ್ರತಿನಿಧಿಯಾಗಿ, ಮುಂದಾಳುವಾಗಿ ನಿಂತು ನಿರಂತರವಾಗಿ ದೌರ್ಜನ್ಯ ದಬ್ಬಾಳಿಕೆ ಅನ್ಯಾಯಗಳಿಗೆ ಒಪ್ಪಿಕೊಂಡು ತನ್ನ ಬದುಕಿನ ಪಾಡನ್ನೇ ಹಾಡಾಗಿಸಿ ಕ್ರಾಂತಿ ಗೀತೆ ಹಾಡುವುದಕ್ಕೂ ವ್ಯತ್ಯಾಸವಿದೆ. ಅದೇ ಮಹಾಲಿಂಗ ಮಂಗಿಯವರ ಕಾವ್ಯದ ವೈಶಿಷ್ಟ್ಯ.

'ಕವಿ ಹೇಳಿಕೊಳ್ಳುವಂತೆ ತನ್ನ ಕವಿತೆಗಳು ಕಲಾತ್ಮಕ ಸೃಷ್ಟಿಗಳಲ್ಲ. ಬೆಂಕಿಯಲ್ಲಿ ಅರಳಿದ ಕೆಂಡದಾವರೆಗಳು'. ದಿನದಲಿತರ ಬಗ್ಗೆ ರೈತ ಕಾರ್ಮಿಕರ ಕುರಿತು ತುಳಿತಕ್ಕೊಳಗಾದ ಶೋಷಿತರ ಬಗ್ಗೆ ಯಾರೆಲ್ಲ ಬರೆಯಬಹುದು. ಅವರ ಹಸಿವು ಬಡತನ ದುಃಖ ದಾರಿದ್ರ್ಯ ಬಗ್ಗೆ ವರ್ಣಿಸಬಹುದು. ಮೇಲ್ಜಾತಿ ಸುಖ ಸಂತೃಪ್ತರು ಕಲ್ಪಿಸಿ ಕೌಶಲ್ಯತೆಯಿಂದ ಕಾವ್ಯ ರಚಿಸುವುದಕ್ಕೂ, ಶ್ರಮಿಕರು, ಶೋಷಿತರು, ಅಸ್ಪ್ರಶ್ಯರು, ಅನ್ಯಾಯ, ನೋವು, ಅವಮಾನ, ಅಸಹಾಯಕತೆ, ಆತಂಕ ಅನುಭವಿಸಿ ಕಳವಳದಳಲನ್ನು ನಿವೇದಿಸಿಕೊಳ್ಳುವಕ್ಕೂ ತಮ್ಮ ಒಡಲ ಕೋಪ ಸಂತಾಪ, ರೋಷ ಆಕ್ರೋಶ, ಪ್ರಕಟಿಸುವುದಕ್ಕೂ ಮಹದಂತರವಿದೆ. ಅಂತಹ ಹಿಂದುಳಿದ ಬಡ, ಶೋಷಿತ ತುಳಿತಕ್ಕೊಳಗಾದ ಕಾರ್ಮಿಕರ ಸಮುದಾಯದಿಂದ ಮೂಡಿಬಂದ ಅಪರೂಪದ ಕವಿ ಮಹಾಲಿಂಗ ಮಂಗಿಯವರು. ತಾವು ಪಟ್ಟ ಪಾಡು ಅನುಭವಿಸಿದ ದೈಹಿಕ, ಮಾನಸಿಕ ಹಿಂಸೆ, ನಿರಾಶೆಗೆ ಪ್ರತಿಯಾಗಿ ಏಕಾಂಗಿಯಾಗಿ ನಡೆಸಿದ ದಿಟ್ಟ ಹೋರಾಟ ಮತ್ತು ಆ ಸೋಲು ನೋವುಗಳನ್ನು ಕಾವ್ಯವಾಗಿಸಿದ್ದು ಜೀವಂತ ಜ್ವಲಂತ ನೈಜ ಅನ್ಯರ ಅನುಕಂಪದಿಂದಲ್ಲ.

ಇದು ಪ್ರತಿಭಟನಾ ಕಾವ್ಯ ಪ್ರಗತಿಶೀಲ ಬಂಡಾಯ ಕಾವ್ಯ ಎನ್ನುವದಕ್ಕಿಂತ ಇಡೀಯಾಗಿ ನೋಡಿದಾಗ ಇದೊಂದು ಮಾನವೀಯ ಕಾವ್ಯವೆಂದೇ ಪರಿಗಣಿಸುವುದು ಉಚಿತವೆಂದು ನನ್ನ

ಅಭಿಮತ. 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಸಾಮಾಜಿಕ ಪರಿವರ್ತನೆಯ ಜೊತೆಗೆ ಸಾಂಸ್ಕೃತಿಕ ಕಾಳಜಿ ಆತ್ಮಾವಲೋಕನ ಮಾನವೀಯ ಮೌಲ್ಯಗಳ ಹುಡುಕಾಟ, ಸಂಬಂಧಗಳು, ನಾಡಗೀತೆ, ದೇಶಭಕ್ತಿ, ಪ್ರೀತಿ ಪ್ರಣಯ, ಪ್ರಕೃತಿ, ಪರಿಸರ ಕಾಳಜಿ, ಸಾಕ್ಷರತೆ, ಅನುಭವ ಚಿಂತನೆ ಎಲ್ಲ ಭಾವ ಸಂವೇದನೆಗಳಿಗೂ ಕವಿ ಮುಕ್ತವಾಗಿ ಸ್ಪಂದಿಸುವುದನ್ನು ಕಾಣುತ್ತೇವೆ.

ಸಾಮಾಜಿಕ ನ್ಯಾಯ, ಸಮಾನತೆ, ಶೋಷಣ ವಿಮುಕ್ತ, ಸಾಮಾಜಿಕ ವ್ಯವಸ್ಥೆ ಮಹಾಲಿಂಗರ ಕಾವ್ಯದ ಜೀವಾಳ. ಸ್ಥಾಯಿಭಾವ ಪ್ರಗತಿಶೀಲ ಮನೋಧರ್ಮ ಕಾವ್ಯದ ಜೀವದ್ರವ್ಯ ಎಂಬುದನ್ನು ಅಲ್ಲಗೆಳೆಯಲಾಗದು. ಅಧ್ಯಯನದ ಅನೂಕಲಕ್ಕಾಗಿ ಪ್ರಗತಿಶೀಲ ಮತ್ತು ಪ್ರಗತಿಯೇತರ ಮುಕ್ತ ಕಾವ್ಯವೆಂದು ಪರಿಶೀಲಿಸಿ ನೋಡಬಹುದು.

ನಮ್ಮ ಸಮಾಜದ ಜೀವಂತ ವಾಸ್ತವ ಚಿತ್ರಣ ಮತ್ತು ಜ್ವಲಂತ ಸಮಸ್ಯೆಗಳ ಸಾಪೇಕ್ಷ ಸಾಂದ್ರತೆಯನ್ನು ವಿಕೇಂದ್ರಿಕರಿಸಲು ಯತ್ನಿಸಿದ್ದೇನೆ. 'ಕಮಿಟೆಡ' ಆಗಿ ಪ್ರತ್ಯೇಕಿಸಿಕೊಳ್ಳದೆ ಯಾವ ಸಂಕುಚಿತ ಭಾವಕ್ಕೆ ಅಂಟಿಕೊಳ್ಳದೆ ಮಾನವೀಸಂ' ತಳಹದಿಯ ಮೇಲೆ ನಿಂತು ವಸ್ತು ನಿಷ್ಠವಾಗಿ ನನ್ನ ಒಲವು ನೀವುಗಳ ಮೂಲ ಆಲೋಚನೆಯ ಅಂಗವಾಗಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಅನ್ವಯಿಸುವಂತೆ ಸರಳ ಶಬ್ದಗಳ ಮೂಲಕ ಮಾಡುತ್ತಿದ್ದೇನೆ. ಬುದ್ಧಿ ಜೀವಿ ವಿಮರ್ಶಕನನ್ನೊ ಇನ್ನಾರನ್ನೋ ಗುರಿಯಾಗಿಟ್ಟುಕೊಂಡು ಬರೆಯುತ್ತಿಲ್ಲ. ಶ್ರಮಿಕ ವರ್ಗದ ಪ್ರಾತಿನಿಧಿಕ ವ್ಯಕ್ತಿಯಾಗಿ ಪ್ರಾಮಾಣಿಕವಾಗಿ ಸ್ಪಂದಿಸುತ್ತಾರೆಂದು ಕವಿತೆಗೆ ಮೊದಲೇ ಸ್ಪಷ್ಟಪಡಿಸುತ್ತಾರೆ. ಕವಿಗೆ ತಾನು ಏಕಾಂಗಿ ಯಾರಿಗೋಸ್ಕರ ಬರೆಯುತ್ತಿದ್ದೇನೆ. ಆ ಆದರ್ಶ ಉದ್ದೇಶಗಳ ಅಚಲ ನಿರ್ಧಾರ ಕಾವ್ಯದಲ್ಲಿದೆ.

"ಅವರು ಹುಚ್ಚನೆನ್ನುತ್ತಾರೆ । ನನಗೆ
ನೀವು ಹೇಳಿ ಹುಚ್ಚನೇ । ನಾನು"

ಕವಿ ಕಲಾವಿದರು ಇದ್ದುದ್ದನ್ನು ಇದ್ದ ಹಾಗೆ ಪ್ರಕಟಿಸಿದರೆ ಖಂಡಿತವಾಗಿ ಹೇಳಿದರೆ ಅಂತವರನ್ನು ಹುಚ್ಚರೆಂದು ಕರೆಯುತ್ತ ಜರಿದು ವಿಷ ಕುಡಿಸುತ್ತ, ಶಿಲುಬೆಗೇರಿಸುತ್ತ ಗುಂಡಿಗೆ ಗುರಿ ಮಾಡುತ್ತ ಬಂದ ಸಮಾಜವನ್ನು ಪ್ರಶ್ನಿಸುವಂತೆ? ಯುವ ಕವಿ ಮಹಾಲಿಂಗ ಮಂಗಿಯವರ ಕಾವ್ಯ ಬೆಳೆಯುತ್ತದೆ. ತನಗೆ ಅನಿಸಿದ್ದನ್ನು ಪ್ರಾಮಾಣಿಕವಾಗಿ ಸರಳವಾಗಿ ಹೇಳಿಕೊಳ್ಳಬಲ್ಲ ನೇರಗುಣ ಇಲ್ಲಿ ಕವಿತೆಗಳಲ್ಲಿ ಎದ್ದು ಕಾಣುತ್ತದೆ. ದುಗುಡ ದುಮ್ಮಾನ ಕ್ಲೇಶಾಕ್ರೋಶಗಳು ಇವರ ರಚನೆ ಉದ್ದಕ್ಕೂ ಕಾವ್ಯವಾಗಲೂ ಕುಡಿಯುತ್ತಿರುವದನ್ನು ಗುರುತಿಸಬಹುದು.

"ನನ್ನ ಹಾದಿಯಲ್ಲಿ ಬಿದ್ದ ರಕ್ತವನ್ನು
ನೀವು ತುಳಿದು ಕೊಂಡು ಹೋಗಿ
ಬೇಕಾದರೆ ನಾನು ಮಾತ್ರ ತೊಳೆಯುತ್ತೇನೆ.
ಸಾಧ್ಯವಾಗದಿದ್ದರೆ ಸೋತರೇ । ನನ್ನ ಬಿಸಿ ರಕ್ತವನ್ನು
ಬಿದ್ದ ಹಸಿ ರಕ್ತದೊಡನೆ ಬಸಿದು
ಬೀದಿಯನ್ನು ಇನ್ನಷ್ಟು ರಂಚಿತವಾಗಿ ತೋಯಿಸುತ್ತೇನೆ.

ನಾನು ನೀಡುವ ರಕ್ತಕ್ಕಾಗಿ
ನಿಮ್ಮಿಂದ ಬೆಲೆ ಕೇಳುವುದಿಲ್ಲ
ಯಾಕೆಂದರೆ ನಾವು ಪಾಪದ ದರಿದ್ರರು
ನಮ್ಮ ರಕ್ತಕ್ಕೆ ನ್ಯಾಯವಾದ ಬೆಲೆಯೇ ಇಲ್ಲ.
(ಹುಚ್ಚನ ಹಾಡು)

ಇಷ್ಟೇಲ್ಲಾ ಕವಿಯ ರೋಷಕ್ಕೆ ಉದ್ವೇಗಕ್ಕೆ ಕಾರಣವಾಗಿರುವರು ಸಹಜ ಹಾಗೂ ಅದರ ಕರಾಳ ವ್ಯವಸ್ಥೆ ಸುರಿಯುವ ಬೆವರಿಗೆ ಬಸಿದ ರಕ್ತಕ್ಕೆ ಬೆಲೆ ಬಾರದಿದ್ದಾಗ ಸಿಟ್ಟು ಬೆಂಕಿಯಾಗಿ ಸಿಡಿಯಬಹುದು. ಕ್ರೂರ ಸಮಾಜವೊಂದು ಸತ್ಯವನ್ನು ನ್ಯಾಯವನ್ನು ಮುಚ್ಚಿ ಮರೆಮಾಚಿ ಹುಗಿಯುತ್ತ ಬಂದಿದೆ. ಎನ್ನುವ ಕಲ್ಪನೆಯಿಂದ, ರೊಚ್ಚಿ ಗೆದ್ದ ಮಾತು ಕಾವ್ಯವಾಗಿ ಮಾರ್ಪಾಡುವದುನ್ನು ಗುರ್ತಿಸಬಹುದು.

"ನನ್ನ ಕೈ ಸುಟ್ಟರೂ ಅಡ್ಡಿಯಿಲ್ಲ
ನಾಡಿಗೆ ನಾನು ಬೆಂಕಿ ನೀಡುತ್ತೇನೆ.
ನನ್ನ ಜನಕ್ಕೆ ಬೆಳಕು ಕೊಡುತ್ತೇನೆ".

ಅದು ಆಗಾಗ ಹೂವಿನಂತೆ ಕಾವ್ಯವಾಗಿ ಅರಳುವುದನ್ನು ನೋಡಬಹುದು. ಚಿರತೆ ತಿಂದ ಹಳೆಯ ಶಾಸ್ತ್ರ ಪುರಾಣ ಬದಿಸರಿಸಿ ಹೊಸ ಇತಿಹಾಸ ಬರೆಯುತ್ತೇನೆ". ಅವಕಾಶ ಸಿಕ್ಕರೆ ಭೂ-ಗೋಳಿನ ಗತಿ ಕತೆಯನ್ನೇ ಬದಲಿಸುತ್ತೇನೆ. ಎನ್ನುವ ನಿಲುವು ಅಚಲ! ವೇದಕಾಲದ ಮುದಿಋಷಿಗಳು ಕಟ್ಟಿದ ಜಾತಿ, ವರ್ಣದ ಗೋಡೆಗಳು, ಮೂವತ್ತು ಮೂರು ಕೋಟಿ ದೇವತೆಗಳು, ಗೊಡ್ಡ ಸಂಪ್ರದಾಯ ಮೌಢ್ಯ, ಮೂಢನಂಬಿಕೆ, ಅಸ್ಪ್ರಶ್ಯತೆ, ಅಸಮಾನತೆ, ಮೇಲಿಕೀಳು, ಭೇದ ಈ ಹಳೆಯ ಗೋಡೆ ಕೆಡವಿ ಹೊಸ ಸಮಾಜ ವ್ಯವಸ್ಥೆ ನಿರ್ಮಿಸಿಸುವ ಕನಸು ಕವಿಯದ್ದು.

"ಹೌದು ಸಂಗಾತಿಗಳೇ
ನಮ್ಮ 'ಗತಿ' ಗೆಟ್ಟ ಬದುಕಿಗೆ

ನಾವೆ 'ಗತಿ' ಕೊಡಬೇಕು.

ಇಲ್ಲ ಅದಕ್ಕೊಮ್ಮೆ 'ಗತಿ' ಕಾಣಿಸಬೇಕು.

(ಗತಿ)

"ಬದುಕಬೇಕು ತಲೆ ಎತ್ತಿ ಸ್ವಾಭಿಮಾನದಿಂದ ಸತ್ತಂತೆ ಬದುಕುವದಕ್ಕಿಂತ ಸತ್ತು ಬದುಕಬೇಕು. ಚಿರಂಜೀವಿಯಾಗಿ ಯುವ ಪೀಳಿಗೆಗೆ ಹೊಸ ಚೈತನ್ಯ ನೀಡುವ ಆಹ್ವಾನವನ್ನೊಡ್ಡುವ ಮೂಲಕ ಭವಿಷ್ಯದ ಹೊಸ ಬದುಕಿಗೆ ನಾಂದಿ ಹಾಡುವಲ್ಲಿ ಸಾಫಲ್ಯತೆ ಪಡೆಯುತ್ತದೆ. ಇದರಿಂದಾಗಿ ನಮ್ಮ ಗತಿಗೆಟ್ಟ ಬದುಕಿಗೆ ನಾವೆ 'ಗರ' ಕೋಡಬೇಕು. ಎತ್ತುವವರಿಲ್ಲದ ನಮ್ಮ ಹೆಣಕ್ಕೆ ನಾವೆ ಹೆಗಲು ಕೊಡಬೇಕಾಗಿದೆ ಎಂಬ ಕರೆ ಸತ್ವಯುತವಾಗಿ ತೀಕ್ಷ್ಣವಾಗಿ ಮೂಡಿಬಂದಿದೆ[೨]".

ನನ್ನ ನೆಲದ ಭ್ರೂಣಗಳು ಕವಿತೆಯಲ್ಲಿ ಶತಶತಮಾನಗಳಿಂದ ಬಡವರು, ದರಿದ್ರರು, ನಿಗರ್ತಿಕ ಅನಾಥರು, ನೆಲೆಯಿಲ್ಲದವರು, ಈ ಭೂಮಿಯನ್ನು ತಾಯಿ ನೆಲವೆಂದು ಗೌರವಿಸುತ್ತ ಬಂದಿದ್ದರು. ಅಂಥವರಿಗೆ ನೆಲವೇ ಮುನಿದೆದ್ದು ಅವರೆಲ್ಲ ನೆಲೆಯಿಲ್ಲದಾಗಿರುವದನ್ನೂ ಶ್ರದ್ಧೆ ಶ್ರಮಗಳನ್ನು ಹೊಸೆದು ಕಾಡು ಕಡಿದು ಮಾಡಿದ ಕೃಷಿ, ಹಸಿ ಬೆವರು, ಬಿಸಿ ರಕ್ತ ಬೆರಸಿ ಬೀಜ ಬಿತ್ತಿದರು. ಸಸಿಯಾಗದಿರುವದನ್ನು ಗಮನಿಸಿದ ಕವಿ ಹೃದಯದಲ್ಲಿ ಸಮಾಜದ ಬಾಯಿ ಕಟ್ಟಿಸುವ ತಣ್ಣಗಿನ ಜ್ವಾಲೆಯುರಿಯುತ್ತಿರುವದನ್ನು ಗುರುತಿಸಬಹುದು. ನೆಲೆಯಲ್ಲಿದವರಿಗೆ ತಾಯ್ನೆಲವೇ ಮುನಿದೆದ್ದಿರುವದರಿಂದ ಸಮಾಜ ತೀವ್ರ ಬದಲಾಗುದಿರುವದಿಂದ ನನ್ನ ನೆಲದ ಭ್ರೂಣಗಳು ಬರೆದ ಕವಿ ಹೇಳುವ ಮಾತು 'ದೀನ ಬದುಕು' ಪದ್ಯದಲ್ಲಿ ಸಂಕಲಿತವಾಗಿರುವ ಈ ಕವಿಯು ಸಾಮಾಜಿಕ ಕಳವಳವನ್ನು ತಿಳಿದುಕೊಳ್ಳಲು ಸಹಾಯಕವಾಗುವುದು. ಯುವ ಕವಿ ಕಟುವಾಗಿಯೇ ಸಮಾಜದ ವ್ಯವಸ್ಥೆಯನ್ನು ಟೀಕಿಸಿದ್ದುಂಟು. ಮಹಾಲಿಂಗ ಮಂಗಿಯವರ ಅತ್ಯಂತ ಭರವಸೆ ಮೂಡಿಸುವ ಕವಿಯಾಗಿದ್ದು, ಇವರು ಒಳ್ಳೆಯ ಪದ್ಯಗಳನ್ನು ಬರೆಯಬಲ್ಲರೆಂಬುದಕ್ಕೆ ಹಕ್ಕಿಗಳೇಕೆ ಸಾಯುತ್ತಿವೆ? ನನ್ನ ನೆಲದ ಭ್ರೂಣಗಳೇ ಸಾಕ್ಷಿ!"[೩].

ನನ್ನ ನೆಲದ ಭ್ರೂಣಗಳು ಸಂಕಲನ ಕೇವಲ ಸಾಮಾಜಿಕ ಅವ್ಯವಸ್ಥೆಯನ್ನು ಮಾತ್ರ ದೂರುವಲ್ಲಿ ಲೀನವಾಗದೆ, ಬಡವರು, ದಲಿತರ ಗತಿಗೆಟ್ಟ ಬದುಕನ್ನು ಮಾತ್ರ ಚಿತ್ರಿಸುವಲ್ಲಿಯೂ ಲೀನವಾಗದೆ ಇವೆಲ್ಲವನ್ನು ಮೆಟ್ಟಿ ನಿಂತು ಹೊಸ ಬದುಕಿಗೆ ಹೊಸ ವ್ಯವಸ್ಥೆಗೆ ನಾಂದಿ ಹಾಡೇ ಹಾಡುತ್ತೇವೆಂಬ ಆಶಾದೀವಿಗೆ ತೋರುವ ಮೂಲಕ ಗಟ್ಟಿ ಕಾಳಿನ ಕಾವ್ಯವಾಗಿ ನಿಲ್ಲುತ್ತದೆ[೪].

ಇಲ್ಲಿಯ ಕವಿತೆಗಳು ಅಂದಕ್ಕಾಗಿ ಅಲಂಕಾರ ಆನಂದಕ್ಕಾಗಿ ಬರೆದವುಗಳಲ್ಲ. ಸ್ವಂತದ ಜೀವನಾನುಭವ ಧಾರುಣ ದರ್ಶನ ಚಳುವಳಿ ಹೋರಾಟದ ಕಾವು ಕೆಚ್ಚಿದೆ ಸವಾಲುಗಳಿವೆ.

[illegible]

[illegible]

[illegible]

[illegible]

[illegible]

"ಮೊನ್ನೆಯೊಂದು ಹಾರಸುದ್ದಿ ಕಿವಿ ಮ್ಯಾಲ ಬಿತ್ತು
ನಾ ಆಗದವರು ನನ್ನ
ಮುಗಿಸಬೇಕಂತ ಮುಸಲತ್ತ ಮಾಡ್ಯಾರಂತ
ಕೇಳಿ ನನಗೆ ಬಾಳ ಅಂಜಿಕೆ, ಅಲ್ಲಿ ನಗಿ ಬಂತು
ಯಾಕೆಂದರೆ ನನ್ನ ಹ್ಯಾಗದನಂತ ಕೊಲ್ಲಕಾರಂತ
ಬಾಳ ದಿವಸದ ಹಿಂದ 'ನಾ ಸತ್ತೇನಿ'
ಪಾಪ ಇನ್ನ ಅವರಿಗೆ ತಿಳಿದಂಗಿಲ್ಲ".

ಇಲ್ಲಿ ಕೆಂಪು ಕ್ರಾಂತಿ ಕಾವ್ಯ ವಿಭಿನ್ನ ವೈಶಿಷ್ಟವೆನ್ನಲು ಕಾರಣ – ಜೀವ ಸಾವುಗಳ ನಡುವಿನ ಜೀವಂತ ಹೋರಾಟ ವಾಸ್ತವತೆ, ನೈಜತೆ, ಹೋರಾಟ ಪಥದಲ್ಲಿ ಹೆದರಿದರೆ ಆಗುವುದಿಲ್ಲ. ಸಾಯಲೂ ಸಿದ್ಧ. ಜೀವ ಭಯ ತೋರೆದು ಸ್ವಾರ್ಥ ತ್ಯಾಗ ಮಾಡಿ ತಲಿತೆಗೆದು ಧುಮಕಬೇಕು. ಬರ್ರೀ ಒಂದು ಕೈ ನೋಡೇ ಬಿಡೋಣ. ಎನ್ನುವ ಹುಚ್ಚು ಧೈರ್ಯ ಭಂಡ ಛಲ, ಯಾವ ತ್ಯಾಗಕ್ಕೂ ಸಿದ್ಧರಾಗಬೇಕೆಂದು ಕವಿ ಕರೆ ಕೊಡುತ್ತಾನೆ.

ಸ್ವಂತದ ಬಲಿದಾನ ನಮ್ಮದು ಆತ್ಮಹತ್ಯೆ ಅಲ್ಲ
ಅಂತಹ ಹೇಡಿಗಳು ನಾವಲ್ಲ, ನಮ್ಮಗ ಆತ್ಮ ಬಾಳ ಮುಖ್ಯ
ಆ ಆತ್ಮದ ಬಲದ ಮ್ಯಾಲೆ 'ನಾ ಅಮರ ನಿರಂಜನ' ।

ವೀರ ಸಂಕಲ್ಪ! ಹೋರಾಟಗಾರರ ಆತ್ಮಶಕ್ತಿ ಆತನ ಆದರ್ಶ ಸಂಘರ್ಷ. ಇಲ್ಲಿ ಕವಿ ಕಾವ್ಯವನ್ನು ಬೇರಿಟ್ಟು ನೋಡಲಾಗದು. ಕವಿಯ ಜೀವಂತ ಹೋರಾಟ ಆತಂಕ, ದಿಗಿಲು, ತಳಮಳ ಕಾವ್ಯವಾಗಿ ಅಕ್ಷರ ರೂಪದಲ್ಲಿ ಆಕಾರ ಪಡೆದಿವೆ. ಪದಪದದಲ್ಲೂ ಆ ರೊಚ್ಚು ನಿಟ್ಟಿಸಿರು ರೋಷ ರಾಚುತ್ತದೆ. ಪಟ್ಟ ಭದ್ರ ಶೋಷಕ ಶಕ್ತಿಗಳಿಗೆ ಎಚ್ಚರಿಕೆ ನೀಡುತ್ತಾರೆ.

ಸತ್ಯದ ಕಡುಸುಡುವ ಕೆಂಡದ ಕಿಡಿಗಳು ನಾವು
ನೆಲ ಮುಗಿಲಕ್ಕೂ ನೆಟ್ಟ ಬಿಲ್ಲಾಗಿ ನಿಂತಾಗ
ಮುಕ್ಕಣ್ಣನಿಗೂ ತಡೆಯೋಕಾಗಾಕಿಲ್ಲ
ತಡುವ ಬ್ಯಾಡಾ, ಎಚ್ಚರ ಅಂತ್ಹೇಳಿ.
(ನಾ ಅಮರ ನಿರಂಜನ)

ಮೊದಲಃ ತಲಿಕೆಟ್ಟ ಮನುಷ್ಯಾ. ಉಟ್ಟಿದ್ದ ತಲಗಿ ಸುತ್ತಿ, ತಲೆ ತೆಗೆದಃ ನಿಂತೇವಿ ತಲೆ ತೆಗೆಯೊದಕ್ಕೂ ತಯಾರಿದ್ದೇವೆ. ಸೋಲುಗಳಿನ್ನು ನಮಗಿಲ್ಲ. ಸಾವಿನಂಜಿಕೆ ನಮಗಿಲ್ಲ ಎಂದು ಎಲ್ಲದಕ್ಕೂ

ಸಿದ್ದರಾಗೇ ನಿಂತಿದ್ದೇವೆ. ಎನ್ನುವ ಮುನ್ನೆಚ್ಚರಿಕೆ ರವಾನಿಸುತ್ತಾರೆ[೫].

'ಕೆಂಪು ಕಾವ್ಯ' ಕವಿಯ ಕಾವ್ಯ ಧೋರಣೆ ಸೂಚಿಸುತ್ತದೆ. ಕೆಂಪು ಕಾವ್ಯ ಬರೆಯಬೇಕೆನ್ನುವ ಕವಿ ಮನಸ್ಸಿನ ತುಡಿತ ಈ ಕವಿತೆಯಲ್ಲಿ ಗೊನ್ನೆ ಗೊನ್ನೆ ರಕ್ತದಂತೆ ಹರಡಿಕೊಂಡಿರುವುದನ್ನು ಕಾಣಬಹುದು.

ಕತ್ತಲೆ, ಕರಿಮಸಿ, ಮತ್ತು ಕಪ್ಪು ಕಾಗದ
ಮೇಲೆ ನಾನು ಕೆಂಪು ಕಾವ್ಯ ಬರೆಯಬೇಕು[೬].

ಅಸಹಾಯಕತೆ, ಅನಿವಾರ್ಯತೆ, ಪ್ರತಿಕೂಲ, ಪ್ರತಿರೋಧಗಳ ನಡುವೆ, ಅನ್ಯಾಯದ ವಿರುದ್ಧ ಪ್ರತಿಕ್ರಿಯಿಸಬೇಕು. ಪ್ರಬಲ ದುಷ್ಟ ಶಕ್ತಿಗಳನ್ನು ಪ್ರತಿಭಟಿಸಬೇಕು. ಬೆನ್ನೆಲುಬಿಲ್ಲದ ಜನರನ್ನು ಒಟ್ಟುಗೂಡಿಸಿ ಜಾಗೃತಿ ಸಂಘಟನೆ ಮಾಡಬೇಕು.

"ಮೆದುಳಿಲ್ಲದ ಮಾಂಸದ ಮುದ್ದೆಗಳು
ಮುನ್ನ ಅರಿಯರು ಅರಿತರೂ ಕರಗದ ಜಡಭರತರು
ಹೃದಯಾಂತರಾಳದಲಿ ಗೂಡು ಗಟ್ಟಿದ ಕನಸಾದರ್ಶಗಳು
ಎನ್ನೊಡಲ ಕಿಚ್ಚಿಗೆ ಸಾಯುತ್ತಿವೆ".

ಮಂಗಿಯವರೇ ಹೇಳಿಕೊಂಡಂತೆ ಸಂಗಾತಿ ಸ್ನೇಹಿತರೂ ಸಾರ್ವಜನಿಕವಾಗಿ ಆತ್ಮೀಯರಾಗಿ ತೋರಿಸಿಕೊಳ್ಳಲು ಮಾತನಾಡಲು ಹೆದರುವದಿತ್ತು. ಆದರೂ ತಮ್ಮ ಶಕ್ತಿ – ಯುಕ್ತಿ ಬಳಸಿ ಸಂಘಟನೆ ಮಾಡಿ ಪ್ರಬಲ ಹೋರಾಟ ಪೈಪೋಟಿ ನೀಡಿ ಕ್ರಾಂತಿ ಬದವಲಾವಣೆ ತಂದರು. ಸ್ವಾರ್ಥಿ ಹಿತ ಶತ್ರು ವೀರ ಸಾಧಕರಿಂದ ಬಂಡಾಯ ವೈಫಲ್ಯ ಹೊಂದುತ್ತದೆ.

ಅಧಿಕಾರಿ, ಧರ್ಮಾಧಿಕಾರಿ
ಮತ್ತೆಲ್ಲ ಮಿರಿ ಸಾವುಕಾರಿ ಅಸುರಿ
ಶಕ್ತಿಗಳಡಿಯಲ್ಲಿ ಸಿಲುಕಿ ಶೋಷಣೆಗೊಳಗಾಗಿ
ಸೋತು –
ಸೋರಿದೆ.
ನಮ್ಮ ಶೂನ್ಯ ಬದುಕು.
(ದೀನ ಬದುಕು)

ಒಡವಾಗ್ನಿಯ ದಳ್ಳೂರಿಯಲ್ಲಿ ಸಂತಾಪ ರೋಷವಾಗಿ ಕವಿ ತನ್ನನ್ನೇ ಹಳಿದುಕೊಳ್ಳುವ ಅಸಹಾಯಕತೆ ಪ್ರಗತಿ ಪಥದಲ್ಲಿ ಸಾಗುವಾಗ ಸೋಲು ನಿರಾಶೆಗಳೇ ಅಧಿಕಾರ ಆತ್ಮ ವಿಶ್ವಾಸಗಳ ಅಧಿಕ ಆತ್ಮವಿಶ್ವಾಸಗಳನ್ನು ಅಲುಗಾಡಿಸುವ ಪ್ರಸಂಗಗಳು ಸಾಮಾನ್ಯ ಕನಸು ಎಷ್ಟೇ ಅಸಂಭಾವ್ಯವಾಗಿರಬಹುದಾದರೂ ಮಾನವನ ಬದುಕು ಕನಸ್ಸನ್ನು ನಂಬಿಯೇ ಅಂತಹ ಕನಸಿನ ಬದುಕು ಇಲ್ಲಿ ಕಾವ್ಯ ರೂಪ ತಾಳುತ್ತದೆ.

"ಮೂಡಣ ಬಾಗಿಲು ತೆರೆಯುತ್ತಿಲ್ಲ
ಇರುಳು ಕಳೆದು ಬೆಳಕು ಹನಿಯುತ್ತಿಲ್ಲ".

ಮೂಡಣ ಬಾಗಿಲು ತೆರೆಯದಿದ್ದರೂ ರೈತನ ಕನಸು ಕಟ್ಟುವಿಕೆ ನಿಲ್ಲದು. ಆತನ ದೀನ ಬದುಕು ಜೀತದಲ್ಲಿ ಸಾಲ ಮುಕ್ತಿಗಾಗಿ ತೇಯುತ್ತ ಬಾಡಿಗೆಯ ಬದುಕಾಗಿ ಕೊಳೆಯುತ್ತಿದೆ. ಇಂದು ಬಂಡವಾಳಶಾಹಿಗಳು ಸಾಮಾನ್ಯರನ್ನು ಬಡವರನ್ನು ಸುಲಿಯುತ್ತಿರುವ ಚಿತ್ರ ಎಂದಾದರೂ ಒಂದು ದಿನ ಶೋಷಣೆ ಬದುಕಿನಿಂದ ಬಿಡುಗಡೆ ಸಿಕ್ಕು 'ಭರವಸೆಯ ಬಸಿರೊಡೆದು ಬರುವ ಈ ನೆಲದ ಭ್ರೂಣಗಳು ಮತ್ತೆ ಶ್ರಾವಣ' ಕಂಡೆ ಕಂಡೆವೆಂಬ ಆಶಾ ಭಾವನೆ ಉಂಟು.

'ಸಾಯುತ್ತಿರುವ ನಮ್ಮ ಅನಾಥ ಪ್ರಜ್ಞೆ'ಯಲ್ಲಿ ನಮ್ಮವರಿಂದಲೇ ನಾವು ತುಳಿಯಲ್ಪಟ್ಟರೆ, 'ಕೊನೆ ಎಚ್ಚರಿಕೆ', 'ತುಳಿತಕ್ಕೊಳಗಾದವರು' ಎಚ್ಚೆತ್ತುಕೊಂಡು ಕ್ರಾಂತಿಗೆ ನಾಂದಿ ಹಾಡುವ ದಿನ ಸಮೀಪಿಸಿದೆ ಎಂದು ಭೋಗದಲ್ಲಿ ಮೈಮರೆತವರಿಗೆ ಎಚ್ಚರಿಕೆ ನೀಡುತ್ತದೆ. 'ಕನಸು ಆಸೆಗಳು' ಕವನದಲ್ಲಿ ಕವಿ ಆದರ್ಶವನ್ನು ಮಿರಿದ ಬದುಕಿನ ವಾಸ್ತವತೆಯತ್ತ ಲಕ್ಷಹರಿಸುವುದು ಗಮನಾರ್ಹ ಅಂಶವಾಗಿದೆ.

ನನ್ನ
ನೀನು ಕತ್ತಹಿಸುಕಿ ಕೊಂದ್ಹಾಕಿ
ಸುಡಗಿಡ ಗಟ್ಟಿ ಸುಟ್ಟರೂ ಸಾಯಲಾರೆ
ರುದ್ರಭೂಮಿಯ ಸುಟ್ಟ ಬೂದಿಯಿಂದ
ಕೊಡವಿಕೊಂಡು ರೆಕ್ಕೆ ಬಡಿದು
ಪಟ ಪಟ ಹಾರಿ ಬರುವ 'ಫಿನಿಕ್ಸ್' ಪಕ್ಷಿ ನಾನು.
(ಕ್ರಾಂತಿ)

ಜಿಡ್ಡುಗಟ್ಟಿದ ವ್ಯವಸ್ಥೆಯನ್ನು ಮುರಿದು ಹಾಕಿ, ಒಂದಲ್ಲ ಒಂದು ದಿನ ನಮ್ಮನ್ನು ಶೋಷಿಸುವವರನ್ನು ಮೆಟ್ಟಿ ನಿಂತು, ನಮ್ಮ ನೆಲದಲ್ಲಿ ನಮಗೆ ಸಿಗಬೇಕಾದವುಗಳನ್ನು ಪಡೆದೆ ಪಡೆಯುವೆಂಬ

ಆತ್ಮವಿಶ್ವಾಸ, ಕೆಚ್ಚದೆಯ ದಿಟ್ಟತನ ತೋರುವಲ್ಲಿ 'ಕ್ರಾಂತಿ' ಕವನ ನಿಜವಾಗಿಯೂ ಕ್ರಾಂತಿ ಕಹಳೆಯನ್ನೇ ಊದಿದೆ.

ಶೋಷಣೆಗೆ ನಾನಾ ಚಹರೆಗಳಿರುವಂತೆ ನಮ್ಮ ಸೋಲಿಗೂ ನಾನಾ ಕಾರಣಗಳು ಇವೆ. ಕೆಲವೊಮ್ಮೆ ಪರಿಸ್ಥಿತಿಯೂ ಕೈ ಕೊಡುತ್ತದೆ. ದುರ್ದೈವ ದುರಾದೃಷ್ಟ ನಿರಾಶೆ ಹತಾಶೆ ಆಳವಾಗಿ ಹೊಮ್ಮುವುದು ಇದೆ.

'.................. ಗಂಟಲಲ್ಲಿ ತೊಡರಿಕೊಂಡ ಬಿಕ್ಕಳಿಕೆ'
ಎದೆ ಸೀಳಿಕೊಂಡು ಉಮ್ಮಳಿಸುವಾಗ
ಬೆಳಗಾಗಿದೆ
ಗೆಳಯೆ
ಬೆಳಕಾಗಲಿಲ್ಲ.
(ನಾಳೆಗಳನ್ನು ಮಾಡುವವರು)

ರಮಜಾನ ದರ್ಗಾ ತಮ್ಮ 'ಕಾವ್ಯ ಬಂತು ಬೀದಿಗೆ'ಯಲ್ಲಿ ಹೇಳುತ್ತಾರೆ. ಕತ್ತಿ ಕೂಡ ತಾಗದ ಈ ಜನಕ್ಕೆ ಕಾವ್ಯತಾಗಿತೆ ಅಂತ. ಇಲ್ಲದಿದ್ದಲ್ಲಿ ಕಾವ್ಯದ ಹೆಣ್ಣಿನ ತೊಡೆಯಲ್ಲಿ ಮುಖವಿಟ್ಟು ಅಳುವ ಪ್ರಸಂಗ ನಮ್ಮಂಥ ಕವಿಗಳಿಗೆ ಬರಬೇಕಿರಲಿಲ್ಲ ಎಂಬ ಮಾತು ಮಹಾಲಿಂಗ ಮಂಗಿಯವರ ಕುರಿತೇ ಹೇಳಿದಂತಿದೆ.

ಆದರೂ ಪ್ರಯತ್ನಕ್ಕೆ ಸಫಲತೆ ಸಿಗದಿದ್ದರೂ ಹೋರಾಟ ಮುಂದುವರೆಸಿಕೊಂಡು ಹೋಗುವುದು. ಸಾಮಾಜಿಕ ಕಳಕಳಿಯ ಚಳುವಳಿಗಾರರಿಗೆ ಅನಿವಾರ್ಯ, ಇಂದಿಲ್ಲ ನಾಳೆ ತಪ್ಪಿ ಕೈಗೆ ಸಿಕ್ಕಿತು. ದಿನದಕ್ಕಿತು ಅಂತ ಆದರೆ ನಾಳೆ ನಾಳೆಗೆ ಮರಿಚಿಕೆಯಾಗುವುದೇ ಅಧಿಕ.

ಪ್ರಗತಿಶೀಲ ಕವಿ ಮಹಾಲಿಂಗ ಮಂಗಿಯವರ ಪ್ರತಿಭಟಣಾ ಕಾವ್ಯ :

ಮಹಾಲಿಂಗರ ಕಾವ್ಯದಲ್ಲಿ ಬಂಡಾಯ ಧ್ವನಿ ರೋಷಾವೇಶ ಜ್ವಾಲಾಮುಖಿಯಾಗಿ ಅಸ್ಫೋಟಿಸುವುದನ್ನು ಕಾಣುತ್ತೇವೆ. ಅನ್ಯಾಯ ಅನೀತಿ ಕಂಡಾಗ ಲೇಖನಿ ಖಡ್ಗವಾಗಿ ಝಳಪಿಸುತ್ತದೆ. ಶಾಂತಿಗಾಗಿ ಸಮಾನತೆಗಾಗಿ ಕ್ರಾಂತಿ ಎನ್ನುವಂತೆ ಬಂಡಾಯದ ಘೋಷಣೆಯೇ ಪ್ರಣಾಳಿಕೆಯೇ ಅದು. "ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿದ ಪ್ರಾಣಮಿತ್ರ". ಸಂತಾಪ ಕೋಪವಾಗಿ ಹೊಟ್ಟೆಯಲ್ಲಿ ಕಿಚ್ಚು ತುಂಬಿಟ್ಟುಕೊಂಡು ಶೋಷಿತರು ದಲಿತರು ಅನಿವಾರ್ಯವಾಗಿ ಕೆಂಡಕಾರುತ್ತಾರೆ.

"ಸಿಂಗಾರಾದ ಕಾಮಣ್ಣರು ನಿಂತು ಹೊಯ್ಕ
ಕೊಂಡರೂ, ಕೇಳದೆ ನಡುಕೂಟದಲಿ
ಮಣ್ಣಿನ ಮಕ್ಕಳು 'ಕಿಚ್ಚಾ' ಕೊಟ್ಟು
'ಹೋಳಿ' ಆಚರಿಸಿ ಕೆಂಪು ರಾಗಿನ
'ಓಕಳಿ' ಆಟ ಆಡಬೇಕಾದೀತು."

ಈ ನೆಲದ ಅಸಲು ಮಕ್ಕಳು ಎಷ್ಟು ಸಾಹಿಸ್ಯಾರು. ಇನ್ನೆಷ್ಟು ದಹಿಸ್ಯಾರು ಉರಿ ನುಂಗಿ ನುಂಗಿ ಹೊಟ್ಯಾಗ ರಗಡ ಕಿಚ್ಚ ತುಂಬೇದ ಕಿಡಿಕಾರೆದಿ ಇನ್ನೇನು ಮಾಡ್ಯಾರು. ತಾಳಿ ತಾಳಿ ಉರಿದುರಿದ ಕಡೀಕ ಅದರಾಗ ಒಂದಿನ ಶೋಷಕರನ್ನೆಲ್ಲ ಕಿಚ್ಚು ಕೊಡತ್ತಾರಷ್ಟೆ.

ಹೃದಯಾಂತರಾಳದಲ್ಲಿ ಗೂಡು ಕಟ್ಟಿದ
ಕನಸಾದರ್ಶಗಳು ಎನ್ನೊಡಲ ರೊಚ್ಚಿಗೆ
ಕಿಚ್ಚಿಗೆ ಸುಡುತ್ತಿವೆ – ಸಾಯುತ್ತಿವೆ.
(ಸತ್ಯ ವಾಸ್ತವ ಸತ್ಯ)

ಸತ್ಯದ ಕಿಡಿ ಒಂದಿನವಾದರೂ
ಖಂಡಿತ ಬೆಳಕು ಕಂಡೀತು.
(ಕೆಂಪು ಕಾವ್ಯ)

ಉಕ್ಕಿನ ಪರದೆ ಹರಿದು
ಕೆಂಡ ಸೂರ್ಯ ನುದಯಿಸಿ
ಬರುವದಿನ ದೂರವಿಲ್ಲ.

'ಆ ಕಾಲಿನ ಚೆಂಡು ಇಂದು । ನಮ್ಮ ಕಾಲಡಿಯೋ ಆಡುತಿದೆ' (ಕೊನೆ ಎಚ್ಚರಿಕೆ)
'ಮೂಢರೇ ಜ್ವಾಲಾಮುಖಿಯ ಬಾಯಲ್ಲಿ ಬಾಳುತ್ತಿರುವಿರಿ ಮರೆಯದಿರಿ' ಜ್ವಾಲಾಮುಖಿ
'ಜಗದ ನೀತಿ ರೀತಿ ಸತ್ಯವಾದಿ ಲೋಕವಿರೋಧಿ' (ಸತ್ಯವಾದಿ)
ದೂರ ಸರಿಯಿರಿ ದಾರಿ ಬಿಡಿರಿ । ತಡುವದಿರಿ ಹಾದಿಗಡ್ಡ ನಿಲ್ಲದಿರಿ. (ಶ್ರಮಿಕರು ಬರುತ್ತಿದ್ದಾರೆ).

ಮಹಾಲಿಂಗರ ಕಾವ್ಯದ ಕೊನೆಯ ಸಾಲುಗಳು. ಅಂತ್ಯವಂತೂ ಭಾಹ್ಯ ಬರೆದಂತೆ ಸೂಚ್ಯವಾಗಿ ಕತ್ತಿಯ ಮೊನೆಯಂತೆ ಮೊನಚಾಗಿರುತ್ತದೆ. ತೀಕ್ಷ್ಣವಾಗಿ ಕಟ್ಟುತ್ತವೆ. ಕಾವ್ಯದ ಸಾರಿ ಸಂದೇಶವೇ ಅದರಲ್ಲಿದೆ.

ನನ್ನೊಳಗಿನ ರೋಷ ಆವೇಶ
ಜ್ವಾಲಾಮುಖಿಯಂತೆ ಆಸ್ಫೋಟಿಸಲು ಹವಣಿಸುತ್ತದೆ ಆಗಾಗ
ಇಡಿಯಾದ ದುಡಿವ ಸಮುದಾಯಕ್ಕೆ। ಹಿಡಿಯಷ್ಟು ಮಂದಿ ಯಾವ ಲೆಕ್ಕ?
ರೋಷ ಉಗಾಳುವ ಕವಿಗೆ, ತನ್ನ ಸಂಗಾತಿಗಳ ಕುರಿತು ಕಳವಳ ಆತಂಕವೂ ಇದೆ.

ತಮ್ಮ ನೆರಳಿಗೂ ಹೆದರಿ
ಹಾರಿ ಹಿಂಜರಿವ ಮಂದಿ
ನನ್ನ ಹಾಡಿಗೆ
ಕಿವಿ ಗೋಡ ಬಲ್ಲರೆ
ಧ್ವನಿ ಗೂಡಿಸ ಬಲ್ಲರೆ
(ಹೆಣಗಳ ನಡುವೆ)

ಹೇ ರಾಮು ! ಮಹಾಭಾರತದ ಆ ರಾಜಕೀಯ
ಹೇ ರಾಮರ ಕರಾಮತಿಗಳಿಗೆ ನೀಡಬೇಕಿಗ
ಖಿ ರಾಮು ! ಆಗಲೇ ಜಗಕ್ಕೆಲ್ಲ ಸಂಪೂರ್ಣ ಆರಾಮು !

ನೀನೂ ಬಾಳು ಅನ್ಯರನ್ನು ಬಾಳ್ಗೊಡು
ನೀನು ಬೆಳಗೂ ಜಗಕೆ ಬೆಳಕು ಕೊಡು
(ಮಾನವ ಮಹಾದೇವನಾಗಬಲ್ಲ)

ಮಹಾಲಿಂಗರ ಕಾವ್ಯದ ವೈಶಿಷ್ಟ್ಯ ಇಡೀ ಕವನದ್ದೇ ಒಂದು ತೂಕವಾದರೆ ಕೊನೆಯ ಪಂಕ್ತಿಗಳದ್ದೇ ಒಂದು ತೂಕ. ಅದು ಅರ್ಥವತ್ತಾಗಿ, ಸಾರವತ್ತಾಗಿ ಮೂಡಿಬರುತ್ತದೆ. ಇಡೀ ಕಾವ್ಯದ ಉದ್ದೇಶವನ್ನು ಸಂದೇಶವಾಗಿ, ಎಚ್ಚರಿಕೆಯಾಗಿ ಬಾಹುಗಳು ಕವಿಯನ್ನು ತಟ್ಟುವ ತನ್ನ ಜನರ ನೋವು ಅಜ್ಞಾನ ಕೀಳರಿಮೆ, ಪ್ರತಿಯಾಗಿ ರೋಷಾವೇಶದಲ್ಲಿ ಎದೆಯುಕ್ಕಿ ಬಂದು ಕಕ್ಕಿದ ಶಬ್ದಗಳಾಗಿ ಕಾಗದದ ಮೇಲೆ ಚೆಲ್ಲುವ ನಾಡಿಗಳಲ್ಲಿ ರೋಷ ಉಕ್ಕಿ ಹರಿಯಲಾರಂಭಿಸುವುದು. ಹುಚ್ಚು ಆವೇಶ ಆವೇಗ ತಾಳ್ಮೆಯ ಕಟ್ಟೆಯೊಡೆದು ಸ್ಫೋಟಗೊಳ್ಳುವುದು ಉಂಟು.

"ಶ್ರಮಿಕರೆಲ್ಲರೂ ಸೇರಿ
ರೊಚ್ಚಿ ನಿಂದೊಮ್ಮೆ ಉಚ್ಚೆ ಹೊಯ್ದರೂ
ನಿಮ್ಮ ಶೋಷಕ ಕುಲ ಸಂಬಂಧಿ ಸಮೇತ
ಕೊಚ್ಚಿ ಹೋದಿರಿ ಎಚ್ಚರ" !?
(ಎಚ್ಚರ)

"ಕಾಲನಿಗೆ ಹೆದರಿ ಹಿಮ್ಮೆಟ್ಟಿ
ಕಾಲಿಗೆ ಬುದ್ಧಿ ಹೇಳಿದರೆ ನಮ್ಮ ಬಲಿ
ಕಾಲನನು ಕಾಲಡಿ ಮೆಟ್ಟಿ
ಮೆಟ್ಟಿಲಾಗಿಸಿ ಮೇಲರಿದರೆ ನಾವು ಕಲಿ" !

(ಕಾಲ)

ಎಂಥಹ ಸಶಕ್ತ ಪರಿಕಲ್ಪನೆಯ ಕಾವ್ಯಾಭಿವ್ಯಕ್ತಿ ಉಪಮೆ ಎಷ್ಟು ಸಾಂಕೇತೀಕ ಸಶಕ್ತ ! ಅರ್ಥಪೂರ್ಣ ಮಾರ್ಮಿಕ ಸಂದೇಶವಿದು. ಜಗತ್ತೇ ಹಾಗೆ ಸುಂದರಿ ಒತ್ತುತ್ತದೆ. ಒತ್ತಿದರೆ ಸರಿಯುತ್ತದೆ. ಹೌದು ಜಗತ್ತು ಬಗ್ಗುತ್ತದೆ. ಆದರೆ ಬಲವಾಗಿ ಬಗ್ಗಿಸಿ ಸವಾರಿ ಮಾಡುವ ಆತ್ಮಬಲ ಮನೋಛಲಬೇಕು. ಕವಿ ತಮ್ಮ ಪ್ರತಿಭಾ ಶಕ್ತಿ ಜಾನಪದ ಭಾಷಾ ಕೌಶಲ್ಯ ಚೆನ್ನಾಗಿ ದುಡಿಸಿಕೊಂಡಿದ್ದಾರೆ. ನೆಲದ ಆಡು ಭಾಷೆಯ ಮೇಲೆ ಆಗಾಧ ಪ್ರಭುತ್ವ ! ಮತಿಗೆಟ್ಟವರಿಗೂ ಸನ್ಮತಿ ನೀಡುವ, ನರಸತ್ತುವರಲ್ಲೂ ಸಂಚಲನ ನೀಡುವ ಶಕ್ತಿ ಅವರಿಗಿದೆ. ದೀನ ದಲಿತರ, ಶ್ರಮಿಕ ಸಾಮಾನ್ಯರನ್ನೂ ತನ್ನ ಭಾಷಾ ಪ್ರಯೋಗ ಮೂಲಕ ಸಂವಹನ ಸಾಧಿಸಿಕೊಳ್ಳುವ ಪ್ರತಿಭೆ ಅವರದ್ದು.

ಗಾಳಿಗೊಮ್ಮೆ ಉಸಿರು ಬರುತ್ತದೆ
ಮಣ್ಣಿಗೆ ಉದ್ದನೆಯ ಕೆಂಪು ಕೈ ಮೂಡುತ್ತವೆ
ಗಗನ ಮಂಡಲದ ತಾರೆಗಳನ್ನು
ಎಣಿಸೆಣಿಸಿ ಬಡಿದು ನೆಲಕ್ಕೆ ಕೆಡುವಲಾಗುತ್ತದೆ.

(ಕಾಲಗರ್ಭ)

ಅರ್ಥವತ್ತಾದ ಅಭಿವ್ಯಕ್ತಿ ಇತ್ತೀಚಿಗೆ ಹಲವು ದೇಶಗಳಲ್ಲಿ ಅಲ್ಲಿಯ ಸಮಸ್ತ ಪ್ರಜಾ ಸಮುದಾಯವೇ ಬಂಡೆದ್ದು, ದಂತೆಯದ್ದು ಬೀದಿಗಿಳಿದಾಗ, ಸರ್ವಾಧಿಕಾರಿ ದಂಡನಾಯಕರು ಶಸ್ತ್ರ ಚೆಲ್ಲಿ ಪ್ರಾಣ ಭೀತಿಯಿಂದ ಪಲಾಯನ ಮಾಡಿದ್ದು ನಾವು ನೀವೆಲ್ಲ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಇಡಿಯಾದ ಸಮುದಾಯಕ್ಕೆ ಹಿಡಿಯಾದ ಮಂದಿ ಯಾವ ಲೆಕ್ಕ ರಶಿಯಾ, ಫ್ರಾನ್ಸ್, ಚೀನಾ, ಕಮ್ಯುನಿಸ್ಟ ಕ್ರಾಂತಿಗಳು ಸಂಭವಿಸಿದ್ದು, ಹೀಗೆ ಬಡಿಯಾದ ಬಡವರೊಮ್ಮೆ ಎಚ್ಚೆತ್ತೂ ಇಡಿಯಾಗಿ ಸಿಡಿದು ಸೆಟೆದು ನಿಂತಾಗ ತಡೆಯಲಾರ ಮಕ್ಕಣ್ಣ ಸೈತ (ಜ್ವಾಲಾಮುಖಿ).

ಸ್ನೇಹ, ಪ್ರೀತಿ, ಸೌಂದರ್ಯ, ಜಾನಪದ, ನಾಡು–ನುಡಿ, ಚಾರಿತ್ರ್ಯ ಹೀಗೆ ಹಲವು ಸಂಗತಿ ವಿಚಾರಗಳು, ಭಾವ ಸಂವೇದನೆಗಳು, ಅನುಭವಗಳು ಕಾವ್ಯ ವಸ್ತುವಾಗಿದ್ದು, ಮಾನವೀಯ ಮೌಲ್ಯಗಳನ್ನು ವರ್ಗಿಕರಿಸಿ ನೋಡುವುದು ಕಷ್ಟವಾಗಲಾರದು. ಪ್ರಗತಿಶೀಲ ಹೊರತು ಪಡಿಸಿ ಪ್ರೇಮ ಕಾವ್ಯ ಬರೆಯಲಿ, ಅನುಭಾವ ತತ್ವಪದ ರಚದಿಸಲಿ, ಸಾಕ್ಷರತೆ ಬಗೆಗೆ ಬರೆದರೂ ಕೂಡ ಪ್ರಗತಿಶೀಲ ಪ್ರಜ್ಞೆ ಚಿಂತನೆ ಅವರಲ್ಲಿ ಸದಾ ಜಾಗೃತವಾಗಿರುತ್ತದೆ.

ಇಲ್ಲೊಂದು ತತ್ವಪದ – ಆತ್ಮದರುಶನ

ಪುಣ್ಯಕ್ಷೇತ್ರ ನೋಡಲಿಲ್ಲ । ತೀರ್ಥಸ್ನಾನ ಮಾಡಲಿಲ್ಲ
ಮಠ ಮಂದಿರ ಸುತ್ತಲಿಲ್ಲ । ಧೂಪದಿಂದ ಬೆಳಗಲಿಲ್ಲ ॥

ವೇದ ಪುರಾಣ ಓದಲಿಲ್ಲ । ಗುರು ಭೋದ ಕೇಳಲಿಲ್ಲ
ಭಕ್ತಿಯನ್ನು ತಿಳಿಯಲಿಲ್ಲ । ಜ್ಞಾನವೆಂತೋ ಅರಿಯಲಿಲ್ಲ ॥

ನೀತಿ ರಹಿತ ತತ್ವವಿಲ್ಲ । ಶಾಂತಿಗಿಂತ ಮಂತ್ರವಿಲ್ಲ
ಪ್ರೀತಿಗಿಂತ ಭಕ್ತಿಯಿಲ್ಲ । ಸೇವೆಗಿಂತ ಪೂಜೆಯಿಲ್ಲ
ಕಾಯಕ ಕೈ ಬಿಡಲಿಲ್ಲ । ನ್ಯಾಯ ನೀತಿ ತೊರೆಯಲಿಲ್ಲ
ತನ್ನ ಬಿಟ್ಟು ದೇವರಿಲ್ಲ । ಅರವಿಗಿಂತ ಗುರುವಿಲ್ಲ.

ಗಾಂಧೀಜಿಗೆ 'ದೇವರು ಸತ್ಯವೇ?' ಎಂದು ಪ್ರಶ್ನೆ ಮಾಡಿದಾಗ ಅವರು ಉತ್ತರಿಸಿದ್ದು ನಾನು ನಂಬಿದ್ದು, ಸತ್ಯವೇ ದೇವರು ಮೇಲಿನ ಕಾವ್ಯ ಸಂದೇಶವೂ ಅದೇ ಯಥಾರ್ಥ ಜ್ಞಾನ । ದಿಲ್ಲಿಗೆ ಕವಿ ಭೇಟ್ಟಿ ಕೊಟ್ಟಾಗ ತಮ್ಮ ಅನುಭವಗಳನ್ನು ಪಟ್ಟಿ ಮಾಡುತ್ತಾರೆ.

"ದಿಲ್ಲಿಯಲ್ಲೂ ಕೊಳೆಗೆರೆ ಜೋಪಡಪಟ್ಟಿಗಳು
ನಿರ್ಗತಿಕ ನಿರಾಶ್ರಿತ ನಿರ್ವಸತಿಗರು
ಹಸಿವು ಬಡತನ ಅಸಾಹಕತೆ
ದಿಲ್ಲಿ ರಾಜ ಬೀದಿಗಳಲ್ಲಿ ಇಕೆಡೆಗಳಲ್ಲಿ
ದುಃಖ ದ್ರಾರಿದ್ರ್ಯ ರಾರಾಜಿಸುತ್ತದೆ".
(ದಿಲ್ಲಿ ದೂರವಿಲ್ಲ)

"ಉಪ್ಪರಿಗೆಗಳ ಬುಡದಲ್ಲಿ ತಿಪ್ಪೆಗಳೂ ಉಳಿದಿವೆ
ದೀಪದ ಬುಡದಲ್ಲಿ ಕತ್ತಲೆ ಉಳಿದುಕೊಂಡಂತೆ".

ಇಲ್ಲಿ ಕೆಲವು ಸಾಕ್ಷರತೆ ಪದ್ಯ ರಚಿಸಲಾಗಿದೆ. ಅಷ್ಟು ಪ್ರಗತಿಶೀಲ ಮನೋಧರ್ಮದ ಸಾಮಾಜಿಕ ಚಿಂತನೆಯ ಕಾವ್ಯ ಅಕ್ಷರ ಜ್ಞಾನದ ಮಹತಿ ಸಾರುವ ಕಾವ್ಯವಾಗಿಯೂ ಸಫಲ ಕಾವ್ಯ ಮಾರ್ಮಿಕವಾಗಿ ಮೂಡಿ ಬಂದಿವೆ.

ಅಪ್ಪಾ ಮಗು । ನಮ್ಮಪ್ಪ ಚಾಲಿವರ್ತ ಹೇಳ್ತಿದ್ದ
ಓದು ಮಗು ಓದು । ನೋಡು ಓದಲ್ದ ನಮ್ಮ ಪಾಡು
ನಾವು ಹೆಂಡಿರು ಮಕ್ಕಳೆಲ್ಲ । ಕಾಡು ಮೇಡು ಚಳಿ ಮಳೆಯನ್ನದೆ
ಉರಿ ಬಿಸಿಲಲ್ಲಿ ಬೇಯುತ್ತ । ಬೆವರಲ್ಲಿ ತೊಯ್ಯುತ್ತ
ಮಣ್ಣಲ್ಲಿ ಮಣ್ಣಾಗಿ ಕೈ ಮೇ । ಕೆಸರು ಶೆಗಣೆ ಮೆತ್ತಿಕೊಂಡು

ಪಶುಗಳೊಂದಿಗೆ ಪಶುವಾಗಿ । ಹಸಿದು ಹಲ್ಕಿರಿದು
ಸಾಲು ಸಾಲುಗಳೆ ಹೊಡೆದು । ಕಳೆ ತೆಗೆದು ಬೆಳೆ ಬೆಳೆದರೂ
ನಮ್ಮ ಮಕ್ಕಳು ಮರಿಗಳ ಹೊಟ್ಟೆ ನೆತ್ತಿ ತುಂಬುವದಿಲ್ಲ.

ಅದರ ಆದ್ಯ ಬರೀ ಬಲ್ಲವರು ಭಾರಿದಿರಿ ಸುಧರಿಸಿ ಮೈಗಿರಲಿ ಬೂಟುಗಾಲಿಗೂ ಧೂಳು ಕೊಳೆ ತಾಗಿಸಿಕೊಳ್ಳದೆ, ಬಿಳಿ ಹಾಳೆಯ ಮೇಲೆ ನಾಲ್ಕು ಕರಿಗೆರೆ ಗೀಚಿದರೂ ಸಾಕೂ. ಬರೀ ಬಲ್ಲವರಿಗೆ ಬರವಿಲ್ಲ ಅಭಾವ ಆಪತ್ಕಾಲವಿಲ್ಲ. ಸುಖದ ಸುಪ್ಪತ್ತಿಗೆಯಲ್ಲಿ ಸಕಲ ವೈಭೋಗದಲ್ಲಿ ಓಲಾಡುವರು. ಅದಕs ಅಪ್ಪಾ ಮಗಾ, ಅಕ್ಷರ ಕಲ್ತು ಸಾಕ್ಷರನಾಗು, ಶ್ಯಾಣಾ ಆಗು (ಓದು ಮಗು ಓದು) ಅಂತಃಕರಣ ತಾಗುವ ಹಿತವಚನ ಲಾಲಿ ಕೆನೆಗಟ್ಟಿದೆ.

ಸಾಮಾಜಿಕ ವ್ಯವಸ್ಥೆಯ ದೊಡ್ಡ ದುರಂತ ಅಂದರೆ ದಲಿತರಾಗಲು ದಾರಿದ್ರ್ಯರಾಗಲು ಮೂಲಕಾರಣ ಅನಕ್ಷರತೆ. ಅಕ್ಷರಜ್ಞಾನ ವಿದ್ಯಾಭ್ಯಾಸದಿಂದ ವಂಚಿತರಾಗಿದ್ದೇ ದಾಸ್ಯ ದೌರ್ಬಲ್ಯ ದುರ್ಬಲರಾಗಲು ಕಾರಣವಾಯಿತು. ಈ ಸತ್ಯ ಅರಿತು ಸಾಕ್ಷರರಾಗದಿದ್ದೆ ನಮಗೆ ಮುಕ್ತಿಯಿಲ್ಲ ಎಂಬ ಸಂದೇಶ.

ಬರೀ ಬಲ್ಲವರು । ಗೆರೆ ಎಳೆದು ನಮ್ಮನ್ನು
ಪರಭಾರೆ ಮಾಡಿ ಊರ । ಕೇರಿ ಹೊರಗಿಟ್ಟರು

ಅವರು ಶಿಕ್ಷಣ ಕಲ್ತು ಬಲ್ಲವರು ಬಲಾಢ್ಯರು ಅಗ್ರಜರಾದರು
ಅಕ್ಷರ ಕಲೀಲ್ದ ನಾವು ಮೂಢರು ಮೂಳರು ಅಂತ್ಯಜರಾದೆವು

ಇನ್ನಾದರೂ ಸಾಕ್ಷರಾಗೋಣ ಎಂಬ ಹೊಸ ಗಾಳಿ ಬೆಳಕಿಗೆ ಕಣ್ತೆರೆಯೋಣ, ಬೆಳಕಿನ ಕಿಡಿಗಳಾಗೋಣ ಸ್ವಂತ ಕಾಲ ಮೇಲೆ ನಿಂತು ವಿಮುಕ್ತ ಚೇತನಗಳಾಗಿ ನಾಳಿನ ಬಲಿಷ್ಟ ಭಾರತಕ್ಕೆ ಭದ್ರ ಬುನಾದಿ ಹಾಕೋಣ. (ಸಾಕ್ಷರ ಚೇತನಗಳು) ಸಮಸ್ಯೆಗೆ ಪರಿಹಾರ ಹೇಳುವ ನೀತಿ ಸವಾಲುಗಳನ್ನು ಎದುರಿಸಬೇಕೆನ್ನುವ ಛಾತಿ ತುಂಬ ಮಾರ್ಮಿಕವಾಗಿ ವ್ಯಕ್ತವಾಗಿದೆ. ದಲಿತರಂತೆ ಹಳ್ಳಿಗರ ರೈತಾಪಿ ವರ್ಗದ ಪರಿಸ್ಥಿತಿಯೂ ಹೊರತಾಗಿಲ್ಲ.

ಆಫೀಸ ಕಛೇರಿ ಮಂದಿ । ಸಾಹೇಬ ಸುಭೇದಾರರು
ನಾಲ್ಕಕ್ಷರ ಕಲಿತವರು । ಒಂದಿಷ್ಟು ಬಿರಿಯಿಲ್ಲದ
ಬಿಳಿ ಹಾಳಿ ಮ್ಯಾಲ ಕರಿಗೆರೆ ಎಳೆದು । ಸಾವಿರ ಸಾವಿರ ಕಂತೆ ಕಂತೆ
ಗರಿಗರಿ ನೋಟುಗಳನ್ನು । ಅನಾಯಾಸ ಸಂಬಳ ಗಿಂಬಳ
ಮಾಮೂಲಿ ಸಹಿತ ಎಣಿಸಿಕೊಳ್ಳುತ್ತಾರೆ.

ಸಾಮಾಜಿಕ ಅನ್ಯಾಯ ತಾರತಮ್ಯಗಳನ್ನು ಎಷ್ಟೊಂದು ಪರಿಣಾಮಕಾರಿಯಾಗಿ ಕವಿ ತೆರೆದು ತೋರಿಸುತ್ತಾರೆ. ಕಷ್ಟಪಟ್ಟು ದುಡಿಯುವವರಿಗೆ ಈ ನೆಲದಲ್ಲಿ ತಕ್ಕ ಪ್ರತಿಫಲವಿಲ್ಲ. ಸುಮ್ಮನೆ ಕಛೇರಿಗಳಲ್ಲಿ ಕಾಲಹರಣ ಮಾಡುವವರಿಗೆ ತಿಂದು ತೇಗುವಷ್ಟು ಸಂಬಳ ಎಂಥ ವಿಪರ್ಯಾಸ ನಮ್ಮ ಸಮಾಜ ವ್ಯವಸ್ಥೆ ಆರ್ಥಿಕ ನೀತಿಯೇ ಅಮೂಲಾಗ್ರ ಬದಲಾಗಬೇಕೆನ್ನುವುದೇ ಕವಿಯ ಆಶಯ.

ದೊಡ್ಡ ದೇಶದ ದಡ್ಡ ಜನ ಆಗಿ ಉಳೀಲ್ದ ಮಹಾನ್ ಭಾರತದ ಶ್ಯಾಣಾ ಶ್ಯಾಣಾರಾಗೋಣ. ಬರ್‍ರಿ ನಾವೂ ಸಾಕ್ಷರರಾಗೋಣ ಅಕ್ಷರ ಭಾರತ ಕಟ್ಟೋಣ. ಇನ್ನೂ ಏನ ಕಾಲ ಮೀರಿಲ್ಲ. ರಾತ್ರಿ ಸಾಲಿಗ್ಹೋಗೋಣ. ಸಾಕ್ಷರರಾಗೋಣ ಅಕ್ಷರಗಳ ಕೈ ಹಿಡಿದು ಮುನ್ನಡೆಯೋಣ.

ಈ ನಾಡಿನ ಎಲ್ಲ ಧ್ಯೇಯವಾದಿ ಕವಿಗಳು ಕಂಡ ಕನಸುಗಳು ಇವು. ಕಟ್ಟವೆವು ನಾವು ಹೊಸ ಹಾಡೊಂದನು. ರಸ ಸಾಮ್ರಾಜ್ಯದ ಬೀಡೊಂದನು. ಕಾಲಾಂತರಗಳಿಂದ ಕನಸುತ್ತ ಕನವರಿಸುತ್ತ ಸಗ್ಗದಾಸೆಯಲಿ ಅಗ್ಗದ ಕಗ್ಗಗಳನ್ನು ಹೊಸೆಯುತ್ತ ಕವಿ ಮುಂದೆ ಹಾಡುತ್ತಲೇ ಸಾಗಿದ್ದೇವೆ. ಹಾಗಾಗಿದೆ. ಕವಿ ಕವಿತೆಗಳ ದುರಂತ ದುಸ್ಥಿತಿ.

ಇಲ್ಲಿ ಸಾಕ್ಷರತಾ ಪದಗಳಾದರೂ ಅಪ್ಪಟ್ಟ ಪ್ರಗತಿಶೀಲ ಕಾವ್ಯ. ಪ್ರತಿಪದ ಕವಿಯ ಸಾಮಾಜಿಕ ಕಾಳಜಿ ಹೊಗೆಯಾಡುತ್ತದೆ. ಕವಿಯ ಅಂತರಂಗದ ಉರಿ ನೋವು ನಂಜು ಓದುಗನನ್ನು ಖಂಡಿತವಾಗಿ ತಟ್ಟದಿರಲಾರದು.

ದಲಿತರ ಗ್ರಾಮೀಣ ರೈತಾಪಿಗಳ ಅದು ಬೆಳಗಾವಿ ಗೋಕಾವಿ ಗಡಿ ಜಿಲ್ಲೆಗಳ ಪಡಿನುಡಿ ಆಡು ಮಾತು ನೆಲದ ಭಾಷೆ ಮಣ್ಣಿನ ವಾಸನೆ ತೀಕ್ಷ್ಣವಾಗಿ ತಾಗದೆ ಇರಲಾರದು. ಗ್ರಾಮೀಣ ಜನಪದ ಭಾಷೆಯ ಮೇಲಿನ ಪ್ರಭುತ್ವ ಅಗಾಧವಾದುದು. ಇಷ್ಟು ಪ್ರಮಾಣಬದ್ಧವಾಗಿ ದೇಸಿಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳುವ ಪ್ರತಿಭೆ ಅಪರೂಪವೆಂದೇ ಹೇಳಬೇಕು.

ದೇಸಿ ಆಡುಮಾತು ಗ್ರಾಮೀನ ಪದ ಸಂಪತ್ತು ಮಾತ್ರವಲ್ಲ. ಕಾವ್ಯದ ಶಕ್ತಿಯಿರುವುದು. ಅದರ ಪರಿಣಾಮಕಾರಿ ಪ್ರಯೋಗ ನಿರೂಪಣೆಯಲ್ಲಿ ಕವಿಗೆ ಹೇಳಬೇಕಾದ ವಸ್ತು ಪ್ರತಿಪಾದಿಸಬೇಕಾದ

ಸಿದ್ಧಾಂತ ತತ್ವ ನಂಬಿಕೆ ಒಲವು ನಿಲುವುಗಳು ಹೇಗೆ ಸ್ಪಷ್ಟವೋ ಅಭಿವ್ಯಕ್ತಿ ಕೂಡ. ಒಂದಿಷ್ಟು ಮಚ್ಯವಾದರೂ ಕಲಾತ್ಮಕ ನೇರ ದಿಟ್ಟ ಪ್ರಾಮಾಣಿಕ ನಿರೂಪಣೆ, ನಿರೀಕ್ಷಿತ ನಿಶ್ಚಿತ ಪರಿಣಾಮ ಮಾಡುವುದರಿಂದ ಅದು ಕಾವ್ಯದ ಯಶಸ್ಸು ಸಾಫಲ್ಯತೆಯನ್ನು ಸೂಚಿಸುತ್ತದೆ. ಕಾವ್ಯದಲ್ಲಿ ವ್ಯಕ್ತವಾಗುವ ಶೋಷಿತರ ಬದುಕಿನ ಚಿತ್ರಣ ಅಳಲು ಅಸಹಾಯಕತೆ ವೇದನೆ ಸಂವೇದನೆ ತೀವ್ರವಾಗಿ ತಟ್ಟುತ್ತದೆ. ಹಾಗೆಯೇ ಕವಿಯ ಕೋಪ ಸಂತಾಪ ರೋಷ ಆಕ್ರೋಶ, ಕಾವು ಝಳ ಓದುಗರಿಗೆ ತಾಗುತ್ತದೆ. ಒಟ್ಟಾರೆ ಮಹಾಲಿಂಗರ ಪ್ರಗತಿಶೀಲ ಕಾವ್ಯ ಓದುಗರ ಅಂತಃಕರಣ ಕಲಹದಲ್ಲಿ ಪಟ್ಟಭದ್ರರ ಬುದ್ಧಿಜೀವಿಗಳ ನಿಲುವು ನಂಬಿಕೆ ಅಲುಗಾಡಿಸುವಲ್ಲಿ ಯಶಸ್ವಿಯಾಗಿದೆ.

ಕವಿ ಮಹಾಲಿಂಗಮಂಗಿಯವರು ಹೇಳಿಕೊಂಡಂತೆ ತಮ್ಮದು ಸಾಮಾಜಿಕ ಕಳಕಳಿಯ ಮಾನವೀಯ ಕಾವ್ಯ. ತಾವು ದೀನರು, ದುಃಖಿಗಳು, ಅಸಹಾಯಕ, ದುರ್ಬಲ, ಶೋಷಿತರ ಪಕ್ಷಪಾತಿ.

'ಸಹಬಾಳ್ವೆ ಬಾಳು ಬಾಳ್ಗೊಡು' ಮಂಗಿಯವರ ಕಾವ್ಯದ ಅಂತರಂಗದ ಕೂಗು.

ಮಹಾಲಿಂಗಮಂಗಿಯವರು ಸಾಕಷ್ಟು ಪ್ರಗತಿಯೇತರ ಕಾವ್ಯ ಕಾಣಿಕೆಯನ್ನು ನೀಡಿದ್ದಾರೆ. ಜೀವನ ಸೌಂದರ್ಯ ಕುರಿತು ಆತ್ಮಶೋಧನೆ ಆಧುನಿಕತೆಯ ಪರಿಣಾಮಗಳ ಕುರಿತು ಸಾಕಷ್ಟು ಚಿಂತನೆಗಳನ್ನು ನೀಡಿದ್ದಾರೆ.

ಇನ್ನೊಮ್ಮೆ ಹುಟ್ಟಿ ಬಾ ಎಂದು
ಆಗೀಗ ಹಾಡಾಡಿಕೊಂಡು ಕಾಯುತ್ತಿದ್ದೇವೆ.
ಈ ದೇಶದ ಕೊಳೆ ತೊಳೆಯಲು
ಗಾಂಧೀ 'ಮಹಾತ್ಮ'ನಿಗಾಗಿ.
ಗಾಂಧೀಯಾಗಲು ನಾವ್ಯಾರು ಸಿದ್ಧರಿಲ್ಲದೆ.
(ಕಾಯುತ್ತಿದ್ದೇವೆ ಗಾಂಧೀಗಾಗಿ)

ಎಂಥಹ ಅದ್ಭುತ ಪರಿಕಲ್ಪನೆ ವಿಡಂಬನೆ ಗಾಂಧೀಜಿ ಇನ್ನೊಮ್ಮೆ ಹುಟ್ಟಿ ಬಾ ಎಂದು ಹಾಡುತ್ತೇನೆ. ಸ್ವತಂತ್ರ ನಾವ್ಯಾರೂ ಗಾಂಧೀಜಿ ಆದರ್ಶ ಪಥದಲ್ಲಿ ಸಾಗಲು ಗಾಂಧೀಯಾಗಲು ತತ್ವ ಶುದ್ಧ ಪ್ರಾಮಾಣಿಕ ಜೀವನ ನಿಸ್ವಾರ್ಥ ತ್ಯಾಗ ಸೇವೆಗೆ ಸಮರ್ಪಿಸಿಕೊಳ್ಳಲು ಯಾರೊಬ್ಬರೂ ಈ ದೇಶದಲ್ಲಿ ಸಿದ್ಧರಿಲ್ಲ. ಎಂಥ ಚೋದ್ಯ. ನಾವೆಷ್ಟು ಸ್ವಾರ್ಥಿಗಳು, ಧೂರ್ತರು ಕುವೆಂಪು ಹೇಳುವಂತೆ ಕಾವ್ಯದ ದರ್ಶನ ಸಾಕ್ಷಾತ್ಕಾರವೇ ಅದರ ಸಾರ್ಥಕತೆ.

ಏಕೋ ಏನೋ ಗೊತ್ತಿಲ್ಲ । ನಮ್ಮ ದೇವತೆಗಳೆಲ್ಲರೂ
ಆಯುಧದಾರಿಗಳು । ಹಿಂಸಾವಾದಿಗಳು

ರಣೋತ್ಸಾಹಿಗಳು – ರಕ್ತಪಿಡಾಸುಗಳು ।
ಆದರೆ ನಮ್ಮ ಧರ್ಮ ಗುರುಗಳು । ಪ್ರವಾದಿ ದಾರ್ಶನಿಕರು
ಮಹಾವೀರ ಬುದ್ಧ ಬಸವಾದಿಗಳು
ಶಾಂತಿ ಪ್ರಿಯರು ಅಹಿಂಸಾವಾದಿಗಳು

ನೋಡಿ ನಮ್ಮ ದೇವರಷ್ಟು ಭೋಗ ಸಂಸ್ಕೃತಿಗಾರರು । ಮೈ ತುಂಬ ಚಿನ್ನಾಭರಣ ವಜ್ರ ವೈಡೂರ್ಯ ಬಹುಪತ್ನಿಕರು ರಸಿಕ ಶಿಖಾಮಣಿ ಲಂಪಟರು । ಆದರೆ ನಮ್ಮ ಸದ್ಗುರು

ಭಾವಗೀತೆಗೆ

ಪ್ರೇಮದ ದೋಣಿ ಕಟ್ಟಿ ನಾವೀರ್ವರು ಕೂಡಿ
ಸಂಸಾರ ಸಾಗರವ ಹರುಷದಿ ದಾಟುವಾ ।
ಕಷ್ಟದ ತೆರೆಗಳಿಗೆ ವಿಧಿಯ ಬಿರುಗಾಳಿಗೆ
ಹೆದರದೆ ಬೆದರದೆ ಎದುರಿಸಿ ನಾವು
ಮುಂದೆ ಸಾಗುವಾ ಮುಕ್ತಿದಡವ ಸೇರುವಾ ॥

(ನಾನು ನೀನು ಜೋಡಿ)

ಯುಗವೊಂದು ದಿನವಾಗಿ । ದಿನವೊಂದು ಕ್ಷಣವಾಗಿ
ಯುಗ ಯುಗಾದಿಯಾಯಿತು ।
ನಾವು ನಲವಾಗಿ ಸೋಲು ಗೆಲುವಾಗಿ
ಹೊಸ ಹರುಷ ಹೊನಲಾಯಿತು ॥

ಈ ಮೂಗನ ಹಾಡಿಗೆ
ನನ್ನ ಕಿವುಡಿ ತಲೆದೂಗಿದಳು ಅಷ್ಟು ಸಾಕು ।

(ಕವಿಯ ಹೆಂಡತಿ)

ತತ್ವ ಉಪದೇಶಕ್ಕೆ :

ಪರಮ ನರಸಲು ದೂರಲೇಜೆ ಹೋಗಲೇಕೆ
ತನ್ನತಾ ನರಿಯದೆ । ತನ್ನಾತ್ಮ ದಿರುಶನವಿಲ್ಲದೆ । ತನ್ನ ಬಿಟ್ಟು
ದೇವರೆಲ್ಲಿ?

ಮೊಮ್ಮನೆಂಬುದು ಬರಿ ಬೊಗಳೆಯೆ?
ಪರ ಬ್ರಹ್ಮನೇನಾದರೂ ಬಲ್ಲೆಯ ಮರುಳೆ?

(ಬೊಮ್ಮ)

ಕೋಟೆ ಸೊನ್ನೆಗಳ ಹಿಂದಿನ
ಅಂಕೆಯಾಗಿ ಇಡೀ ಜನಪದಕ್ಕೆ
ಮೌಲ್ಯವನ್ನು ತಂದೊದಗಿಸುವಂತೆ
ವ್ಯರ್ಥವೆನಿಸುವ ಬದುಕಿಗೊಂದು ಅರ್ಥಕೊಡಬೇಕಿದೆ.

ಹೀಗೆ ಭಾವ ಸೌಂದರ್ಯ ಶೃಂಗಾರ ಲಾಲಿತ್ಯ ಜಾನಪದ ಅನುಭಾವ ತತ್ವೋಪದೇಶ ಎಲ್ಲಕ್ಕೂ ಸಾಂದರ್ಭಿಕವಾಗಿ ಸ್ಪಂದಿಸುತ್ತಾರೆ. ಆ ಮೂಲಕ ತಮ್ಮ ಅಭಿರುಚಿ ಅಭ್ಯಾಸ ಅನುಭವಗಳನ್ನು ಪರಿಚಯಿಸುತ್ತಾರೆ. 'ಹಾಡದ ಹಾಡು' ಪದ್ಯದಲ್ಲಿ ಹಾಡಿನ ಚಾಡಿನಲ್ಲಿ ತೆರೆದು ತೋರಿದ್ದಕ್ಕಿಂತ । ತೋರಲಾರದ ಹೊತುಕೊಂಡ ಒಳ ಆಳದ ಸಂವೇದನೆಗಳನ್ನು ರೋಚಕ – ರಂಜಕ. ನಮಗೂ ಅದೇ ಅನುಭವ ಯಾವುದನ್ನು ಉಲ್ಲೇಖಿಸಲಿ ವಿಶ್ಲೇಷಿಸಲಿ ಎಂಬ ಅಳುಕು ಆತಂಕ.

ಕವಿ ಮಹಾಲಿಂಗ ಮಂಗಿಯವರ ಅನುರಾಗ ಚಿಕ್ಕ ಚಿಕ್ಕ ಕವಿತೆಗಳ ಚಿಕ್ಕೆಗಳನ್ನು ಮೂಡಿಸುತ್ತ ಸಾಗಿದಂತಿವೆ. ಅನುರಾಗ ಶೃಂಗಾರ ಕಾವ್ಯವಾದರೂ ಜನಪದವಾಗಿಯೂ ಅರ್ಥಕ್ಕೆ ಒಯ್ಯುತ್ತದೆ. ಕವಿ ಮಹಾಲಿಂಗರು ಒಂದು ನಿಟ್ಟಿನಲ್ಲಿ ಹೋರಾಟವನ್ನು, ಇನ್ನೊಂದು ನಿಟ್ಟಿನಲ್ಲಿ ದರ್ಶನವನ್ನು ಇಟ್ಟುಕೊಂಡು ನಡೆದವರು. 'ಅನುರಾಗ' ಸರಳವಾಗಿ ಓದಿಸಿಕೊಂಡು ಹೋಗುವ ಕೃತಿ ಸಾಹಿತ್ಯದ ಹೊನಲು ಗೊತ್ತಾಗದಿದ್ದವರಿಗೂ ರುಚಿಯನ್ನು ನೀಡುವ ಕಾವ್ಯ ಕೃತಿ.

ಅನುರಾಗ ಕಾವ್ಯ ಓತ ಪ್ರೇತವಾಗಿ ಭಾವದ ಕೋಟೆಯನ್ನು ಒಡೆದು ಹೊರ ಬರುವಂಥದ್ದು. ಯಾಕೆಂದರೆ ಪ್ರತಿಯೊಬ್ಬ ಕವಿಯಲ್ಲೂ ಒಬ್ಬ ಪ್ರೇಮಿ ಇರುತ್ತಾನೆ. ಈ ಪ್ರೇಮ ವ್ಯಾಪ್ತಿಯ ಕುರಿತದ್ದು ಆಗಿರಬಹುದು. ಸಮಷ್ಟಿಯ ಕುರಿತದ್ದು ಆಗಿರಬಹುದು. ಕವಿಯ ಸಮಷ್ಟಿಯ ಬಗೆಗಿನ ಪ್ರೀತಿ ಕಾಳಜಿ ಅವನ ಕ್ಷಿತಿಜವನ್ನು ವಿಸ್ತರಿಸಿದರೆ, ವ್ಯಾಪ್ತಿ ಬಗೆಗಿನ ಕಾವ್ಯವನ್ನು ಸಂಕುಚಿತಗೊಳಿಸಿ ಬಿಡುತ್ತದೆ. ಈತರದ ವಿಷಯವಸ್ತು ಈಚಿನ ಅಂದರೆ ನವ್ಯ. ನವ್ಯೋತ್ತರ ಕಾವ್ಯದಲ್ಲಿ ತೀರ ಒಡೆದು ಕಾಣುತ್ತದೆ. ವರ್ಣ ವರ್ಗ ಸಂಘರ್ಷ ದುಡಿಯುವ ದುಡಿಸಿಕೊಳ್ಳುವವರ ಬಡಿವಾರ ಬಡಿದಾಟಗಳ ಬಗ್ಗೆ ಬಿಚ್ಚಿ ಬರೆದ ಗಾಡೆದೆ 'ಅನುರಾಗದಲ್ಲಿ' ಅತ್ತು ಕಿತ್ತು ಖಾಲಿಯಾದಂತೆ ಅನ್ನಿಸುತ್ತದೆ.

ಹೆಣ್ಣೆ ನಿನ್ನದಾಳಿಗೆ । ಎದುರಾಳಿ ದಿಕ್ಕು ದಿವಾಳಿ
ಒಂದು ಎಸಳು ನಗೆ । ನೋಟದೊಂದು ಎಸೆತ
ಮಾತ್ರದಿ ನನ್ನ ಬಗೆದು । ಬರಿದು ಮಾಡಿದೆಯಲ್ಲೇ

ಬಿಸಿರಿನ ಚೀಲಕ್ಕೆ ಉಸಿರುಕೊಟ್ಟ
ನಿನ್ನ ಪ್ರಣಯದ ನೆನಪುಗಳು

ಅಕಾಲದಲ್ಲಿ ಪ್ರಸವಿಸಿದ ಸಾಲು
ಸಾಲು ಸಾಂದರ್ಭಿಕ ಗರ್ಭಪಾತಗಳು

ಮುಂತಾದ ಅನೇಕ ಸುಂದರ ಅಭಿವ್ಯಕ್ತಿಗಳು ಮಂಗಿಯವರ 'ಕಾವ್ಯ ಪ್ರತಿಭೆಗೆ ಕಿರಿಟ ಇಡುತ್ತದೆ'.

ಅನುರಾಗದಲ್ಲಿ ಪ್ರಣಯ ಕವಿಯಾಗುತ್ತಾನೆ. ಕವಿ ಪ್ರಣಯಿಯಾಗುತ್ತಾನೆ. ಈ ಏಕಾಕಾರದ ತಾದ್ಯಾತ್ಮ ಜೀವನದಲ್ಲಿ ಬಹಳ ಕಾಲ ಮಧುರ ನೋವಿಗೆ ಕಾಣವಾಗುತ್ತದೆ. ನಿರಂತರ ನೆನಪಿನ ಸೌಂದರ್ಯವಾಗುತ್ತದ. ಆಗ ಯಾರಾದರೂ –

ನನ್ನೋಳು ಹುದುಗಿ । ಹುಡುದಿ ಹಾಕುವ ಹುಡುಗಿ
ಕಣ್ಮುಚ್ಚಿದರೆ ಕನಸಾಗಿ ಕಾಡುವೆ । ಕಣ್ಮುಚ್ಚಿದರೆ ನೆನಪಾಗಿ ಹಾಡುವೆ.

ಎನ್ನದೆ ಸತ್ಯಂತರವಿಲ್ಲ.

ಮೌನ ಮೊಗ್ಗೆಡೆದು ಮಾತರಳಿದಂತೆ । ಕಂಪಿರಲಿ ಪ್ರೇಮ
ಸಿಂಪಿಯೊಳಗಿನ ಜಾತ ಮುತ್ತಂತೆ । ಅಡಕವಾಗಿರಲಿ ಕಾಮ
ನನ್ನೊಡನೆ ನೀ ಒಂದಾಗಿದ್ದ । ಆ ಒಂದು ದಿವ್ಯ ಕ್ಷಣ
ನೀಕೊಟ್ಟ ಹುಸಿ ಸುಖ । ಜೀವ ಮಾನಕ್ಕೆಲ್ಲ ಸಾಲುವಷ್ಟಾಯಿತು.

ಇಂತಹ ಮಧುರ ಭಾವ ಮನಸ್ಸು ತುಂಬುವ ಪ್ರಣಯ ಅನರಣಗೊಳ್ಳವಂತ ಸುಂದರ ಕವನಗಳನ್ನು ಬಿಸಿರಿನ ಚೀಲಕ್ಕೆ ಉಸಿರು ಕೊಟ್ಟ, ಪ್ರಣಯದ ಸ್ಮರಣೆಗಳನ್ನು ಮೇಲುಕು ಹಾಕುವುದೆಂದರೆ ನುಡಿಯಲಾರೆ. ನುಡಿಯದಿರಲಾರೆ. ಅನುರಕ್ತ ಹೃದಯಿಗಳ ಒಲವು ಸೆಳೆತ, ಸಂಭ್ರಮ, ವಿರಹವೆದನೆ, ಸಂವೇದನೆಗಳ ಉತ್ಕಟವಾದ ಬಯಕೆ ಭಾವನೆಗಳ ಸುಂದರ ಅಭಿವ್ಯಕ್ತಿ ಅನುರಾಗ ಕೊನೆಯ ಪದ್ಯ 'ಹಾಡಿನ ಪಾದು' ಹಾಡು ಹಾಡೆಂದರೆ ಏನೆಂದು ಹಾಡಲಿ. ಅಂತಃಕರಣಗಳು ಸರ್ವಜ್ಞರು ಸರ್ವಸಂಗ ಪರಿತ್ಯಾಗಿಗಳು ಬ್ರಹ್ಮಚಾರಿ ಅನುಭಾವಿ ಸಂಯಮಿ, ಸಾತ್ವಿಕ ವಿರಕ್ತರು. ಆದರೆ ನಾವು ಬೆಂಕಿ ಮಂದಿ ಪಟಿಂಗೆ ಭಕ್ತರು ಹೇಗಿದ್ದೇವೆಂದರೆ ಕವಿ ಹೇಳುವುದನ್ನು ಗ್ರಹಿಸಿ.

ನಾವುಗಳು ಸುಮ್ಮನೆ ನಿವೃತ್ತಿ ಮಾರ್ಗದ
ಧರ್ಮ ಗುರುಗಳ ಅನುಯಾಯಿಗಳಾದ್ದೇವೆ
ಮೌಢ್ಯದ ದೈವ ಭಕ್ತರಾಗಿ ದೇವತೆಗಳ
ವೈಭೋಗದ ಪ್ರವೃತ್ತಿ ಮೂಲ ಅನುಸರಿಸುತ್ತಿದ್ದೇವೆ.

(ದೈವ)

ನಿಜಕ್ಕೂ ಚಿಂತನಾರ್ಹ ಕಾವ್ಯ ಯೋಚನೆಗೆ ಆಲೋಚನೆ ತೊಡಗಿಸುವಂತದ್ದು. ಕವಿಯ ದಿವ್ಯ ದೃಷ್ಟಿ ಸೃಷ್ಟಿಯನ್ನು ಗ್ರಹಿಸಬೇಕು. ಅರ್ಥಮಾಡಿಕೊಳ್ಳಬೇಕು. ನಮ್ಮ ದೇವರು ದಾರ್ಶನಿಕರ ಸ್ವರೂಪ ಸ್ವಭಾವಗಳ ತೌಲನಿಕ ವಿಮರ್ಶೆ ಮತ್ತು ನಮ್ಮಗಳ ಸ್ವಾರ್ಥ ಅವಕಾಶವಾದಿತನದ ಅನುಸರಣೆ ವಿವೇಚಿಸಬೇಕಾಗಿದ್ದ. ಇಂತಹ ತರ್ಕ ಚಿಂತನೆಗಳೇ ಕಾವ್ಯವನ್ನು ಘನವಾಗಿಸುವುದು.

ಅಂತರಂಗ ಶುದ್ಧಿಯೊಂದಿಗೆ ಬಹಿರಂಗ ಶುದ್ಧಿಯನ್ನು ಸಾದಿಸುತ್ತ, ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣದಲ್ಲಿ ತೊಡಗಿದ ಬಸವಾದಿ ಶರಣರ ಆದರ್ಶ ತತ್ವ ಚಿಂತನೆ ಅನುಕರಣೀಯ ಆದರಣೀಯ ! ಸಾಂದರ್ಭಿಕವಾಗಿ ಮಹಾಲಿಂಗರ ಕಾವ್ಯದ ಸಾಲು ಗಮನಿಸಿ.

ಬುದ್ಧಿ ಜೀವಿಗಳು ನಾವು । ಸುದ್ದಿ ಜೀವಿಗಳು
ಅವಕಾಶವಾದಿಗಳು ನಾವು । ಸಮಯ ಸಾಧಕರು ನಾವು
ಕಣ್ಮುಂದೆ ಕೈ ಮುಗಿಯುತ್ತೇವೆ । ಬೆನ್ಹಿಂದೆ ಚೂರಿಯಿಡುತ್ತೇವೆ
ಇದೆ ನಮ್ಮ ಅಂತರಂಗ ಸುದ್ಧಿ । ಇದೇ ನಮ್ಮ ಬಹಿರಂಗ ಸಿದ್ಧಿ
(ಅಂತರಂಗ ಸಿದ್ಧಿ)

ಅಸಾಧರಣರು ನಾವು । ಹೃದಯ ಶೂನ್ಯರು
ನವನಾಗರಿಕರು ನಾವು । ಅತ್ಯಾಧುನಿಕರು
ಕೃತಕತೆಯೇ ನಮ್ಮ ಬದುಕಿನ ರೀತಿ
ಕೃತ್ರಿಮತೆಯೇ ನಮ್ಮ ಜೀವನ ನೀತಿ.
(ನಮ್ಮ ನವ್ಯ ಬಾಳ ಶೈಲಿ)

ತಮ್ಮನ್ನು ತಾವೇ ಗೇಲಿ ಮಾಡಿಕೊಳ್ಳುತ್ತ ಆತ್ಮಾವಲೋಕನಕ್ಕೆ ತೊಡಗಿಸುವ ಕಾವ್ಯ. ಇಲ್ಲಿ ವ್ಯಂಗ ವಿಡಂಬನೆ ತಿವಿದರೂ ಕೂಡಾ ಪರೋಕ್ಷವಾಗಿ ನಮ್ಮನ್ನು ತಿದ್ದಿಕೊಳ್ಳಲು ಪ್ರಚೋದಿಸುತ್ತದೆ.

ಜಾನದಪ ಹಾಡುಗಬ್ಬ ನವೋದಯ ಶೈಲಿಯ ಕವಿತೆಗಳು ಇಲ್ಲಿ ಸ್ಥಾನ ಪಡೆದಿವೆ.

ಜಾನಪದ ಮಾದರಿಗೆ :

ನಲ್ಲ ಸೊಲ್ಲದ ಒಗೆತನ ಇಲ್ಲಿಗೆ ಬಲ್ಲೆವ್ವ
ಬಲ್ಲವ ಬಲ್ಲಿದನೆಂದು ಬೆರಳಿಡಿದರ । ಬತ್ತಿ ಕಡೆ
ಬಲ್ಲ ಬಲ್ಲಿಂಗ ಮನಸ ಹರಿಬಿಟ್ಟೆ ।

ಅಂಗ ಭೋಗದ ಸಂಗ ಸುಖ ಬಯಸಿ
ಮಂಗ ನಾಗದಿರು ಎಲೋ ಮನುಜ
ಭಂಗಗೋಲ್ಲದಿರು ನೀ ಅಖಂಡ ತೇಜ ।

ಕಲಕಿ ಕಿವುಚಿ ಬಿಡುವ – ವಿರಹ ಗೀತೆ. ಹಾಡುಗಬ್ಬ. ತನ್ನ ಗೇಯತೆ, ಪ್ರತಿಮೆ ಉಪಮೆಗಳಿಂದ ಗಮನ ಸೆಳೆಯುತ್ತದೆ. ಓದುವದಕ್ಕಿಂತ ಹಾಡು ಕೇಳುವುದು ಸೊಗಸು.

ಅರಳಿದ ಹೂವೆಲ್ಲ ಬೇರಿಮುಳ್ಳಿ ಚುಚ್ಚಿ
ನರಳುತ ಅಳುವಾಗ ಏನೆಂದು ಹಾಡಲಿ
ಹಾಡುವ ಹಕ್ಕಿಯ ಪಂಜರದೊಳಗಿಕ್ಕಿ
ಕೊರಳಿಗೆ ಮುಳ್ಳಿಕ್ಕಿದಾಗ ಏನೆಂದು ನಾ ಹಾಡಲಿ ।

೨೮ ಸಾಲುಗಳ ಗೀತ ರಚನೆ, ಕಣ್ಣು ಹನಿಯುವಂತೆ ಮೂಡುತ್ತದೆ. ಅನುರಾಗದಲ್ಲಿ ಒಂದು ಜೀವನದೃಷ್ಟಿ ಕಲಾತ್ಮಕ ಸೃಷ್ಟಿ, ರಸಾನುಭವ, ಸಂವೇದನೆ ಕೆನೆಗಟ್ಟಲೆ, ಅಗಾಳಿನ ಮೇಲೆ ಅನ್ನದ ಪರೀಕ್ಷೆಯಂತೆ ಒಂದೆರಡು ಝಲಕ ತೋರಲಾಗಿದೆ. ಎಲ್ಲ ಕವಿತೆ ಎಲ್ಲ ಚರಣ ವಿವರಿಸುವುದು ವಿಮರ್ಶಿಸುವುದು ಕಷ್ಟ ಸಾಧ್ಯ.

ಬಿ. ಆರ್. ಪೋಲಿಸ ಪಾಟೀಲರು ಹೇಳುವಂತೆ ಪ್ರತಿ ಮನುಷ್ಯ ಕವಿಯಲ್ಲೂ ಒಬ್ಬ ಪ್ರೇಮಿ ಇರುತ್ತಾನೆ. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ ಅಭಿಪ್ರಾಯಪಡುವಂತೆ ವೈಚಾರಿಕ ನಿಲವು, ಹೋರಾಟ ಬಂಡಾಯ ಸಾಮಾಜಿಕ ಕ್ರೀಯಾಶೀಲತೆ ಇತ್ಯಾಧಿಗಳು. ನಾವು ಹೊತ್ತುಕೊಂಡು ಗಂಟು, ಬಯಸಿ ಧರಿಸಿದ ಬಟ್ಟೆ. ಆದರೆ ಭಾವಪೂರ್ಣ ಆರಾಧನೆ ಪ್ರಣಯಿದ್ದಾಗಿರಲಿ, ಕಾಯಕದ್ದಾಗಿರಲಿ, ಬದುಕಿನದ್ದಾಗಿರಲಿ, ಮೂಲಭೂತವಾಗಿ ಹೃದಯದ ಸಂಪತ್ತು. ಅಂತಹ ಸಂಪತ್ತು ಮಹಾಲಿಂಗರಲ್ಲಿ ತುಂಬಿದೆ. ಈಗದು ತುಳುಕಿ ಅನುರಾಗ ಕಾವ್ಯವಾಗಿ ಹನಿಯುತ್ತಿದೆದ. ಇದುವೇ ಜೀವನದ ಸಾಫಲ್ಯ ಕಾವ್ಯದ ಸಾರ್ಥಕ್ಯ.

ಸಮಾರೋಪ :

ಎಡ ಪಂಥೀಯ ಸಿದ್ದಾಂತಗಳಿಗೆ ಪ್ರಗತಿಶೀಲ ಧೋರಣೆಗೆ ಬದ್ಧರಾಗಿ ತಮ್ಮ ಒಲವು ನಿಲುವು ಪ್ರಕಟಿಸುತ್ತ ಬಂದರೂ ಮಹಾಲಿಂಗರದು. ಮೂಲತಃ ಜೀವನ ಕಾವ್ಯ. ಸಮುದಾಯ ಕಾವ್ಯ ತಾವೂ ಹೇಳಿಕೊಂಡಂತೆ ಮತ್ತು ರಮೇಶ ಧಾರವಾಡಕರ ವಿಶ್ಲೇಷಿಸುವಂತೆ ಅದು ಮಾನವೀಯ ಕಾವ್ಯ. ಸಂಘರ್ಷವೇ ಬದುಕಲ್ಲ. ಈ ಹೋರಾಟದ ತಲಸ್ಪರ್ಶಿಯಾಗಿ ಅಲ್ಲಿ ಮಾನವೀಯ ಮೌಲ್ಯಗಳು ಹುಡುಕಾಟವಿದೆ. ಪ್ರೀತಿ, ನೀತಿ, ಶಾಂತಿ ಜೀವನಮಂತ್ರ ಬಾಳು ಬಾಳೋಡು ಬಾಳಸುತ್ರ. ಅಂತಹ ಭಾವ ಸೌಂದರ್ಯದ ಸೆಳಕುಗಳು ಪ್ರೀತಿಯ ಸಿಂಚನ ಕಾವ್ಯದುದ್ದಕ್ಕೂ ಕಾಣಸಿಗುತ್ತವೆ.

: ಅಡಿಟಿಪ್ಪಣಿಗಳು :

೧) ಡಾ. ಬುದ್ದಣ್ಣ ಹಿಂಗಮಿರೆ : ಸಂ. ಕರ್ನಾಟಕ ವಿಮರ್ಶೆ

೨) ವೆಂಕಟ ಸುಬ್ಬಯ್ಯ : ಕನ್ನಡಮ್ಮ ವಿಮರ್ಶೆ

೩) ಡಾ. ಬುದ್ದಣ್ಣ ಹಿಂಗಮಿರೆ : ಸಂ. ಕುಂಬಾರರ ವಿಮರ್ಶೆ

೪) ವೆಂಕಟ ಸುಬ್ಬಯ್ಯ : ವಿಮರ್ಶೆ

೫) ತಮ್ಮ ಬದುಕು ಜೀವ ಸಾವುಗಳ ನಡುವಿನ ಮುಖಾ–ಮುಖಿ ಹೋರಾಟ, ಅಗ್ನಿದಿವ್ಯಗಳೆನ್ನೆಲ್ಲ ಹಾಯ್ದು ಬಂದ ಕಥೆ, ವ್ಯಥೆ ಮಹಾಲಿಂಗ ಮಂಗಿಯವರ ಆತ್ಮಕಥೆ ಅಭಿವ್ಯಕ್ತಿಯಲ್ಲಿ ವಿವರವಾಗಿ ನೋಡಬಹುದು. : ಅಭಿವ್ಯಕ್ತಿ

೬) ಡಾ. ಬುದ್ದಣ್ಣ ಹಿಂಗಮಿರೆ : ಅವರ ವಿಮರ್ಶೆ

೭) ವೆಂಕಟ ಸುಬ್ಬಯ್ಯ : ಕನ್ನಡಮ್ಮ ವಿಮರ್ಶೆ

ಅಧ್ಯಾಯ - ೬

ಸಮಾರೋಪ

ಅಧ್ಯಾಯ – ೬
ಸಮಾರೋಪ

೬.೧ ಪ್ರವೇಶ :

ಪ್ರಗತಿಶೀಲ ಕವಿ ಮಹಾಲಿಂಗ ಮಂಗಿಯವರು ಒಂದು ನಿಟ್ಟಿನಲ್ಲಿ ಹೋರಾಟವನ್ನು ಇನ್ನೊಂದು ನಿಟ್ಟಿನಲ್ಲಿ ದರ್ಶನವನ್ನು ಇಟ್ಟುಕೊಂಡು ಸಾಗಿದರು. ಖ್ಯಾತ ಪ್ರಗತಿಶೀಲ ಸಾಹಿತಿ ಕಾದಂಬರಿಕಾರರಾದ ಶ್ರೀ ಬಸವರಾಜ ಕಟ್ಟಿಮನಿಯುವರು ಮಹಾಲಿಂಗ ಮಂಗಿಯವರು ಕುರಿತು ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ. "ಮಹಾಲಿಂಗರು ವೃತ್ತಿಯಿಂದ ಕಾರ್ಮಿಕರು, ಪ್ರವೃತ್ತಿಯಿಂದ ಕವಿ, ಸಾಹಿತಿ, ರಂಗ ಕಲಾವಿದ, ಸಂಘಟಕರು, ಸಮಾಜ ಸೇವಕ, ಹೋರಾಟಗಾರ". ಗೋಕಾವಿ ನಾಡು ಈಚೆಗೆ ಕಂಡ ಆಧುನಿಕ ಕವಿಗಳಲ್ಲಿ ಮಹಾಲಿಂಗರದು ಮಹತ್ವದ ಹೆಸರು. ಕಾರ್ಯ ಕ್ಷೇತ್ರವೊಂದರಲ್ಲಿಯೇ ಮುಂದುವರೆದರೆ ಅವರು ಕರ್ನಾಟಕದ ಖ್ಯಾತ ಕವಿಯಾಗಲು ಸಾಧ್ಯವಿದೆ. ಆದರೆ ಅವರಿಗೆ ಹರೆಯದ ಅದಮ್ಯ ಹುಮ್ಮಸ್ಸು ಕಾವ್ಯ ಕ್ಷೇತ್ರವೊಂದರಲ್ಲಿಯೇ ಸಮಾಧಾನ ಲಭಿಸದು. ಎಂತಲೇ ಕಾರ್ಮಿಕರ ಹೋರಾಟ ಚಳುವಳಿಯಲ್ಲಿ ಸಕ್ರೀಯವಾಗಿ ಪಾತ್ರವಹಿಸಿ ದುಡಿಯುತ್ತಾರೆ. ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಸಂವೇದನ ಶೀಲ ಜೀವಿಗಳಿಗೆ ಇದೆಲ್ಲ ಸಹಜ ಸೇವೆ.

ಇಂದಿನ ಮಹಾಲಿಂಗರನ್ನು ನೋಡುತ್ತಿದ್ದರೆ ನನ್ನ ಮತ್ತು ನಿರಂಜನರ ಯವ್ವನದ ದಿನಗಳು ನೆನಪಿಗೆ ಬರುತ್ತವೆ. ನಾವು ಹೀಗೆ ದುಡಿ ದುಡಿಯುತ್ತಲೇ ಬೆಳೆದಿದ್ದು, ಇಂಥ ಹೋರಾಟ ಚಟುವಟಿಕೆಗಳಿಂದ ಸಾಹಿತಿಗೆ ಸಾಕಷ್ಟು ಜೀವಾನಾನುಭವ ಲಭಿಸುತ್ತದೆ. ಅನಂತರ ಆತನ ಸಾಹಿತ್ಯ ಕೃತಿಯಲ್ಲೂ ಆ ಅನುಭವ ಪ್ರಕಟಗೊಂಡು ಅದಕ್ಕೆ ಜೀವಂತಿಕೆ ಪ್ರಾಪ್ತವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಮಹಾಲಿಂಗರ ಭವಿಷ್ಯ ಇನ್ನು ಶ್ರೀಮಂತವಾಗುವುದರಲ್ಲಿ ಸಂಶಯವಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ನಿಮಗೆ ಉತ್ತಮ ಭವಿಷ್ಯವಿದೆ. ಶುಭಾಷಯಗಳು ಕಟ್ಟಿಮನಿಯವರ ಅಭಿಮಾನದ ಅಂತರಾಳದ ಮಾತುಗಳು.

೭೪ ನೇ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿ ಸರ್ವಾಧ್ಯಕ್ಷತೆ ಮುದ್ರಿತ ಭಾಷಣದಲ್ಲಿ ಕವಿ ಮಹಾಲಿಂಗ ಮಂಗಿಯವರ ಹೆಸರನ್ನು ಪ್ರಸ್ಥಾಪಿಸಿದ್ದಾರೆ.

ನಾವು ಮಹಾಲಿಂಗ ಮಂಗಿಯವರ ಪ್ರಗತಿಶೀಲ ಚಿಂತನೆಗಳ ಪ್ರತಿಭಟನಾ ಕಾವ್ಯ ಅವಲೋಕನ ಮಾಡಿದ್ದೇವೆ. ನಾಡ ರೈತನ, ಬಡ ಕಾರ್ಮಿಕನ, ಶೂದ್ರ ಬಂಧುವಿನ, ದೀನ ದಲಿತ ದುರ್ಬಲ ಸಮುದಾಯದ ನೋವು ಅವರ ಮೇಲಾಗುವ ದೌರ್ಜನ್ಯಗಳು ಆಶೋಷಿತ ಸಮುದಾಯದ ಪರವಾಗಿ ನ್ಯಾಯಕ್ಕಾಗಿ ಬದುಕಿನ ಹಕ್ಕು ವಿಮುಕ್ತ ಜೀವನಕ್ಕಾಗಿ ಧ್ವನಿ ಎತ್ತುವದರೊಂದಿಗೆ ಸರ್ವೋದಯದ ಹೊಂಗನಸು ಶೋಷಣ ವಿಮುಕ್ತ ಹೊಸ ಆರ್ಥಿಕ ಸಮಾಜ ವ್ಯವಸ್ಥೆ ಹೇಗಿರಬೇಕೆಂಬ ಕನಸು ಕಲ್ಪನೆಗಳನ್ನು ಹಿಂದಿನ ಅವರ ಕಾವ್ಯದ ಅಧ್ಯಾಯಗಳಲ್ಲಿ ನೋಡಿದ್ದೇವೆ. ಪ್ರಗತಿಶೀಲ ಕಾವ್ಯದ ಹೊರತಾಗಿ ಪ್ರೀತಿ, ಪ್ರೇಮ, ಅನುರಾಗ, ಪ್ರಕೃತಿ, ಸೌಂದರ್ಯ, ಆಧ್ಯಾತ್ಮಿಕ ಅನುಭವ, ಸಾಕ್ಷರತೆ, ಪರಿಸರ, ಪ್ರಜ್ಞೆ, ಸಂಸ್ಕೃತಿ, ಯುದ್ಧ ವಿರೋಧಿ ವಿಶ್ವಶಾಂತಿ ನಿಲುವು ಧೋರಣೆಗಳು ಆತ್ಮಾವಲೋಕನ ಸಂದೇಶಗಳು ಹೀಗೆ ವೈವಿಧ್ಯಮಯ ವಸ್ತು. ಜನಪರ ಕಾಳಜಿ, ಸಾಮಾಜಿಕ, ಸಾಂಸ್ಕೃತಿಕ ಕಳಕಳಿ ತಮ್ಮ ಕಾವ್ಯದಲ್ಲಿ ಕಂಡಿರಿಸಿದ್ದಾರೆ. ಜನ ಸಾಮಾನ್ಯರಿಗೂ ಅರ್ಥವಾಗುವ ಗ್ರಾಮೀಣ ಸೊಗಡಿನ ನೆಲದ ಭಾಷೆಯ ಬಳಕೆ ಕಾವ್ಯ ಪ್ರಯೋಗದ ಸಹಜತೆ ಸರಳತೆ ಗಮನ ಸೆಳೆಯುತ್ತದೆ.

೬.೨ ಫಲಿತಗಳು :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ ವಿಭಾಗದಲ್ಲಿ ಕವಿ ಮಹಾಲಿಂಗ ಮಂಗಿಯವರ ಬದುಕು ಬರಹ ಬಹುಮುಖ ಪ್ರತಿಭೆ ಸೇವೆ ಸಾಧನೆಗೆ ಸಂಕ್ಷಿಪ್ತ ಪರಿಚಯದೊಂದಿಗೆ ನನ್ನ ಎಂ.ಫಿಲ್. ಸಂದರ್ಭದಲ್ಲಿ ಅವರ ಕಾವ್ಯದ ಅಧ್ಯಯನ ವಸ್ತುವನ್ನು ಏಕೆ ಆಯ್ಕೆ ಮಾಡಿಕೊಳ್ಳಬೇಕಾಯಿತು. ನನ್ನ ಸಂಶೋಧನೆಯ ಉದ್ದೇಶ ಅದರ ಸ್ವರೂಪ ಕುರಿತು ಪ್ರಸ್ತಾಪಿಸುತ್ತಾ ಅವರ ಪ್ರಕಟಿತ ಕವನ ಸಂಕಲನ. 'ವಚನಕಾವ್ಯ, ಸಮಗ್ರಕಾವ್ಯ, ಸಂಪುಟ, ಮುತ್ತಿನತೋರಣ' ಹಾಗೂ ಅವರ ಸಂಪಾದಿತ ಕಾವ್ಯ ಕೃತಿಗಳಾದ 'ಸಮುದಾಯ' ಮತ್ತು 'ಸ್ಮೃತಿ' ಕುರಿತು ತಿಳಿಸುವುದರೊಂದಿಗೆ ಮುಖ್ಯವಾಗಿ ಮೊದಲ ಆರು ಕಾವ್ಯ ಸಂಕಲನಗಳಲ್ಲಿ ಅಧ್ಯಯನಕ್ಕೆ ಮೂಲ ಆಕಾರವಾಗಿ ಇಟ್ಟುಕೊಂಡಿರುವ ಅಭ್ಯಾಸದ ಮಿತಿಗಳನ್ನು ಸಾದರಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕವಿ ಮಹಾಲಿಂಗ ಮಂಗಿಯವರು ಹುಟ್ಟಿ ಬೆಳೆದ ಬದುಕಿದ ಪರಿಸರ ಮತ್ತು ಅವರ ಸಾಹಿತ್ಯದ ಪ್ರೇರಣೆ ಪ್ರಭಾವಗಳ ಕುರಿತು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಅವರು ಪ್ರಗತಿಶೀಲ ಕವಿಯಾಗಿ ರೂಪುಗೊಳ್ಳುವಲ್ಲಿ ಸ್ಥಳಿಯ ವಾತಾವರಣ ಪರಿಸ್ಥಿತಿ ಪ್ರಸಂಗಗಳು ಸಾಹಿತ್ಯ ಸಾಮಾಜಿಕ ಹೋರಾಟಗಳ ಸಂಬಂಧಗಳ ಕುರಿತು ಉಲ್ಲೇಖಿಸಲಾಗಿದೆ. ಎರಡನೆಯ ಅಧ್ಯಾಯದ

ದ್ವಿತೀಯ ಭಾಗದಲ್ಲಿ ಪ್ರಗತಿಶೀಲ ಸಾಹಿತ್ಯದ ಒಂದು ಪಕ್ಷಿ ನೋಟ ಒದಗಿಸುವ ಪ್ರಯತ್ನ ಮಹಾಲಿಂಗ ಮಂಗಿಯವರು ಮಾಡಿದ್ದಾರೆ. ಪ್ರಗತಿಶೀಲ ಕವಿ ಸಾಹಿತಿಯಾಗಿ ಕರೆದುಕೊಂಡ ಗುರುತಿಸಿಕೊಂಡ ಹಿನ್ನಲೆಯಲ್ಲಿ ಪ್ರಗತಿಶೀಲ ಬಂಡಾಯ ಸಾಹಿತ್ಯ ಚಳುವಳಿಯ ಭಾಗವಾಗಿ ಮುಂಚೂಣಿಯಲ್ಲಿ ನಿಂತು ಸಾಹಿತ್ಯ ರಚನೆಯೊಂದಿಗೆ ಸಂಘಟನೆಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಿನ್ನಲೆಯಾಗಿ ಒಟ್ಟಾರೆ ಈ ನಾಡಿನ ಪ್ರಗತಿಶೀಲ ಸಾಹಿತ್ಯ ಪ್ರಗತಿಪಂಥ ನಡೆದ ಬಂದ ದಾರಿಯ ಅವಲೋಕನ ಓದುಗರಿಗೆ ನೀಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಮಹಾಲಿಂಗ ಮಂಗಿಯವರ ಅಷ್ಟು ಕಾವ್ಯ ಸಂಕಲನಗಳು ಅದರಲ್ಲಿ ೧) ಹಕ್ಕಿಗಳೇಕೆ ಸಾಯುತ್ತೀವೆ? ೨) ನನ್ನ ನೆಲದ ಭ್ರೂಣಗಳು ೩) ಕರ್ಮವೀರರ ಹಾಡು ೪) ನನ್ನ ಭಾರತ ಮಹಾನ ೫) ಅನುರಾಗ ೬) ದಿಲ್ಲಿ ದೂರವಿಲ್ಲ ಜೊತೆಗೆ ತಡಸಲ ಮಹಾಲಿಂಗನ ವಚನಗಳು ವಸ್ತು ವಿಷಯ ಪ್ರಕಟನೆ ಪ್ರಕಾಶನ ವಿವರಗಳೊಂದಿಗೆ ಕೃತಿ ಪರಿಚಯ ಮಾಡಿಕೊಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಮಹತ್ವದ ಅಧ್ಯಯನ 'ಮಹಾಲಿಂಗ ಮಂಗಿ'ಯವರ ಕಾವ್ಯ ಧೋರಣೆ ಈ ವಿಭಾಗದಲ್ಲಿ ಕವಿಯ ಸಾಮಾಜಿಕ ಕಳಕಳಿ, ಸಾಮಾಜಿಕ ನ್ಯಾಯ, ಸರ್ವರಿಗೂ ಸಮಬಾಳು, ಸರ್ವವರಿಗೂ ಸಮಪಾಲು, ಸಮಾಜವಾದ, ಸಮತಾವಾದದ ಶೋಷಿತ ಶ್ರಮಿಕರ ಪರವಾದ ನಿಲುವು, ಧೋರಣೆಗಳನ್ನು ಸಾಧ್ಯಂತವಾಗಿ ಸವಿವರವಾಗಿ ಮನದಟ್ಟಾಗುವಂತೆ ನಿರೂಪಿಸಲಾಗಿದೆ. ಕವಿತೆಗಳ ವಸ್ತು ನಿರೂಪಣೆ ಅದರ ಉದ್ದೇಶ ಸಂದೇಶಗಳನ್ನು ಕಾವ್ಯದ ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ.

ಜಾತಿ, ಮತ, ಭೇದ ಅಳುಕಿಸಿ । ಹೊಸ ದೇಶ ಕಟ್ಟುವೆವು. ದೀನ ದಲಿತರ ಕರಗಿಸಿ । ಸಮತೆಯ ಸ್ವರಾಜ್ಯ ತರುವೆವು.

ಎಲ್ಲ ಜೀವಿಗಳ ಬದುಕು ಹಸನಾಗಬೇಕು. ಅಸಮಾನತೆ ಅಸ್ಪೃಶ್ಯತೆ ಶೋಷಣೆಯಿಂದ ವಿಮುಕ್ತಿಸಬೇಕು. ಎಲ್ಲರಿಗೂ ಬದುಕಿನ ಹಕ್ಕು, ನ್ಯಾಯ, ಸಮಾನತೆಗಳು ಸಿಗಬೇಕೆಂಬುದೇ ಕವಿ ಕಾವ್ಯದ ಆಶಯವಾಗಿದೆ. ನಮ್ಮ ಮೇಲಿನ ಅನ್ಯಾಯ ದೌರ್ಜನ್ಯಗಳಿಗೆ ನಮ್ಮ ಅಜ್ಞಾನ ಆಲಸ್ಯ. ದೌರ್ಬಲ್ಯದಾಸ್ಯ, ಅಸಂಘಟನೆಗಳು ಅಷ್ಟೇ ಕಾರಣವೆಂಬುವುದರ ಕಡೆಗೂ ಲಕ್ಷ ಸೆಳೆಯುತ್ತಾರೆ. ಪ್ರಗತಿಶೀಲ ಕವಿಯಾಗಿ ಕಾರ್ಮಿಕ ಚಳುವಳಿಯ ಹೋರಾಟಗಾರನಾಗಿ ಕವಿಯ ಆಶಯ ಆದರ್ಶ ಉದ್ದೇಶಗಳನ್ನು ಸಂದೇಶಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಲಾಗಿದೆ.

ಅಧ್ಯಾಯ ಐದರಲ್ಲಿ ಮಹಾಲಿಂಗ ಮಂಗಿಯವರ ಕಾವ್ಯದ ವೈಶಿಷ್ಟ್ಯತೆ ವಿಭಾಗದಲ್ಲಿ ಮಹಾಲಿಂಗ ಮಂಗಿಯವರ ಕಾವ್ಯ ವಿಶೇಷತೆಗಳನ್ನು ತೌಲನಿಕವಾಗಿಸಲಾಗಿದೆ. ಶೋಷಿತರ ಪರವಾಗಿ, ಶ್ರಮಿಕರ ಪರವಾಗಿ, ಅನ್ಯರು ಬರೆಯುವುದಕ್ಕೂ ಸ್ವಂತದ ಶೋಷಿತ ಶ್ರಮಿಕ ಸಮುದಾಯದ ಪ್ರತಿನಿಧಿ ಸ್ವಾನುಭವದಿಂದ ನಿರಾಸೆಗಳು ಅಕ್ಷರಗೊಂಡಾಗ ಅಧಿಕೃತತೆ ಲಭಿಸುತ್ತದೆ. ಕಾವ್ಯಕ್ಕೆ ಹೊಸ ಕಸುವು ಲಭಿಸುತ್ತದೆ.

ಶ್ರಮಿಕರು ಬಸಿದ ಬೆವರಿಗೆ ಸುರಿದ ರಕ್ತಕ್ಕೆ ಬೆಲೆ ಬಾರದಿದ್ದಾಗ ಶೋಷಿತ ಕವಿ ಶೋಷವೇಶದಿಂದ ಸಿಟ್ಟು ಬೆಂಕಿಯಾಗಿ ಸಿಡಿಯಲೂಬಹುದು. ಆಸಾತ್ವಿಕ ಆಕ್ರೋಶಕ್ಕೆ ಕಾರಣಗಳಿವೆ. ಮಂಗಿಯವರಿಗೆ ಹೇಗೆ ಬರೆಯಬೇಕೆಂಬುದಕ್ಕಿಂತ ಏನು ಬರೆಯಬೇಕೆಂಬುದು ಮುಖ್ಯವಾಗಿದೆ. ಅವರಿಗೆ ಕಾವ್ಯ ಕಲೆಗಿಂತ ಬದುಕು, ವಾಸ್ತವ್ಯ, ಸಮುದಾಯದ ಸೌಖ್ಯ ಮುಖ್ಯವಾಗಿದೆ. ಅವರು ವಿದ್ವಾಂಸರು ವಿಮರ್ಶಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾವ್ಯ ಹೊಸೆಯುತ್ತಿಲ್ಲ. ದೀನ ದಲಿತ ರೈತ ಕಾರ್ಮಿಕ ಹಿಂದುಳಿದ ಶೋಷಿತ ಜನ, ಸಾಮಾನ್ಯ ವರ್ಗವನ್ನು ಗುರಿಯಾಗಿಟ್ಟುಕೊಂಡು ಬರೆಯುತ್ತಾರೆ. ಇಲ್ಲಿಯ ಕವಿತೆಗಳು ಅದಕ್ಕಾಗಿ ಅಲಂಕಾರಕ್ಕಾಗಿ ಕೇವಲ ರಂಜನೆಗಾಗಿ ಬರೆದವುಗಳಲ್ಲಿ ಸ್ವಂತದ ಜೀವಾನುಭವ ದಾರುಣ ದರ್ಶನವಿದೆ. ಹೋರಾಟದ ಕಾವು ಕೆಚ್ಚಿದೆ. ಸವಾಲುಗಳಿವೆ. ಪದ ಪದದಲ್ಲೂ ಪಟ್ಟಭದ್ರ ಹಿತಾಶಕ್ತಿ ಶೋಷಿಕರ ವಿರುದ್ಧ ನಿಟ್ಟುಸಿರು ರೋಷ ರೊಚ್ಚು ರಾಚುತ್ತದೆ.

ಇದೊಂದು ಅಪ್ಪಟ 'ಮಾನವೀಯ ಕಾವ್ಯ' ಮಾನವೀಯ ಮೌಲ್ಯಗಳ ದರ್ಶನ ಕಾವ್ಯದೂದ್ದಕ್ಕು ಕಾಣುತ್ತೇವೆ. ಪ್ರಗತಿಶೀಲ ಪ್ರಯೋಗಶೀಲ ಮನೋಧರ್ಮದೊಂದಿಗೆ ಅಕ್ಷರ ಜ್ಞಾನ ಪರಿಸರ ಪ್ರಜ್ಞೆ. ಅನುಭವದ ಅನುರಾಗ ದೃಷ್ಟಿಯಿಂದಲೂ ಇದೊಂದು ಸಫಲ ಕಾವ್ಯವಾಗಿ ಮನಗಾಣುತ್ತದೆ.

ಕಾವ್ಯದ ವಸ್ತು ನಿರೂಪಣೆ ಸತ್ವ ಶಕ್ತಿಯೊಂದಿಗೆ ಗೋಕಾವಿ ನೆಲದ ಭಾಷೆಯ ಮೇಲಿನ ಪ್ರಭುತ್ವ ಪ್ರಯೋಗ ದೇಶಿ ಆಡುನುಡಿಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳುವ ಕವಿಯ ಪ್ರತಿಭಾವಿಶೇಷವೇ ಆಗಿದೆ. ಒಂದಷ್ಟು ವಾಚ್ಯವೆನಿಸಿದರೂ ನೇರ ದಿಟ್ಟ ಪ್ರಾಯೋಗಿಕ ನಿರೂಪಣೆ ನಿರೀಕ್ಷಿತ ನಿಶ್ಚಿತ ಪರಿಣಾಮ ನೀಡುತ್ತದೆ. ಪ್ರಗತಿಶೀಲ ಕಾವ್ಯದಷ್ಟೇ ಅನುರಾಗ ಕಾವ್ಯ. ಅನುಭಾವ ಕಾವ್ಯವು ಗಮನಾರ್ಹ ಜೊತೆಗೆ ಕವಿ ಕಾವ್ಯ ಅಭ್ಯಾಸ ಅನುಭವಗಳ ಇತಿಮಿತಿಗಳ ಕಡೆಗೂ ಗಮನ ಸೆಳೆದಿದ್ದೇನೆ.

ಜೊತೆಗೆ ಕವಿ ಕಾವ್ಯ ಅಭ್ಯಾಸ ಅನುಭವಗಳ ಇತಿಮಿತಿಗಳ ಕಡೆಗೂ ಗಮನ ಸೆಳೆದಿದ್ದೇನೆ. ಮಂಗಿಯವರ ಕಾವ್ಯದ ವೈಶಿಷ್ಟ್ಯತೆಯಿಂದಲೆ ತೀರ ಸ್ವಂತ ಅನುಭವಗಳನ್ನು ಸಾರ್ವತ್ರಿಕಗೊಳಿಸಿ, ಇಡೀ ಸಮಾಜದ ಅಳಲನ್ನು ಆವರಿಸಿಕೊಳ್ಳುವುದು. ಸಮುದಾಯದ ಪ್ರಾತಿನಿಧಿಕ ಪ್ರತಿಬಿಂಬವಾಗಿ

ನಿಲ್ಲುವುದು. ಬದುಕು ಬರಹದಲ್ಲಿರುವ ಕವಿಯ ಸಮನ್ವಯತೆ ಜೀವನ ಪ್ರೀತಿ, ಸುವ್ಯವಸ್ಥಿತ ಸಮಾಜ ನಿರ್ಮಾಣದ ಚಿಂತನೆಗಳಾಗಿವೆ. ಪ್ರಗತಿಶೀಲ ಸರ್ವೋದಯ ಸಿದ್ಧಾಂತಗಳಿಗೆ ಹೊಸ ಅರ್ಥ ಭಾಷೆ ನೀಡುವ ಮಹಾಲಿಂಗ ಮಂಗಿಯವರಿಗೆ ಕನ್ನಡ ಕಾವ್ಯ ಪರಿಸರದಲ್ಲಿ ವಿಶಿಷ್ಟ ಸ್ಥಾನವಿದೆ.

'ಮನೆ ನೋಡಾ ಬಡವರು – ಗುಣ ನೋಡಾ ಸರ್ವಾಂಕಲಿಗಳ' ಎಂಬಂತೆ ಅವರದು ಮಹಾಮನೆ ಅತಿಥಿ – ಅಭಾಗ್ಯತರಿಗೆ ಆಧಾರತಿಥ್ಯಕ್ಕೆಂದೂ ಕೊರತೆಯಿಲ್ಲ.

೪೪ ವಿಷಯಗಳ ಅಖಂಡ ಸೇವೆಯಿಂದ ೦೪–೧೦–೨೦೧೦ ರಂದು ನಿವೃತ್ತರಾದರು. ಆದರೆ ಸಾಹಿತ್ಯದ ಸರ್ವಸಾಚಿಗೆ ಸಾಮಾಜಿಕ ಕಾರ್ಯಕರ್ತನಿಗೆಲ್ಲಿಯ ನಿವೃತ್ತಿ, ವಿಶ್ರಾಂತಿ. ಈಗಲೂ ಬಿಡುವಿಲ್ಲದ ದಿನಚರಿ ಅವರದು. ಮಸ್ತಕಗಳೇ ಅವರ ನೆಚ್ಚಿನ ಸಂಗಾತಿಗಳು ಮನೆಯಲ್ಲಿ ಮಸ್ತಕಗಳ ಭಂಡಾರವಿದೆ. ಚಿತ್ರಕಲೆ ಕೈ ಬಿಟ್ಟ ದಶಕಗಳೇ ಉರುಳಿವೆ. ೨೦೧೧ ರಲ್ಲಿ 'ಜೋಕುಮಾರ ಸ್ವಾಮಿ' ನಾಟಕದ ಕೆಲವು ಪ್ರಯೋಗ ಮಾಡಿದರು. ಅದಕ್ಕೂ ಬಹುತೇಕ ಕೊನೆ ನಮಸ್ಕಾರ ಹೇಳಿದರಂತೆ. ನಾಟಕದ ಇವೆಲ್ಲ ತಪ್ಪದ ಕಾರ್ಯ ಸಾಧನೆ. ಕಲಾವಿದರನ್ನು ತಾಲಮಗೇ ಸೇರಿಸುವುದೇ ಸಮಸ್ಯೆ. ಅದಕ್ಕಾಗಿ ಅವರು ನೆಚ್ಚಿಕೊಂಡಿದ್ದು ಓದು ಬರಹದಲ್ಲಿ. ಮಸ್ತಕ ಬರಹ ಸರಳ ಕಾರ್ಯ ಪ್ರಕಾಶಕರು ದುಂಬಾಲು ಬಿದ್ದು ಪ್ರಕಾಶನಗೊಳಿಸುವುದರೊಂದಿಗೆ ಅದು ಸಸಾರವಾಗಿದೆ. ಗಿರಣಿ ಕಾರ್ಮಿಕ ಚಟುವಟಿಕೆಯೊಂದಿಗೆ ಈಗಲೂ ನಿಕಟವಾದ ಸಂಬಂಧವಿದೆ.

ಮಹಾಲಿಂಗ ಮಂಗಿಯವರ ಸಾಹಿತ್ಯ ಸಾಧನೆ ಕುರಿತು ಸಾಕಷ್ಟು ವಿವರವಾಗಿ ವಿವೇಚಿಸಲಾಗಿದೆ. ಅವರನ್ನು ಕ್ರಿಯಾಶೀಲರಾಗಿದದು ಅವರ ಲೇಖನಿಯರ ಇನ್ನೂ ಮಹತ್ವದ ಸಾಹಿತ್ಯ ಕೃತಿಗಳು ಮೂಡಿ ಬರಲೆಂದು ಹಾರೈಸಬಹುದಾಗಿದೆ.

೬.೩ ಸಮಾರೋಪ :

ಮಹಾಲಿಂಗ ಮಂಗಿಯವರ ಕಾವ್ಯ ವಸ್ತುವಿನ ದೃಷ್ಟಿಯಿಂದ ವೈವಿಧ್ಯಮಯವಾಗಿದೆ. ಕಾರ್ಮಿಕರ ನೋವು, ಕೂಲಿಗಳ ಅಳಲು ಯಥಾವತ್ತಾಗಿ ದಾಖಲುಗೊಂಡಿವೆ. ನೋವಿನಲ್ಲಿಯೂ ನಗುವ, ಸಂಕಟದಲ್ಲಿಯೂ ಸಂಯಮ ಕಾಯ್ದುಕೊಳ್ಳುವ, ಬದುಕಿನ ಘೋರ ನಿರಾಸೆಯಲ್ಲಿಯೂ ಜೀವನ ಪ್ರೀತಿ ಕಳೆದುಕೊಳ್ಳದ ಮಂಗಿಯವರ ಕಾವ್ಯ ಚೇತೋಹಾರಿಯಾಗಿದೆ. ನೋವು–ನಿರಾಸೆಗಳನ್ನು ಹೊಡೆದೊಡಿಸಿ ಬದುಕಿನಲ್ಲಿ ಶ್ರದ್ಧೆಯಿರಿಸುವುದು ಗಮನಾರ್ಹವಾಗಿದೆ. ವಿಧಿ ಅಥವಾ ಹಣೆಬರಹವೆಂದು ಬದುಕಿಗೆ ವಿಮುಖವಾಗಿ, ಪಲಾಯನವಾದಿಯಾಗಿದೆ. ಈಸಬೇಕು ಇದ್ದು ಜಯಿಸಬೇಕೆಂಬ ತತ್ವ ಪಾಲಿಸಿದ್ದು ಮಹತ್ತರವಾಗಿದೆ. ಪ್ರಗಿತಿಪಂಥದ ಆಶಯಕ್ಕನುಸಾರವಾಗಿ ಕಾವ್ಯಕಟ್ಟಿದ್ದು, ದಲಿತ ಬಂಡಾಯ ಚಳುವಳಿಗಳ

ಅಕ್ಷರ ಮತ್ತು ಕ್ರಿಯೆ ಎರಡರಲ್ಲೂ ಸಕ್ರೀಯವಾಗಿ ಪಾಲುಗೊಂಡು ಕಾವ್ಯರಚಿಸಿದ್ದು ವಿಶೇಷತೆಯಾಗಿದೆ. ಅಪ್ಪಟ ಗ್ರಾಮೀಣ ಪರಿಸರದಲ್ಲಿ ಬಾಳಿದ, ನಗರದ ಪ್ರಚಾರಗಳಿಂದ ದೂರವಿರುವ, ಕೀರ್ತಿ ವಾರ್ತೆಗಳಿಗೆ, ಪ್ರಶಸ್ತಿ, ಪುರಸ್ಕಾರಗಳಿಗೆ ಹಾತೊರೆಯದೆ ತಮ್ಮ ಪಾಡಿಗೆ ತಾವಿದ್ದು, ಸಾಹಿತ್ಯ ಸೃಷ್ಟಿಸಿದ ಮಂಗಿಯವರ ಕಾವ್ಯವನ್ನು ಅಧ್ಯಯನಿಸುವುದೆಂದರೆ, ಇಡೀ ಗ್ರಾಮೀಣ ಪ್ರತಿಭೆಯನ್ನು ಅಧ್ಯಯನಿಸಿದಂತೆ. ಉಪೇಕ್ಷೆಗೊಳಗಾದ, ಮುಖ್ಯ ಧಾರೆಯಿಂದ ಹೊರಗುಳಿದ ಕವಿಯನ್ನು ಅಧ್ಯಯನಿಸುವ, ಅವರ ಕಾವ್ಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಬಗೆಯಿದು. ಮಂಗಿಯವರ ಕಾವ್ಯದ ವಿಶಿಷ್ಟ್ಯತೆಗಳನ್ನು ಇದರಲ್ಲಿ ದಾಖಲಿಸಲಾಗಿದೆ. ಮಿತಿಗಳನ್ನು ಗುರುತಿಸಲಾಗಿದೆ. ಇದು ಕೇವಲ ಕಾವ್ಯದ ಅಧ್ಯಯನವಾಗಿದೆ. ಅವರ ಸಮಗ್ರ ಸಾಹಿತ್ಯದ ವಿಭಿನ್ನ ನೆಲೆಗಳ ಕುರಿತಾಗಿ ಪೂರ್ಣ ಪ್ರಮಾಣದ ಅಧ್ಯಯನ ಇನ್ನೂ ಆಗಬೇಕಾಗಿದೆ.

ಅನುಬಂಧಗಳು

ಮಹಾಲಿಂಗ ಮಂಗಿಯವರ ಸಾಹಿತ್ಯ

ಅ.ನಂ	ಹೆಸರು	ಪ್ರಕಾಶಕರು	ಪ್ರ.ವರ್ಷ.
೧)	ಕನಸ್ಸೆಂಬ ಭ್ರಮೆಯ ಬೆನ್ನೇರಿ (ಲೇಖನಗಳು)	ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು	೨೦೧೧
೨)	ಅಭಿವ್ಯಕ್ತಿ (ಆತ್ಮಕಥೆ)	ಎಸ್.ಎಲ್.ಎನ್. ಪಬ್ಲಿಷಿಂಗ ಹೌಸ, ಬೆಂಗಳೂರು.	೨೦೦೯
೩)	ನಮ್ಮೊಳಗಿನ ನಾನು (ವೈಚಾರಿಕ ಲೇಖನಗಳು)	ಸಹನಾ ಪ್ರಕಾಶನ, ಬೆಂಗಳೂರು.	೨೦೦೯
೪)	ಜಾನಪದ – ಜೀವನ – ಸಂವಾದ (ಆಯ್ದ ಪ್ರಬಂಧಗಳು)	ಶ್ರೀ ಭುವನೇಶ್ವರಿ ಪ್ರಕಾಶನ, ಘಟಪ್ರಬಾ.	೧೯೯೫
೫)	ಪಯಣ	ಎಸ್.ಎಲ್.ಎನ್. ಪಬ್ಲಿಷಿಂಗ ಹೌಸ, ಬೆಂಗಳೂರು.	೨೦೧೦
೬)	ನಮ್ಮ ಗೋಕಾವಿ	ಪ್ರತಿಭಾ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಬೆಂಗಳೂರು.	೨೦೦೮
೭)	ಪ್ರಸ್ಥ	ಎಸ್.ಎಲ್.ಎನ್. ಪಬ್ಲಿಷಿಂಗ ಹೌಸ, ಬೆಂಗಳೂರು.	೨೦೧೦

ಮಹಾಲಿಂಗ ಮಂಗಿಯವರ ಕಾವ್ಯ

ಅ.ನಂ	ಹೆಸರು	ಪ್ರಕಾಶಕರು	ಪ್ರ.ವರ್ಷ.
೧)	ಹಕ್ಕಿಗಳೇಕೆ ಸಾಯುತ್ತಿವೆ!	ಯುವ ಪ್ರಜ್ಞ ಪಬ್ಲಕೇಷನ್ಸ, ಹುಬ್ಬಳ್ಳಿ.	೧೯೭೯
೨)	ನನ್ನ ನೆಲದ ಭ್ರೂಣಗಳು	ಭುವನೇಶ್ವರಿ ಪ್ರಕಾಶನ, ಘಟಪ್ರಭಾ.	೧೯೮೩
೩)	ಕರ್ಮವೀರರ ಹಾಡು	ಮೈತ್ರಿ ಪ್ರಕಾಶನ, ಗೋಕಾಕ	೧೯೮೩
೪)	ಅನುರಾಗ	ಸಂಘರ್ಷ ಸಾಹಿತ್ಯಕೂಟ, ರಾಯಬಾಗ.	೧೯೮೬
೫)	ನನ್ನ ಭಾರತ ಮಹಾನ್	ಭುವನೇಶ್ವರಿ ಪ್ರಕಾಶನ, ಗೋಕಾಕ	೨೦೦೦
೬)	ದಿಲ್ಲಿ ದೂರವಿಲ್ಲ	ಕಿಕ್ಕೇರಿ ಪಬ್ಲಿಕೇಷನ್ಸ, ಬೆಂಗಳೂರು	೨೦೦೮
೭)	ತಡಸಲ ಮಹಾಲಿಂಗನ ವಚನಗಳು	ಕಿಕ್ಕೇರಿ ಪಬ್ಲಿಕೇಷನ್ಸ, ಬೆಂಗಳೂರು	೨೦೦೮
೮)	ಮುತ್ತಿನ ತೋರಣ (ಸಮಗ್ರ ಕಾವ್ಯ ಇತರರೊಂದಿಗೆ ಸಂಪಾದಿತ ಕಾವ್ಯ)	ಕಿಕ್ಕೇರಿ ಪಬ್ಲಿಕೇಷನ್ಸ, ಬೆಂಗಳೂರು	೨೦೧೦
೯)	ಗೋಕಾವಿ ನಾಡಿನ ಪ್ರಾತಿನಿಧಿಕ ಕವನ ಸಂಕಲನ 'ಸಮುದಾಯ'	ಪ್ರಗತಿಶೀಲ ಬರಹಗಾರರ ಬಳಗ	೧೯೭೯
೧೦)	ದಿ. ಕೃಷ್ಣಮೂರ್ತಿ ಪುರಾಣಿಕ ಗೌರವಾರ್ಥ 'ಸ್ಮೃತಿ'	ಗಂಗಾತರಂಗ ಪ್ರಕಾಶನ, ಗೋಕಾಕ	೧೯೮೬

ಪರಾಮರ್ಶನ ಗ್ರಂಥಗಳು

೧) ಹೊಸಗನ್ನಡ ಸಾಹಿತ್ಯ ಚರಿತ್ರೆ – ಪ್ರೊ. ಎಲ್. ಎಸ್. ಶೇಷಗಿರಿರಾವ

೨) ಐಚ್ಛಿಕ ಕನ್ನಡ – ಪ್ರೊ. ಮಾಲಿಮುದ್ದಣ

೩) ಹಕ್ಕಿಗಳೇಕೆ ಸಾಯುತ್ತಿವೆ ಮುನ್ನುಡಿ – ರಮೇಶ ಧಾನವಾಡಕಾರ

೪) ದಿಲ್ಲಿ ದೂರವಿಲ್ಲ ಮುನ್ನುಡಿ – ಭುವನೇಶ್ವರಿ ಚೇತನ

೫) ಕಾರ್ಮಿಕರ ಪುರೋಭಿವೃದ್ಧಿ – ಕಾರ್ಮಿಕರ ಪುರೋಭಿವೃದ್ಧಿ (ಬಾನುಲಿ ಭಾಷಣಗಳು)

೬) ಮಹಾಲಿಂಗ ಮಂಗಿಯವರ ಕುರಿತು ಪತ್ರಿಕಾ ಲೇಖನ ವಿಮರ್ಶೆಗಳು

೭) ಕರ್ಮವೀರರ ಹಾಡು ಬೆನ್ನುಡಿಯಿಂದ – ಎಂ. ಆರ್. ದೊರೆಸ್ವಾಮಿ

೮) ಡಾ॥ ಬುದ್ಧಣ್ಣ ಹಿಂಗಮಿರೆ – ಸಂಯುಕ್ತ ಕರ್ನಾಟಕ ವಿಮರ್ಶೆ

೯) ಕನ್ನಡಮ್ಮಾ ವಿಮರ್ಶೆ – ವೆಂಕಟ ಸುಬ್ಬಯ್ಯಾ

೧೦) ಒಂದು ಸರಿಚ್ಚೆ – ಡಾ॥ ನಿಂಗಣ್ಣ ಸಣ್ಣಕ್ಕಿ

೧೧) ಅನುರಾಗ ಮುನ್ನುಡಿ – ಡಾ॥ ಸಿದ್ದಲಿಂಗ ಪಟ್ಟಣಶೆಟ್ಟಿ

೧೨) ಪ್ರೊ. ಬಿ. ಆರ್. ಪೋಲಿಸ ಪಾಟೀಲ – ಪತ್ರಿಕಾ ವಿಮರ್ಶೆ

೧೩) ನನ್ನ ಭಾರತ ಮಹಾನ್ ನಲ್ನುಡಿ – ಪ್ರೊ. ಚಂದ್ರಶೇಖರ ಅಕ್ಕಿ

೧೪) ನಾಡೋಜ ವಿಮರ್ಶೆ – ಶ್ರೀ ಎಲ್. ಎಸ್. ಶಾಸ್ತ್ರೀ

೧೫) ಪ್ರೊ. ರಾಘವೆಂದ್ರ ಪಾಟೀಲ ಖ್ಯಾತ ಕಥೆಗಾರರು.

೧೬) ಕನ್ನಡ ಸಾಹಿತ್ಯ ಚರಿತ್ರೆ – ತ. ಸಂ. ಶ್ಯಾಮರಾವ

೧೭) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ.೧ – ಡಾ. ಜಿ. ಎಸ್. ಎಸ್.

೧೮) ಗೋಕಾವಿ ಪರಿಸರ ಸಂ. – ಶ್ರೀ ಚಂದ್ರಶೇಖರ ಅಕ್ಕಿ, ಶ್ರೀ ಮಹಾಲಿಂಗ ಮಂಗಿ

೧೯) ಹೊಸಗನ್ನಡ ಸಾಹಿತ್ಯದ ರೂಪುಗಳು – ಡಾ. ವೀರಣ್ಣ ರಾಜೂರ, ಡಾ. ಬಿ. ಆರ್. ಹಿರೇಮಠ

೨೦) ರಸಾಲ – ಡಾ. ವ್ಹಿ. ಎಸ್. ಮಾಳಿ

೨೧) ಅಮೃತದ ಬೆಳಕು – ಡಾ. ವ್ಹಿ. ಎಸ್. ಮಾಳಿ

೨೨) ಮರಾಳ – ಡಾ. ವ್ಹಿ. ಎಸ್. ಮಾಳಿ

೨೩) ಕನ್ನಡ ಸಾಹಿತ್ಯದಲ್ಲಿ ಕರ್ಣ – ಡಾ. ವ್ಹಿ. ಎಸ್. ಮಾಳಿ

೨೪) ಕನ್ನಡ ಸಾಹಿತ್ಯದಲ್ಲಿ ಏಕಲವ್ಯ – ಡಾ. ಅಶೋಕ ಎಮ್. ನರೋಡೆ

೨೫) ಕನ್ನಡ ಕಾವ್ಯ ಸಂಗತಿ – ಡಾ. ಅಶೋಕ ಎಮ್. ನರೋಡೆ

೨೬) ಸಮಕಾಲೀನ – ಡಾ. ಅಶೋಕ ಎಮ್. ನರೋಡೆ

೨೭) ಪ್ರಚಲಿತ – ಡಾ. ಅಶೋಕ ಎಮ್. ನರೋಡೆ

೨೮) ಪುಸ್ತಕ ಪ್ರೀತಿ – ಡಾ. ಟಿ. ಪಿ. ಅಶೋಕ


೨೯) ಗೀರುಗಳು – ಶ್ರೀ ಶಿವಾನಂದ ಬೆಳಕೂಡ

೩೦) ಪ್ರಗತಿಶೀಲ ಸಾಹಿತ್ಯ (ಸಂ) – ಡಾ. ಅಶೋಕ ಶೆಟ್ಟರ

೩೧) ಸಂಕ್ರಮಣ ಕಾವ್ಯ ಸಮೀಕ್ಷೆ (ಸಂ) – ಚಂಪಾ

೩೨) ಬೆಳ್ಳಿ ತೇರಿನ ದಾರಿ (ಸಂ) – ಡಾ. ಜಿ. ಎಸ್. ಕಾಪಸೆ

ಭಾವಚಿತ್ರಗಳು



ಮಹಾಲಿಂಗ ಮಂಗಿ






Hanging Bridge





AKSHARA GRANTHALAYA
ACC.NO. 048751

048751